# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 29 ಸೋಮವಾರ 2022

₹4

ಸಂಪುಟ: 43 | ಸಂಚಿಕೆ: 134 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com




# ಗಣೇಶ ಮೂರ್ತಿ ತಯಾರಕ ಕಲಾವಿದರಿಗೆ ಸನ್ಮಾನ



ಮೈಸೂರು, ಆ.28(ಆರ್‌ಕೆಬಿ)– ಮೈಸೂರಿನ ಕುಂಬಾರಗೇರಿಯಲ್ಲಿ ಕಳೆದ 40 ವರ್ಷದಿಂದ ಗಣೇಶ ಮತ್ತು ಗೌರಿ ಮೂರ್ತಿಗಳನ್ನು ತಯಾರಿಸುತ್ತಿರುವ ಮೂರ್ತಿ ತಯಾರಕ ಕಲಾವಿದರಾದ ಶಂಕರಮ್ಮ ಶ್ರೀನಿವಾಸಮೂರ್ತಿ, ವಿ.ವೆಂಕಟಮ್ಮ, ಶಾಂತಮ್ಮ, ನಿಂಗಮ್ಮ, ಶಾರದಾ, ಶಾರದಮ್ಮ ಅವರನ್ನು ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.

ಸನ್ಮಾನಿಸಿದ ಬಳಿಕ ಮಾತನಾಡಿದ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಗಣೇಶ್ ವಿಗ್ರಹಗಳ ತಯಾರಿಕೆ ಹಾಗೂ ಮಾರಾಟವನ್ನೇ ನಂಬಿ ಬದುಕು ನಡೆಸುತ್ತಿರುವ ಹಲವು ಕುಟುಂಬಗಳು ಇಂದು ಚಿಂತಾಕ್ರಾಂತರಾಗಿದ್ದಾರೆ. ಕಳೆದ ಎರಡು ವರ್ಷ ಕೋವಿಡ್‌ನಿಂದಾಗಿ ವಿಗ್ರಹ ತಯಾರಕರು ಹಾಗೂ ಮಾರಾಟಗಾರರ ಬದುಕು ಅಸ್ತವ್ಯಸ್ತವಾಗಿತ್ತು. ಹಾಗಾಗಿ ಸರ್ಕಾರ ಗಣೇಶ ವಿಗ್ರಹ ತಯಾರಕ ಕಲಾವಿದರಿಗೆ ವಿಶೇಷ ಸಹಾಯಧನ ನೀಡಿ, ಅವರ ಹಿತ ಕಾಪಾಡಬೇಕು. ಅಂತಹ ಕಲಾವಿದರನ್ನು ಗುರುತಿಸಿ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಮನವಿ ಮಾಡಿದರು.

ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಮಾತನಾಡಿ, ಇಂದಿನ ಮಕ್ಕಳು ಮಣ್ಣು, ಪ್ರಕೃತಿಯ ಜೊತೆಗೆ ಬೆರೆಯುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಗಣೇಶ್ ಹಬ್ಬದ ಸಂದರ್ಭದಲ್ಲಿ ಪರಿಸರ ಸ್ನೇಹಿ ಗಣಪನನ್ನೇ ಮನೆಯಲ್ಲಿಟ್ಟು ಪೂಜಿಸಿದರೆ ಪ್ರಕೃತಿಗೆ ಯಾವುದೇ ತೊಂದರೆಯಿಲ್ಲ. ಪಿಓಪಿಯಲ್ಲಿ ತಯಾರಿಸಿದ ಗಣೇಶ ವಿಗ್ರಹಗಳಿಂದ ಪರಿಸರಕ್ಕೆ ಹಾನಿಯಾಗುವ ಪಿಒಪಿ ಗಣೇಶ ವಿಗ್ರಹಗಳಿಗೆ ಬದಲಾಗಿ ಮಣ್ಣಿನಿಂದ ತಯಾರಿಸಿದ ಗಣಪತಿಯನ್ನೇ ಮನೆಯಲ್ಲಿ ಪ್ರತಿಷ್ಠಾಪಿಸಿ, ಪರಿಸರ ಸ್ನೇಹಿ ಗಣೇಶನನ್ನೇ ಬಳಸುವಂತೆ ಪ್ರೇರೇಪಿಸಬೇಕಿದೆ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಎನ್.ರಾಜೇಶ್, ರೇವಣ್ಣ, ಬಾಬಣ್ಣ, ಸೀನ, ಸತೀಶ್, ಪೃಥ್ವಿ ಸಿಂಗ್ ಚಂದ್ರಾವತ್, ಭೀಮರಾಜ್ ಪರಿಯಾರ್, ಪಂಕಜ್ ಪಾರೀಕ್ ಇನ್ನಿತರರು ಉಪಸ್ಥಿತರಿದ್ದರು.

### ಅಕ್ರಮ ನೇಮಕಾತಿ ಆರೋಪ

# ಆರ್‌ಎಂಪಿಯಿಂದ 103 ಸಿಬ್ಬಂದಿ ವಜಾ

**ಕೆಲವು ಅಧಿಕಾರಿಗಳ ತಲೆದಂಡ, ಮತ್ತಷ್ಟು ಮಂದಿಗೆ ಶಿಕ್ಷಾರ್ಹ ವರ್ಗ**

ಮೈಸೂರು,ಆ.28(ಎಂಟಿವೈ)–ಮೈಸೂರಿನ ಬಾಬಾ ಅಣು ಸಂಶೋಧನಾ (ಆರ್‌ಎಂಪಿ) ಕೇಂದ್ರದಲ್ಲಿ ವಿವಿಧ ಹುದ್ದೆಗಳಿಗೆ ಕಳೆದ 4 ವರ್ಷಗಳ ಹಿಂದೆ ನಡೆದಿದ್ದ ನೇಮಕಾತಿಯಲ್ಲಿ ಅಕ್ರಮ ನಡೆದಿರುವುದು ತನಿಖೆಯಲ್ಲಿ ಸಾಬೀತಾದ ಹಿನ್ನೆಲೆಯಲ್ಲಿ, ವಾಮಮಾರ್ಗದಲ್ಲಿ ಕೆಲಸಕ್ಕೆ ಸೇರಿದ್ದ 103 ಮಂದಿಯನ್ನು ಕೆಲಸದಿಂದ ವಜಾಗೊಳಿಸಲಾಗಿದ್ದು, ಅಕ್ರಮಕ್ಕೆ ಸಾಥ್ ನೀಡಿದ ಕೆಲವು ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗಿದೆ.

2018ರಲ್ಲಿ ಮೈಸೂರಿನ ಆರ್‌ಎಂಪಿ ಕೇಂದ್ರದ ವಿವಿಧ ವಿಭಾಗಗಳ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಈ ವೇಳೆ ಅಕ್ರಮ ನಡೆದಿರುವ ಸುಳಿವು ಪಡೆದು ಪ್ರಾಥಮಿಕ ತನಿಖೆ ನಡೆಸಿದ ಸಂಸ್ಥೆಯ ಮೇಲಾಧಿಕಾರಿಗಳು ಅಕ್ರಮ ನಡೆದಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಬಿಐಗೆ ವಹಿಸಲಾಗಿತ್ತು. ತನಿಖೆ ಆರಂಭಿಸಿದ್ದ ಸಿಬಿಐ ಅಧಿಕಾರಿಗಳು ಪ್ರಸ್ತುತ ತನಿಖೆ ಪೂರ್ಣಗೊಳಿಸಿದ ವರದಿ ಸಲ್ಲಿಸಿದ್ದು, ಆ ವರದಿ ಅನುಸಾರ 2018ರ ನೋಟಿಫಿಕೇಷನ್ ಅನ್ವಯ ಅಕ್ರಮವಾಗಿ ನೇಮಕವಾಗಿದ್ದ 103 ಮಂದಿಯನ್ನೂ ವಜಾಗೊಳಿಸಿ ಬಿಎಆರ್‌ಸಿ ಕ್ರಮ ಕೈಗೊಂಡಿರುವುದು ದೃಢಪಟ್ಟಿದೆ.

**ಪ್ರಶ್ನೆ ಪತ್ರಿಕೆ ಸೋರಿಕೆ:** ಆರ್‌ಎಂಪಿಯ ವಿವಿಧ ವಿಭಾಗದಲ್ಲಿ ಖಾಲಿ ಇದ್ದ ಹುದ್ದೆಗಳ ನೇಮಕಾತಿಗಾಗಿ ನಡೆಸಿದ ಲಿಖಿತ ಪರೀಕ್ಷೆ ವೇಳೆ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಲಾಗಿತ್ತು. ಸಂಸ್ಥೆಯ ಕೆಲ ಸಿಬ್ಬಂದಿಗಳೇ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ್ದರು. ಅಲ್ಲದೇ, ಬಹುತೇಕ ಹುದ್ದೆಗಳಿಗೆ ಹಾಲಿ ಸಿಬ್ಬಂದಿಗಳ ಮಕ್ಕಳು, ಸೊಸೆಯಂದಿರು, ಸಂಬಂಧಿಕರನ್ನೇ ನೇಮಕ ಮಾಡಿಕೊಂಡಿದ್ದುದು ಅಕ್ರಮ ನಡೆದಿರುವುದಕ್ಕೆ ಪುಷ್ಟಿ ನೀಡಿತ್ತು.

ಇದನ್ನೇ ಆಧಾರವಾಗಿಟ್ಟುಕೊಂಡು ತನಿಖೆ ಚುರುಕುಗೊಳಿಸಿದ ಸಿಬಿಐ, ಪ್ರಕರಣವನ್ನು ಸಮಗ್ರವಾಗಿ ವಿಚಾರಣೆ ನಡೆಸಿ, ಅಕ್ರಮದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂಬ ಮಾಹಿತಿ ಕಲೆಹಾಕಿದೆ. ಅಂದು ಕೆಲವರ ಮನೆ ಮೇಲೆ ದಾಳಿ ನಡೆಸಿದ್ದ ಸಿಬಿಐ, ಪ್ರಶ್ನೆಪತ್ರಿಕೆ ಸೇರಿದಂತೆ ಕೆಲ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡು ತನಿಖೆ ಮುಂದುವರೆಸಿತ್ತು. ಇದೀಗ ಸಿಬಿಐ ನೀಡಿದ ವರದಿ ಆಧರಿಸಿ 103 ಮಂದಿಯನ್ನು ಕೆಲಸದಿಂದ ವಜಾ ಮಾಡಿರುವುದು ಒಂದೆಡೆಯಾದರೆ, ಈ ಹಗರಣದ ಹಿಂದಿದ್ದಾರೆ ಎನ್ನಲಾದ ಫೈರ್‌ಮನ್ ಕೃಷ್ಣಪ್ಪ, ಸೈಂಟಿಫಿಕ್ ಅಸಿಸ್ಟೆಂಟ್ ಮಾಧವನ್ ಎಂಬವರನ್ನು ಕೆಲಸದಿಂದ ವಜಾ ಮಾಡಲಾಗಿದೆ. ಮಾತ್ರವಲ್ಲ, ಆಡಳಿತಾಧಿಕಾರಿ ಟಿ.ಕೆ.ಬೋಸ್, ಸಹಾಯಕ ಆಡಳಿತಾಧಿಕಾರಿ ಶ್ರೀಪಾಲ್ ಅವರನ್ನು ಮೈಸೂರು ಕೇಂದ್ರದಿಂದ ಪನಿಷ್ಮೆಂಟ್ ಟ್ರಾನ್ಸ್‌ಫರ್ ಮಾಡಲಾಗಿದೆ. ಉಳಿದಂತೆ ಮುಖ್ಯ ಆಡಳಿತಾಧಿಕಾರಿಯಾಗಿದ್ದ ಬಿ.ಲತಾ ಅವರ ವಿರುದ್ಧ ಚಾರ್ಜ್‌ಶೀಟ್ ಹಾಕಲಾಗಿದ್ದರೆ, ವಿಜಿಲೆನ್ಸ್ ಅಧಿಕಾರಿಯಾಗಿದ್ದ ಅಂಗೂರ್ ಅಗರ್‌ವಾಲ್ ಅವರನ್ನು ಸದರಿ ಹುದ್ದೆಯಿಂದ ಮುಕ್ತಗೊಳಿಸಲಾಗಿದೆ.

## ಗೌರಿ–ಗಣೇಶ ಹಬ್ಬದ 42ನೇ ವಾರ್ಷಿಕೋತ್ಸವ

ಮೈಸೂರು, ಆ.28–ಮೈಸೂರಿನ ವಿನಾಯಕ ನಗರದ ಶ್ರೀ ವಿದ್ಯಾಗಣಪತಿ ದೇವಸ್ಥಾನ ಹಾಗೂ ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ ವತಿಯಿಂದ ಗೌರಿ–ಗಣೇಶ ಹಬ್ಬದ 42ನೇ ವಾರ್ಷಿಕೋತ್ಸವವನ್ನು ಆ.30 ಮತ್ತು 31ರಂದು ಏರ್ಪಡಿಸಲಾಗಿದೆ.

ಆ.30ರಂದು ವಿನಾಯಕನಗರದ ದೇವಸ್ಥಾನದಲ್ಲಿ ಮುಂಜಾನೆ 4.30 ಗಂಟೆಗೆ ಸ್ವರ್ಣಗೌರಿ ಪ್ರತಿಷ್ಠಾಪನೆ ಹಾಗೂ ಬೆಳಗ್ಗೆ 7.30ಕ್ಕೆ ಮಹಾಮಂಗಳಾರತಿಯನ್ನು ಏರ್ಪಡಿಸಲಾಗಿದೆ. ನಂತರ ಪ್ರಸಾದ ವಿನಿಯೋಗವಿರುತ್ತದೆ. ಆ.31ರಂದು ಮುಂಜಾನೆ 4 ಗಂಟೆಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕಯೊಂದಿಗೆ ಶ್ರೀ ಗಣಪತಿ ಪ್ರತಿಷ್ಠಾಪನೆ ಮಾಡಲಾಗುವುದು. 1008 ಮೋದಕಗಳಿಂದ ಮಹಾಗಣಪತಿ ಹೋಮ ಮತ್ತು 108 ತೆಂಗಿನಕಾಯಿಗಳಿಂದ ವಿದ್ಯಾಗಣಪತಿ ಹೋಮ ನಡೆಯಲಿದೆ. 8.30 ಗಂಟೆಗೆ ಮಹಾ ಪೂರ್ಣಾಹುತಿ ನಂತರ ಮಹಾಮಂಗಳಾರತಿ ಜರುಗಲಿದೆ. ಬೆಳಗ್ಗೆ 10.30ರಿಂದ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿದೆ. ಎಂದು ದೇವಸ್ಥಾನದ ಟ್ರಸ್ಟ್ ಪದಾಧಿಕಾರಿಗಳು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ: 98451 13022, 93421 10670 ಮೂಲಕ ಸಂಪರ್ಕಿಸಬಹುದಾಗಿದೆ.

## ರಾಜ್ಯದಲ್ಲಿ ಭಾನುವಾರ 929 ಮಂದಿಗೆ ಕೊರೊನಾ

ಬೆಂಗಳೂರು, ಆ.28– ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ 929 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 40,49,411ಕ್ಕೆ ಏರಿಕೆಯಾಗಿದೆ. ಇನ್ನು ರಾಜ್ಯದಲ್ಲಿ ಮಹಾಮಾರಿ ಕೊರೊನಾದಿಂದ ಇಂದು ಐವರು ಮೃತಪಟ್ಟಿದ್ದಾರೆ. ಇದರೊಂದಿಗೆ ಸಾವಿನ ಸಂಖ್ಯೆ 40,192ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಇಂದು 429 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 18,63,210ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲಿ ಕೊರೊನಾದಿಂದ ಯಾರೂ ಮೃತಪಟ್ಟಿಲ್ಲ. ರಾಜ್ಯದಲ್ಲಿ ಇಂದು 987 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 40,01,318ಕ್ಕೆ ಏರಿಕೆಯಾಗಿದೆ. ಇನ್ನು 7,859 ಸಕ್ರಿಯ ಪ್ರಕರಣಗಳಿವೆ.



ಹಾಸನ ಜಿಲ್ಲೆಯ ಹೊಳೆನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ನಡೆದ ಮೈವಿವಿ ಅಂತರ ವಲಯ ಅಂತರ ಕಾಲೇಜುಗಳ ಮಹಿಳಾ ಕ್ರೀಡಾಕೂಟದಲ್ಲಿ ಮೈಸೂರಿನ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಯರು ಚೆಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ವಿಜೇತರನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲ ಪ್ರೊ.ವಿಜಯೇಂದ್ರಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕ ಎಂ.ಕಾರ್ತಿಕ್ ಹಾಗೂ ಕಾಲೇಜಿನ ಸಿಬ್ಬಂದಿ ಅಭಿನಂದಿಸಿದರು.

# ಮಹಿಳೆಯೊಬ್ಬರು ದೇಶದ ಪ್ರಥಮ ಪ್ರಜೆ ಸ್ಥಾನ ಅಲಂಕರಿಸಿದರೆ, ಇಂದಿಗೂ ರಾಷ್ಟ್ರಪತಿ ಬದಲಿಗೆ ರಾಷ್ಟ್ರಾಧ್ಯಕ್ಷರು ಎಂದು ಕರೆಯದಿರುವುದು ದುರಂತ

**● ಪ್ರಗತಿಪರ ಚಿಂತಕ ಪ್ರೊ. ಕಾಳೇಗೌಡ ನಾಗವಾರ ವಿಷಾದ ● ಜಾನಪದ ವಿದ್ವಾಂಸ ಸ.ಚ.ಮಹದೇವನಾಯಕರ 4 ಕೃತಿಗಳ ಬಿಡುಗಡೆ**

ಮೈಸೂರು, ಆ.28(ಪಿಎಂ)– ಮಹಿಳೆಯೊಬ್ಬರು ದೇಶದ ಪ್ರಥಮ ಪ್ರಜೆ ಸ್ಥಾನ ಅಲಂಕರಿಸಿದರೆ, ಇಂದಿಗೂ 'ರಾಷ್ಟ್ರಪತಿ' ಬದಲಿಗೆ 'ರಾಷ್ಟ್ರಾಧ್ಯಕ್ಷರು' ಎಂದು ಕರೆಯುವುದು, ಬರೆಯುವುದು ಇಲ್ಲವಾಗಿದೆ. ಅಂದರೆ ಪುರುಷರು ಮಾತ್ರ ಈ ಹುದ್ದೆಗಳಿಗೆ ಹೇಳಿ ಮಾಡಿಸಿದವರೇ? ಹೀಗಾದರೆ ಸ್ತ್ರೀ ಸಮಾನತೆ–ಘನತೆಗೆ ಎಲ್ಲಿ ಆದ್ಯತೆ ಸಿಗುತ್ತದೆ? ಎಂದು ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ ವಿಷಾದಿಸಿದರು.



ಮೈಸೂರಿನ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಜಾನಪದ ವಿದ್ವಾಂಸ ಸ.ಚ.ಮಹದೇವನಾಯಕ ಅವರ ನಾಲ್ಕು ಕೃತಿಗಳನ್ನು ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ ಬಿಡುಗಡೆ ಮಾಡಿದರು. ಚಿತ್ರದಲ್ಲಿ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಪ್ರಕಾಶಕ ಹಾಗೂ ಮುದ್ರಕ ಡಿ.ಎನ್.ಲೋಕಪ್ಪ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಪ್ರಾಧ್ಯಾಪಕ ಡಾ.ನಂಜಯ್ಯ ಹೊಂಗನೂರು, ಕೃತಿಗಳ ಕರ್ತೃ ಸ.ಚ.ಮಹದೇವ ನಾಯಕ ಅವರನ್ನು ಕಾಣಬಹುದು.

ಮೈಸೂರಿನ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ), ಸಂವಹನ ಪ್ರಕಾಶಕರು ಹಾಗೂ ಮಾಧವ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಜಾನಪದ ವಿದ್ವಾಂಸ ಸ.ಚ.ಮಹದೇವ ನಾಯಕ ಅವರ 'ಬದುಕಿನ ಕನ್ನಡಿ', 'ಮುಗಿಯದ ಕಥೆ ಮತ್ತು ಇತರೇ ಕಥೆಗಳು', 'ಮಲ್ಲಿಗೆಯ ಬನದಲ್ಲಿ' ಮತ್ತು 'ಗಡಿ ನಾಡಿನ ಬೇಟೆ' ಎಂಬ ನಾಲ್ಕು ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಭಾರತದಲ್ಲಿ ಜಾತಿ ವ್ಯವಸ್ಥೆ ಇಂದಿಗೂ ಇದೆ. ಲಿಂಗಭೇದ ಎಂಬುದು ಭಾರತವೂ ಸೇರಿದಂತೆ ವಿಶ್ವದಾದ್ಯಂತವಿದೆ. ಮಹಿಳೆಯೊಬ್ಬರು ದೇಶದ ಪ್ರಥಮ ಪ್ರಜೆ ಸ್ಥಾನ ಅಲಂಕರಿಸಿದರೆ, 'ರಾಷ್ಟ್ರಾಧ್ಯಕ್ಷರು' ಎಂದು ಕರೆಯದಿರುವುದು ದುರಂತ. ದ್ರೌಪದಿ ಮುರ್ಮು ಅವರು ಬುಡಕಟ್ಟು ಸಮುದಾಯದ ಹೆಣ್ಣು ಮಗಳು. ಅವರು ಸಂವಿಧಾನ ತತ್ವದ ಪ್ರಕಾರ ದೇಶದ ಪ್ರಥಮ ಪ್ರಜೆಯಾಗಿ ಆಯ್ಕೆಯಾಗಿದ್ದಾರೆ. ಅವರು ತಮ್ಮ ಚೊಚ್ಚಲ ಭಾಷಣದಲ್ಲಿ ರಾಷ್ಟ್ರಕವಿ ಕುವೆಂಪು ಅವರ 'ನಾನಳಿವೆ ನೀನಳಿವೆ' ಕವನದ ಸಾಲುಗಳನ್ನು ವಾಚಿಸಿದರು ಎಂದು ಹರ್ಷ ವ್ಯಕ್ತಪಡಿಸಿದರು.

ಕುವೆಂಪು ಅವರು ಅತ್ಯಂತ ಪ್ರಾಮಾಣಿಕರು ಹಾಗೂ ತಾಳ್ಮೆಯಿಂದ ಆಳವಾದ ಅಧ್ಯಯನದ ಮೂಲಕ ಮಹತ್ತರ ಸಂದೇಶಗಳನ್ನು ನೀಡಿದ್ದಾರೆ. ಅವರು ಅಪಾರ ಜ್ಞಾನಿಗಳು. ಆದರೆ ಅವರ ಶಿಷ್ಯಂದಿರು ಅವಿವೇಕಿಗಳು, ಪಾತಕಿಗಳು ಆದಲ್ಲಿ ಏನು ಮಾಡಲಾದೀತು? ಎಂದು ಮಾರ್ಮಿಕವಾಗಿ ನುಡಿದರು.

ಸಮಾನತೆ, ಮಾನವೀಯತೆ, ವೈಜ್ಞಾನಿಕತೆ, ಸರಳತೆ ಮತ್ತು ಅಹಿಂಸೆ ತತ್ವಗಳನ್ನು ಕೇಳಿ ಬೆಳೆದೆ. ನಾನು ಅನೇಕ ರಾಜ್ಯೋತ್ಸವ ಸಮಿತಿ ಸೇರಿದಂತೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಸಮಿತಿಗಳಲ್ಲಿ ಇದ್ದಾಗ ಸಂವಿಧಾನದ ತತ್ವಗಳಿಗೆ ಅನುಗುಣವಾಗಿ ಚಾಚೂತಪ್ಪದೇ ಕೆಲಸ ಆಗಬೇಕು ಎಂಬ ವಿಚಾರದಲ್ಲಿ ಹಠ ಹಿಡಿಯುತ್ತಿದ್ದೆ. ಎಷ್ಟೋ ಬಾರಿ ಸಚಿವರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ್ದುಂಟು. ರೋಸ್ಟರ್ ಪದ್ಧತಿ ಅನುಸರಿಸಬೇಕೆಂಬ ಬಗ್ಗೆ ಪ್ರತಿಪಾದಿಸುತ್ತಿದ್ದೆ. ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆ ಇರುವುದು ನಿಜವಿರುವಾಗ ಸಾಮಾಜಿಕ ನ್ಯಾಯ ಎತ್ತಿಹಿಡಿಯಬೇಕು ಎಂದು ವಾದಿಸುತ್ತಿದ್ದೆ. ಕಳೆದ 75 ವರ್ಷಗಳಲ್ಲಿ ಸಾಕಷ್ಟು ಪ್ರಗತಿಪರವಾದ ವಾತಾವರಣವೂ ದೇಶದಲ್ಲಿ ನೆಲೆಗೊಂಡಿದೆ ಎಂದರು.

ಮನುಕುಲಕ್ಕೆ ಸಕಲ ಜೀವಿಗಳೂ ಒಂದೇ ಎಂಬ ತಿಳುವಳಿಕೆ ಬಂದ ದಿನ ಯುದ್ಧಗಳು ಇಲ್ಲವಾಗಲಿವೆ. ಆಗ ವಿಶ್ವ ಸರ್ಕಾರದ ಪರಿಕಲ್ಪನೆಯೂ ಜನ್ಮತಾಳಲಿದೆ. ಪ್ರಕೃತಿಗೆ ದುಷ್ಪರಿಣಾಮ ಉಂಟಾಗುವ ರೀತಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬಳಸದೇ ಮನುಕುಲದ ಒಳಿತಿಗೆ ಬಳಸಿಕೊಳ್ಳಲು ಮುಂದಾಗಬೇಕು. ಅಮೆರಿಕದ ಅಧ್ಯಕ್ಷರು ಗುಜರಾತಿಗೆ ಬಂದರೆ ಸ್ಲಂ ಕಾಣದಂತೆ ಗೋಡೆ ಕಟ್ಟುವುದು ಸರಿಯೇ? ಕಾರ್ಪೋರೇಟ್ ವಲಯಕ್ಕೆ ಕೋಟ್ಯಾಂತರ ಹಣ ಕೊಡುತ್ತಾರೆ. ಆದರೆ ಇಂತಹ ಸ್ಲಂಗಳ ಉದ್ಧಾರಕ್ಕೆ ಅನುದಾನ ವಿನಿಯೋಗಿಸಲು ಹಿಂದೇಟು ಹಾಕುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಮಾರಂಭ ಉದ್ಘಾಟಿಸಿದ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಪ್ರಕಾಶಕ ಹಾಗೂ ಮುದ್ರಕ ಡಿ.ಎನ್.ಲೋಕಪ್ಪ ಮಾತನಾಡಿ, ಪ್ರಸ್ತುತದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಲೇಖಕರು ಹಾಗೂ ಪುಸ್ತಕಗಳ ಸಂಖ್ಯೆ ಹೆಚ್ಚಾಗುತ್ತಿವೆ. ಆದರೆ ಅದಕ್ಕೆ ಅನುಗುಣವಾಗಿ ಓದುಗರಿಲ್ಲ. ದಿನದಿಂದ ದಿನಕ್ಕೆ ಓದುಗರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ಬೇಸರ ವ್ಯಕ್ತ ಪಡಿಸಿದರಲ್ಲದೆ, ಸ.ಚ.ಮಹದೇವ ನಾಯಕರು ಸಾಹಿತ್ಯ ಕ್ಷೇತ್ರದಲ್ಲಿ ಎಲೆಮರೆ ಕಾಯಿ ಯಂತೆ ತೊಡಗಿಸಿಕೊಂಡಿದ್ದಾರೆ ಎಂದು ತಿಳಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀ ಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಪ್ರಾಧ್ಯಾಪಕ ಡಾ.ನಂಜಯ್ಯ ಹೊಂಗನೂರು, ಕೃತಿಗಳ ಕರ್ತೃ ಸ.ಚ.ಮಹದೇವ ನಾಯಕ ಮತ್ತಿತರರು ಹಾಜರಿದ್ದರು.

### ಸಂಸತ್ ಎದುರು ಅಕ್ಕಮಹಾದೇವಿ ಪ್ರತಿಮೆ ಸ್ಥಾಪನೆ ಆಗಬೇಕು...

ಲೋಹಿಯಾ ಅವರಿಗೆ ಭಾರತದ ಎಲ್ಲಾ ಭಾಷಾ ಸಾಹಿತ್ಯದ ಬಗ್ಗೆ ಪರಿಚಯವಿತ್ತು. ಅವರು ನಮ್ಮ ಅಕ್ಕಮಹಾದೇವಿ ಬಗ್ಗೆ ಸಂಸತ್‌ನಲ್ಲಿ ಮಾತನಾಡಿದ್ದಾರೆ. 'ನಾವು ಸೀತೆ, ರಾಮ, ಕೃಷ್ಣ ಮತ್ತು ದ್ರೌಪದಿ ಬಗ್ಗೆ ಮಾತನಾಡುತ್ತೇವೆ. ಇವೆಲ್ಲಾ ಪುರಾಣ ಪಾತ್ರಗಳು. ಅವರ್‍ಯಾರು ಇತಿಹಾಸ ವ್ಯಕ್ತಿಗಳಲ್ಲ. 800 ವರ್ಷಗಳ ಹಿಂದೆ ಕರ್ನಾಟಕದಲ್ಲಿದ್ದ ಅಕ್ಕಮಹಾದೇವಿ ಎಂಬ ದಿಟ್ಟತನದ ಹೆಣ್ಣು ಮಗಳ ಬಗ್ಗೆ ನಾವು ಮಾತನಾಡುವುದೇ ಇಲ್ಲ' ಎಂದು ಪ್ರಸ್ತಾಪಿಸಿದ್ದರು. ಸಂಸತ್ ಎದುರು ಅಕ್ಕಮಹಾದೇವಿ ಪ್ರತಿಮೆ ಸ್ಥಾಪನೆ ಮೂಲಕ ಒಳ್ಳೆಯ ಸಂದೇಶ ಕೊಡಲು ಸಾಧ್ಯವಿದೆ.

**– ಪ್ರೊ.ಕಾಳೇಗೌಡ ನಾಗವಾರ**





ಮೈಸೂರಿನಲ್ಲಿ ಜೆಸಿಸ್ ಸ್ಪೋರ್ಟ್ಸ್ ಮೆಡಿಷಿನ್ ಸೆಂಟರ್ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಮೈಸೂರು ವಾರ್ಷಿಕ ಆಂತ್ರೋಸ್ಕೋಪಿ ಸಭೆಯನ್ನು ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಉದ್ಘಾಟಿಸಿ, ಮಾತನಾಡಿದರು. ಕರ್ನಾಟಕ ಆಂತ್ರೋಸ್ಕೋಪಿ ಸೊಸೈಟಿ ಪ್ರಧಾನ ಕಾರ್ಯದರ್ಶಿ ಡಾ. ಆರ್.ಗಿರೀಶ್ ಚಂದ್ರ, ಹಿರಿಯ ಆರ್ಥೋಪೆಡಿಕ್ ಸರ್ಜನ್ ಡಾ. ಜೆ.ಎಸ್.ಹೆಗ್ಡೆ, ಡಾ. ಸುರೇಂದ್ರ ಕಾಮತ್, ಡಾ. ರಾಜ್‌ಕುಮಾರ್ ಅಮರಾವತಿ, ಡಾ. ಪುರುಷೋತ್ತಮ ಶಾಸ್ತ್ರಿ, ಡಾ. ನೀಲಣ್ಣ ಪಾಟೀಲ್ ಉಪಸ್ಥಿತರಿದ್ದರು.

## ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಅವೈಜ್ಞಾನಿಕ ಕಾಮಗಾರಿ

**ನಿತಿನ್ ಗಡ್ಕರಿಗೆ ದೂರು**



ಬೆಂಗಳೂರು, ಆ.28– ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ ಕಳೆದ 1 ತಿಂಗಳಿಂದ ಮಳೆ ನೀರು ನಿಂತು ಅನಾಹುತಗಳಾಗಿವೆ. ಇದಕ್ಕೆ ಅವೈಜ್ಞಾನಿಕವಾದ ಹೆದ್ದಾರಿ ಕಾಮಗಾರಿಯೇ ಕಾರಣ ಎಂದು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ದೂರಿದ್ದಾರೆ.



ಅನಾಹುತಗಳಿಗೆ ಅವೈಜ್ಞಾನಿಕವಾದ ಹೆದ್ದಾರಿ ಕಾಮಗಾರಿಯೇ ಕಾರಣ. ಇದರ ಸಂಪೂರ್ಣ ಮಾಹಿತಿಯನ್ನು ಅಧಿಕಾರಿಗಳಿಂದ ಪಡೆದುಕೊಂಡಿದ್ದೇನೆ. ಕೇಂದ್ರ ಸಚಿವ ಗಡ್ಕರಿ ಅವರನ್ನು ಭೇಟಿ ಮಾಡಿ ಅವೈಜ್ಞಾನಿಕ ಕಾಮಗಾರಿ ವಿಚಾರ ತಿಳಿಸುವೆ ಎಂದು ಹೇಳಿದ್ದಾರೆ.

ಸರ್ವಿಸ್ ರಸ್ತೆಯ ಅನಾಹುತಗಳನ್ನ ನಮ್ಮ ಕಣ್ಣಾರೆ ಕಾಣುತ್ತಿದ್ದೇವೆ. ಸರ್ವಿಸ್ ರಸ್ತೆಯಲ್ಲಿ ನೀರು ಸರಾಗವಾಗಿ ಹರಿಯುತ್ತಿಲ್ಲ, ಅಂಡರ್ ಪಾಸ್‌ಗಳಲ್ಲಿ ಮೂರು, ನಾಲ್ಕು ಅಡಿ ಮಳೆ ನೀರು ನಿಂತು ತೊಂದರೆಯಾಗುತ್ತಿದೆ. ಇವೆಲ್ಲಾ ಸಮಸ್ಯೆ ಆಗೋದಕ್ಕೆ ಹೆದ್ದಾರಿ ಅವೈಜ್ಞಾನಿಕ ಕಾಮಗಾರಿ ಒಂದು ಭಾಗ ಎಂದು ಆರೋಪಿಸಿದ್ದಾರೆ.

# ಯಾದವ ಸಂಘದಿಂದ ವಿಜೃಂಭಣೆಯ ಶ್ರೀ ಕೃಷ್ಣ ಜಯಂತಿ

ಮೈಸೂರು,ಆ.28(ಆರ್‌ಕೆಬಿ)–ಮೈಸೂರು ನಗರ ಮತ್ತು ಜಿಲ್ಲಾ ಯಾದವ (ಗೊಲ್ಲ) ಯುವ ಸಂಘ, ಗೊಲ್ಲಗೇರಿ ಶ್ರೀ ಪ್ರಸನ್ನ ನಂಜುಂಡೇಶ್ವರ ಮತ್ತು ಶ್ರೀ ಕೃಷ್ಣ ದೇವಾಲಯ ಆಡಳಿತ ಸಮಿತಿ ವತಿಯಿಂದ 40ನೇ ವರ್ಷದ ಶ್ರೀ ಕೃಷ್ಣ ಜಯಂತಿ ವಿಜೃಂಭಣೆಯಿಂದ ನೆರವೇರಿತು.



ಶ್ರೀಕೃಷ್ಣ ಜಯಂತಿ ಕಾರ್ಯಕ್ರಮಕ್ಕೆ ವಿಧಾನಪರಿಷತ್ ಸದಸ್ಯ ನಾಗರಾಜ್ ಯಾದವ್ ಚಾಲನೆ ನೀಡಿದರು.

ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಯಾದವ ಸಂಘದ ಆವರಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ನಾಗರಾಜ್ ಯಾದವ್ ಅವರು ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿದರು. ಯಾದವ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ, ಯಾದವ ಮಹಿಳೆಯರಿಗೆ ರಂಗೋಲಿ ಬಿಡಿಸುವ ಸ್ಪರ್ಧೆ, ಯಾದವ ಮಕ್ಕಳ ಶ್ರೀಕೃಷ್ಣ, ರಾಧ, ರುಕ್ಮಿಣಿ ವೇಷಧಾರಿಗಳ ಸ್ಪರ್ಧೆ ವಿಜೇತರು ಹಾಗೂ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮತ್ತು ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿ ವಿಜೇತರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಉಪಮೇಯರ್ ಪುಷ್ಪವಲ್ಲಿ, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಸೌಮ್ಯ ಉಮೇಶ್, ಗೀತಾ ಯೋಗಾನಂದ, ಯಾದವ ಸಂಘದ ಅಧ್ಯಕ್ಷ ಯೋಗೇಶ್, ಕಾರ್ಯದರ್ಶಿ ವಿ.ಸತ್ಯನಾರಾಯಣ ಇನ್ನಿತರರು ಉಪಸ್ಥಿತರಿದ್ದರು.

## ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಸುತ್ತೂರು,ಆ.28–ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆ ವಿದ್ಯಾರ್ಥಿ ಎಂ.ಆನಂದ್‌ಕುಮಾರ್ ಪಂಜಾಬ್‌ನ ಪರೀದಾ ಕೋಟ್‌ನಲ್ಲಿ ಸೆ.2ರಿಂದ 4ರವರೆಗೆ ನಡೆಯುವ 21ನೇ ರಾಷ್ಟ್ರೀಯ ಪುರುಷರ ಫೆಡರೇಷನ್ ಕಪ್ ಥ್ರೋಬಾಲ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ. ಕ್ರೀಡಾಪಟುವನ್ನು ಸಂಸ್ಥೆಯ ಆಡಳಿತಾಧಿಕಾರಿಗಳು, ಸಂಯೋಜನಾಧಿಕಾರಿಗಳು, ಮುಖ್ಯೋಪಾಧ್ಯಾಯರು, ಶಿಕ್ಷಕ ವರ್ಗದವರು ಅಭಿನಂದಿಸಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**29.08.2022 ಸೋಮವಾರ, ಮಳೆ ನಕ್ಷತ್ರ : ಮಖೆ, 17.08.2022 ರಿಂದ 30.08.2022**
**ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ**
**ತಿಥಿ: ಬಿದಿಗೆ, ನಕ್ಷತ್ರ : ಉತ್ತರ, ರಾಹುಕಾಲ: ಬೆಳಗ್ಗೆ 7.30 ರಿಂದ 9 ಗಂಟೆವರೆಗೆ.**

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ಯೋಗ ವಾಶಿಷ್ಠ ಕುರಿತು ಪ್ರವಚನ, ವಿಶೇಷ ಕಾರ್ಯಕ್ರಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಉತ್ತರಾದಿ ಮಠ; ರೋಗಮೋಚಕ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಧನ್ವಂತರಿ ಜಯಂತಿ ಪ್ರಯುಕ್ತ ಪಂಚ ರಾತ್ರೋತ್ಸವ ಕಾರ್ಯಕ್ರಮ, ಶೇಷ ವಾಹನ ಉತ್ಸವ, ಗಜ ವಾಹನ ಉತ್ಸವ, ವಾಯು ವಾಹನ ಉತ್ಸವ, ಗರುಡೋತ್ಸವ, ಮಹಾರಥೋತ್ಸವ, ಸಂಜೆ 7ರಿಂದ, ಧನ್ವಂತರಿ ಜಯಂತಿ, ವಿಶೇಷ ಫಲ ಪಂಚಾಮೃತ ಅಭಿಷೇಕ, ಪಂಡಿತರ ಪ್ರವಚನ, ಬೆಳಗ್ಗೆ 8 ಗಂಟೆಯಿಂದ, ರಾಜಬೀದಿ ಉತ್ಸವ, ಮಹಾಮಂಗಳಾರತಿ.

■ **ಟೆರಿಷಿಯನ್ ಕಾಲೇಜು:** ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಭಾರತೀಯ ಸ್ವಾತಂತ್ರ್ಯ ಚಳವಳಿ ಪರಾಮರ್ಶೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಮುಖ್ಯ ಅತಿಥಿ: ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ಸ್ಥಳ: ಅವೆ ಮರಿಯಾ ಗೋಲ್ಡನ್ ಜ್ಯುಬಿಲಿ ಸಭಾಂಗಣ, ಬೆಳಗ್ಗೆ 10 ಗಂಟೆಗೆ.

■ **ಜೆಎಸ್‌ಎಸ್ ಪದವಿಪೂರ್ವ ಕಾಲೇಜು (ಟಿಐಎಸ್ ಆವರಣ, ಎಸ್‌ಜೆಸಿಇ):** ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ ಮತ್ತು ಸ್ವಾಗತ ಕಾರ್ಯಕ್ರಮ–2022, ಉದ್ಘಾಟನೆ: ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಡಿ.ಕೆ. ಶ್ರೀನಿವಾಸಮೂರ್ತಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ನಿರ್ದೇಶಕ ಬಿ.ವಿ. ರಾಜಶೇಖರ್, ಸ್ಥಳ: ಮೆಕ್ಯಾನಿಕಲ್ ಆಡಿಟೋರಿಯಂ, ಎಸ್‌ಜೆಸಿಇ ಆವರಣ, ಬೆಳಗ್ಗೆ 10.30 ಗಂಟೆಗೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಪ್ರಶಸ್ತಿ ಪ್ರದಾನ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪ್ರತಿಭಾ ಪುರಸ್ಕಾರ: ಹಂಗಾಮಿ ಮೇಯರ್ ಶ್ರೀಮತಿ ಸುನಂದಾ ಪಾಲನೇತ್ರ, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ನಾಗೇಶ್, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಮೈಮುಲ್ ಪಿ.ಎಂ. ಪ್ರಸನ್ನ, ಯುವ ಕಾಂಗ್ರೆಸ್ ಮುಖಂಡ ಸುನಿಲ್ ಬೋಸ್, ಅಧ್ಯಕ್ಷತೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸ ಗಂಗೋತ್ರಿ ಆವರಣ, ಬೆಳಗ್ಗೆ 11 ಗಂಟೆಗೆ.

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಶಾಶ್ವತ ಸೇವಾ ಶಾಲೆ:** ಜಗದ್ಗುರು ಲಿಂಗೈಕ್ಯ ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಗಳ 107ನೇ ಜಯಂತಿ ಅಂಗವಾಗಿ ಸಂಸ್ಥಾಪನಾ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ, ಸ್ಥಳ: ಶಾಶ್ವತಿ ಸೇವಾ ಶಾಲೆ, ಆಲನಹಳ್ಳಿ, ಬೆಳಗ್ಗೆ 11 ಗಂಟೆಗೆ.

■ **ಮಹಾರಾಜ ಕಾಲೇಜು ಕನ್ನಡ ವಿಭಾಗ, ಸ್ನಾತಕ ಗ್ರಂಥಾಲಯ:** ವಿದ್ಯಾರ್ಥಿ ಕವಿಗೋಷ್ಠಿ, ಸ್ಥಳ: ಗ್ರಂಥಾಲಯ ಒಳಾಂಗಣ, ಬೆಳಗ್ಗೆ 11 ಗಂಟೆಗೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ಗ್ರಂಥಾಲಯ ವಿಭಾಗ:** ಡಾ. ಎಸ್.ಆರ್. ರಂಗನಾಥ್‌ರವರ ಜನ್ಮದಿನಾಚರಣೆ, ಸಾನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿಗಳು, ಸ್ಥಳ: ಸೆಮಿನಾರ್ ಹಾಲ್, ಕಾಲೇಜು ಆವರಣ, ಮಧ್ಯಾಹ್ನ 3 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು:** ವಾರ್ಷಿಕೋತ್ಸವ ಮತ್ತು ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸ್ಥಳ: ಕಾಲೇಜಿನ ಆವರಣ, ಸಂಜೆ 6 ಗಂಟೆಗೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ: ಕೆ.ಎಸ್. ಸಂಧ್ಯಾರೆಡ್ಡಿ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು–ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ–ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಎಂ.ಎ. ಶೋಭಾ, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.45 ನಿತ್ಯ ವಿಜ್ಞಾನ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ–ಹೆಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, ಭಾಗವಹಿಸುವವರು–ಡಾ.ಕೆ. ವರದರಂಗನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಶಾಸ್ತ್ರೀಯ ಸಂಗೀತದ ವೇದಿಕೆ ಮೈಸೂರಿನ SPVGMC ಟ್ರಸ್ಟ್‌ನ ಕಾರ್ಯದರ್ಶಿ ಸಿ.ಆರ್. ಹಿಮಾಂಶು ಅವರೊಡನೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ. **ಮಧ್ಯಾಹ್ನ:** 12.30 ಭಕ್ತಿಗೀತೆಗಳು–ರಾಜ್‌ಕುಮಾರ್ ಭಾರತೀ, 12.45 ನಮ್ಮ ಆರೋಗ್ಯ: 'ಅಪಸ್ಮಾರ ಅಥವ್ ಫಿಟ್ಸ್' ಕುರಿತು ಡಾ. ಎಂ.ಎಸ್.ಭಾಸ್ಕರ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು–ಎಸ್.ಪ್ರವೀಣ್, 3.00 ಆರ್.ಕೆ.ಪದ್ಮನಾಭ: ವೀಣಾವಾದನ, **ಸಂಜೆ:** 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ: ಸುಧಾ ಹರೀಶ್, ಸಂಗೀತ–ಜಿ.ಪುಷ್ಪಲತಾ, 6.50 ಕೃಷಿರಂಗ: ಕಬ್ಬಿನ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ ಈ ವಿಚಾರವಾಗಿ ಜೆ.ಜಿ.ರಾಜಣ್ಣ ಅವರೊಡನೆ ಸಂದರ್ಶನ, 9.30 'ನೆಲ ಮೂಲ': ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಸರಣಿ ಕಾರ್ಯಕ್ರಮ. ರಚನೆ–ಡಾ. ಪಿ.ಕೆ. ರಾಜಶೇಖರ್ ಪ್ರಸ್ತುತಿ–ಡಾ. ಮೈಸೂರು ಉಮೇಶ್

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ




ಆಗಸ್ಟ್ 29 ಸೋಮವಾರ 2022

ಸಂಪುಟ: 43 | ಸಂಚಿಕೆ: 134 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




## 2023ರಿಂದ ಅಯೋಧ್ಯೆ ರಾಮಮಂದಿರದಲ್ಲಿ ದೇವರ ದರ್ಶನ

### ಶೇ.40ರಷ್ಟು ಕಾಮಗಾರಿ ಪೂರ್ಣ



ಲಕ್ನೋ, ಆ.28– ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮಮಂದಿರದ ಕಾಮಗಾರಿ ಶೇ.40ಕ್ಕೂ ಹೆಚ್ಚು ಪೂರ್ಣಗೊಂಡಿದ್ದು, 2023ರಿಂದ ದೇವರ ದರ್ಶನ ಪಡೆಯಬಹುದು ಎಂದು ಟ್ರಸ್ಟ್ ಅಧಿಕಾರಿಗಳು ತಿಳಿಸಿದರು.

ಈ ಬಗ್ಗೆ ಶ್ರೀರಾಮ ಜನ್ಮಭೂಮಿ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮಾತನಾಡಿ, ದೇವಾಲಯದ ಸುತ್ತಲಿನ ರಸ್ತೆಗಳ ಸುಧಾರಣೆಯ ಕಾರ್ಯ ಹಾಗೂ ನಿರ್ಮಾಣದ ಹಂತ ಚಟುವಟಿಕೆಗಳು ಭರದಿಂದ ಸಾಗಿವೆ. ಪ್ರಪಂಚಾದ್ಯಂತ ▶ 8ನೇ ಪುಟಕ್ಕೆ

# ಎಐಸಿಸಿ ನೂತನ ಅಧ್ಯಕ್ಷರ ಆಯ್ಕೆ

# ಅ.17ರಂದು ಚುನಾವಣೆ



## ಸಿಡಬ್ಲ್ಯೂಸಿ ಸಭೆಯಲ್ಲಿ ನಿರ್ಧಾರ; ಸೆ.24ಕ್ಕೆ ನಾಮಪತ್ರ ಸಲ್ಲಿಕೆ ಆರಂಭ: ಅ.19ಕ್ಕೆ ಮತ ಎಣಿಕೆ

ನವದೆಹಲಿ, ಆ.28– ಮುಂದಿನ ಎಐಸಿಸಿ ಅಧ್ಯಕ್ಷರ ಚುನಾವಣೆ ಸಂಬಂಧ ಭಾನುವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯೂಸಿ)ಯಲ್ಲಿ ನಿರ್ಧಾರ ಕೈಗೊಳ್ಳಲಾಗಿದ್ದು, ಅಕ್ಟೋಬರ್ 17ರಂದು ಚುನಾವಣೆ ನಡೆಯಲಿದೆ.

ಕಳೆದ ಶುಕ್ರವಾರ ಪಕ್ಷದ ಹಿರಿಯ ನಾಯಕ ಗುಲಾಂ ನಬಿ ಆಜಾದ್ ರಾಜೀನಾಮೆಯಿಂದ ಪಕ್ಷಕ್ಕೆ ದೊಡ್ಡ ಹೊಡೆತವಾಗಿದ್ದು, ಇದರ ನಡುವೆ ನಡೆದ ಸಭೆಯಲ್ಲಿ ಪಕ್ಷದ ಅಧ್ಯಕ್ಷರ ಆಯ್ಕೆಯಾಗಿ ತೀವ್ರ ಕಸರತ್ತು ನಡೆದಿದೆ. ಪಕ್ಷದ ಅಧ್ಯಕ್ಷರ ಆಯ್ಕೆಗೆ ಸೆ.22ರಂದು ಅಧಿಸೂಚನೆ ಹೊರಡಿಸಲಾಗುತ್ತದೆ. ಸೆ.24ರಂದು ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು, ಸೆಪ್ಟೆಂಬರ್ 30ರವರೆಗೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.



ಕಪಿಲ್ ಸಿಬಲ್ ಮತ್ತು ಅಶ್ವನಿಕುಮಾರ್ ಸೇರಿದಂತೆ ಹಿರಿಯ ನಾಯಕರ ರಾಜೀನಾಮೆಯಿಂದ ತತ್ತರಿಸಿರುವ ಕಾಂಗ್ರೆಸ್, ಇದೀಗ ಆಜಾದ್‌ರ ಡಿಎನ್‌ಎಯನ್ನು "ಮೋದಿ ಫೈಡ್" ಎಂದು ಆರೋಪಿಸುವ ಮೂಲಕ ಇತ್ತೀಚಿನ ಆಘಾತವನ್ನು ತಿರುಗಿಸಲು ಪ್ರಯತ್ನಿಸಿದೆ. ಪಕ್ಷದ ಮಾಜಿ ಮುಖ್ಯಸ್ಥ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ವರ್ಚುವಲ್ ಆಗಿ ಭಾಗವಹಿಸಿದ್ದರು. ಜಿ–23 ಭಿನ್ನಮತೀಯ ಗುಂಪಿನ ಭಾಗವಾಗಿದ್ದ ಆನಂದ್ ಶರ್ಮಾ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ್ ಮಿಸ್ತ್ರಿ, ಕೆ.ಸಿ.ವೇಣುಗೋಪಾಲ್, ಮಾಜಿ ಕೇಂದ್ರ ಸಚಿವರಾದ ಜೈರಾಮ್ ರಮೇಶ್, ಮುಕುಲ್ ವಾಸ್ನಿಕ್ ಮತ್ತು ಪಿ.ಚಿದಂಬರಂ ಮತ್ತು ರಾಜಸ್ಥಾನ ಮುಖ್ಯಮಂತ್ರಿ ಇನ್ನಿತರರು ಉಪಸ್ಥಿತರಿದ್ದರು.

# ಮಳೆ ಹಾನಿ: ಸಿಎಂ ಸಭೆ

### ತಕ್ಷಣವೇ ಮನೆ, ಬೆಳೆ ಪರಿಹಾರ ವಿತರಿಸುವಂತೆ ಡಿಸಿಗಳಿಗೆ ಸೂಚನೆ

ಬೆಂಗಳೂರು,ಆ.28–ಸಂತ್ರಸ್ತರಿಗೆ ವಿಳಂಬ ಮಾಡದೆ ತಕ್ಷಣವೇ ಮನೆ ಮತ್ತು ಬೆಳೆ ಹಾನಿಗೆ ಪರಿಹಾರ ವಿತರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.



ಗೃಹ ಕಚೇರಿ ಕೃಷ್ಣಾದಲ್ಲಿ ಕಳೆದ ಮೂರು ದಿನಗಳಲ್ಲಿ ರಾಜ್ಯದಲ್ಲಿ ಸುರಿದ ಭಾರಿ ಮಳೆಯಿಂದ ಹಾನಿಗೊಳಗಾದ ಜಿಲ್ಲೆಗಳ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವೀಡಿಯೋ ಸಂವಾದ ನಡೆಸಿದರು.

ದೊಡ್ಡ ಕೆರೆಗಳಿರುವಲ್ಲಿ ಜಾಗೃತರಾಗಿದ್ದು, ಸಾವು–ನೋವು ಸಂಭವಿಸದಂತೆ ಎಚ್ಚರ ವಹಿಸಬೇಕು. ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಮಳೆಯಿಂದಾಗಿ ನೀರು ನಿಂತಿರುವುದರಿಂದ ಪರ್ಯಾಯ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ಇಂದಿನಿಂದಲೇ ಅನುವು ಮಾಡಿಕೊಡುವಂತೆ ಮೈಸೂರು, ರಾಮನಗರ ಹಾಗೂ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದರು.

> ಕೆರೆಗಳು ಒಡೆಯದಂತೆ ಹಾಗೂ ಬಿರುಕು ಬೀಳದಂತೆ ಎಚ್ಚರಿಕೆ ವಹಿಸಬೇಕು. ಸಮೀಕ್ಷೆ ನಡೆಸಿ, ಅಗತ್ಯವಿದ್ದೆಡೆ ತಕ್ಷಣವೇ ದುರಸ್ತಿ ಕಾರ್ಯ ಕೈಗೊಳ್ಳಬೇಕು.
> –ಬಸವರಾಜ ಬೊಮ್ಮಾಯಿ

ಮಳೆಯಿಂದ ಹಾನಿಗೊಳಗಾಗಿರುವ ರಸ್ತೆ ಮತ್ತು ಸೇತುವೆಗಳನ್ನು ತಕ್ಷಣವೇ ದುರಸ್ತಿ ಮಾಡಬೇಕು. ಅಧಿಕಾರಿಗಳು ಸಂವಹನದ ಮೂಲಕ ಕಾರ್ಯನಿರ್ವಹಿಸಬೇಕು. ಲೋಕೋಪಯೋಗಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ರಸ್ತೆ ದುರಸ್ತಿ ಕೈಗೊಳ್ಳಬೇಕು. ಸಕಾಲದಲ್ಲಿ ಕಡಿತಗೊಂಡಿರುವ ವಿದ್ಯುತ್ ಸಂಪರ್ಕ ▶ 8ನೇ ಪುಟಕ್ಕೆ

## ದುಬೈನಲ್ಲಿ ಸಾಂಪ್ರದಾಯಿಕ ಎದುರಾಳಿಗಳ ಕದನ

# ಪಾಕ್ ವಿರುದ್ಧ ಭಾರತಕ್ಕೆ ಭರ್ಜರಿ ಜಯ

- ಆಲ್‌ರೌಂಡ್ ಆಟ ಪ್ರದರ್ಶಿಸಿದ ಪಾಂಡ್ಯ ಪಂದ್ಯಶ್ರೇಷ್ಠ
- ಏಷ್ಯಾ ಕಪ್‌ನಲ್ಲಿ ಶುಭಾರಂಭ ಮಾಡಿದ ಭಾರತ

ದುಬೈ, ಆ.28– ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧದ ಹೈವೋಲ್ಟೇಜ್ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ 5 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ. ಇದರೊಂದಿಗೆ ಭಾರತ ಏಷ್ಯಾ ಕಪ್ ಟೂರ್ನಿನಲ್ಲಿ ಶುಭಾರಂಭ ಮಾಡಿದೆ.

ಇಲ್ಲಿನ ದುಬೈ ಅಂತಾರಾಷ್ಟ್ರೀಯ ಮೈದಾನದಲ್ಲಿ ಭಾನುವಾರ ನಡೆದ ಗ್ರೂಪ್ 'ಎ' ವಿಭಾಗದ ಮೊದಲ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ, ಭಾರತೀಯ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿ 19.4 ಓವರ್‌ಗಳಲ್ಲಿ 147 ರನ್‌ಗಳಿಗೆ ಸರ್ವಪತನ ಕಂಡಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಬಾಬರ್ ಅಜಂ ಹಾಗೂ ಮೊಹಮ್ಮದ್ ರಿಜ್ವಾನ್ ತಂಡಕ್ಕೆ ಉತ್ತಮ ಆರಂಭ ಒದಗಿಸಲು ವಿಫಲರಾದರು. ತಂಡದ ಮೊತ್ತ 15 ರನ್ ಆಗಿದ್ದ ವೇಳೆ 10 ರನ್ ಗಳಿಸಿದ್ದ ಬಾಬರ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಫಖಾರ್ ಜಮಾನ್ ಕೂಡ 10 ರನ್ ಗಳಿಸಿ ನಿರ್ಗಮಿಸಿದರು. 3ನೇ ವಿಕೆಟ್‌ಗೆ ಒಂದಾದ ರಿಜ್ವಾನ್ ಹಾಗೂ ಇಫ್ತಿಹಾರ್ ಅಹ್ಮದ್ 45 ರನ್ ಜೊತೆಯಾಟವಾಡಿದರು. ಈ ವೇಳೆ 28 ರನ್ ಗಳಿಸಿದ್ದ ಅಹ್ಮದ್ ಪೆವಿಲಿಯನ್ ಸೇರಿದರು. ಇವರ ಹಿಂದೆಯೇ 42 ರನ್ ಗಳಿಸಿದ್ದ ರಿಜ್ವಾನ್ ಅಹಮ್ಮದ್ ಸಹ ವಿಕೆಟ್ ಒಪ್ಪಿಸಿದರು. ನಂತರ ಬಂದ ಬ್ಯಾಟ್ಸ್‌ಮನ್‌ಗಳಿಂದ ಉತ್ತಮ ಪ್ರದರ್ಶನ ಮೂಡಿ ಬರಲಿಲ್ಲ. ಅಂತಿಮ ಓವರ್‌ಗಳಲ್ಲಿ ಉತ್ತಮವಾಗಿ ಬ್ಯಾಟ್ ಬೀಸುವ ಮೂಲಕ ಶಹನವಾಜ್ ▶ 8ನೇ ಪುಟಕ್ಕೆ

### ಭಾರತಕ್ಕೆ 8ನೇ ಜಯ

ಇದುವರೆಗೆ ನಡೆದಿರುವ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳು ಒಟ್ಟು 10 ಬಾರಿ ಮುಖಾಮುಖಿಯಾಗಿದ್ದು, ಈ ಪೈಕಿ ಭಾರತ ಇಂದಿನ ಪಂದ್ಯವೂ ಸೇರಿದಂತೆ 8 ಪಂದ್ಯಗಳಲ್ಲಿ ಜಯ ಸಾಧಿಸಿ ಪಾಕ್ ವಿರುದ್ಧ ಪಾರುಪತ್ಯ ಸಾಧಿಸಿದೆ. ಮತ್ತೊಂದೆಡೆ ಪಾಕ್ 2 ಬಾರಿ ಜಯ ಗಳಿಸಿದೆ.



## ಭಾರತ್ ಜೋಡೋ: ಗುಂಡ್ಲುಪೇಟೆಯಿಂದ ರಾಯಚೂರುವರೆಗೆ ಕಾಂಗ್ರೆಸ್ ಪಾದಯಾತ್ರೆ

### ರಾಜ್ಯದಲ್ಲಿ 21 ದಿನ ಯಾತ್ರೆ; ಬಿ.ಕೆ. ಹರಿಪ್ರಸಾದ್‌ಗೆ ಉಸ್ತುವಾರಿ



**ಬೆಂಗಳೂರು:** ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯಲಿರುವ 'ಭಾರತ ಒಗ್ಗೂಡಿಸಿ (ಭಾರತ್ ಜೋಡೋ) ಪಾದಯಾತ್ರೆಗೆ ಕರ್ನಾಟಕದಲ್ಲಿ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆಯಲ್ಲಿ ಸೆ.30ರಂದು ಚಾಲನೆ ದೊರೆತು, 21 ದಿನಗಳ ಕಾಲ ಸಂಚರಿಸಿ ರಾಯಚೂರುವರೆಗೆ ಸಾಗಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ಈ ಯಾತ್ರೆಯಲ್ಲಿ ರಾಜ್ಯದಲ್ಲಿ ಒಂದೊಂದು ದಿನ ಯಾರು ಪಾಲ್ಗೊಳ್ಳಬೇಕು, 21 ದಿನವೂ ಯಾರು ಇರಬೇಕೆಂದು ನಿಶ್ಚಯಿಸಲಾಗಿದೆ ಎಂದರು.

ದೇಶದಲ್ಲಿ ಸಾಮಾಜಿಕ ಸಾಮರಸ್ಯ ಹದಗೆಡುತ್ತಿದ್ದು, ಕುವೆಂಪು ಅವರು ಹೇಳಿರುವಂತೆ ನಮ್ಮ ನಾಡು ಶಾಂತಿಯ ತೋಟ ಆಗಬೇಕು. ಪ್ರತಿ ಕುಟುಂಬವೂ ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದು, ಅದರಲ್ಲೂ ಮಹಿಳೆಯರಿಗೆ ಆರ್ಥಿಕ, ಮಾನಸಿಕ ಶಕ್ತಿ ತುಂಬಬೇಕು. ನಿರುದ್ಯೋಗ ಪ್ರಮಾಣ ಹೆಚ್ಚಿದ್ದು ಯುವಕರಿಗೆ ಉದ್ಯೋಗ ಸಿಗಬೇಕು, ರಾಜ್ಯದಲ್ಲಿ ಭ್ರಷ್ಟಾಚಾರ ರಹಿತ ಸರ್ಕಾರ ರಚನೆ ಆಗಬೇಕು, ರೈತರು ಹಾಗೂ ಕಾರ್ಮಿಕರ ಬದುಕು ಹಸನಾಗಬೇಕು, ಈ ಐದು ಉದ್ದೇಶದೊಂದಿಗೆ, ಎಲ್ಲ ವರ್ಗದವರನ್ನು ರಕ್ಷಣೆ ಮಾಡಲು ಈ ಯಾತ್ರೆ ನಡೆಯಲಿದೆ ಎಂದರು.

ನಮ್ಮ ರಾಜ್ಯದಲ್ಲಿನ ಪಾದಯಾತ್ರೆ ಇಡೀ ದೇಶಕ್ಕೆ ಮಾದರಿಯಾಗಲಿದೆ ಎಂಬ ವಿಶ್ವಾಸವಿದೆ. ಈ ಪಾದಯಾತ್ರೆಯಲ್ಲಿ ಶಿಕ್ಷಕರು, ನಿವೃತ್ತ ಅಧಿಕಾರಿಗಳು, ಸಂಘ ಸಂಸ್ಥೆಗಳು, ರೈತರು, ಕಾರ್ಮಿಕರಿಗೆ ಅವಕಾಶ ಮಾಡಿಕೊಡಲಾಗುವುದು. ▶ 6ನೇ ಪುಟಕ್ಕೆ

### ಸಂಯೋಜಕರ ನೇಮಕ

ಮೈಸೂರು ನಗರಕ್ಕೆ ಶಾಸಕ ತನ್ವೀರ್ ಸೇಟ್, ಮಾಜಿ ಶಾಸಕರಾದ ವಾಸು, ಎಂ.ಕೆ. ಸೋಮಶೇಖರ್, ಮೈಸೂರು ಜಿಲ್ಲೆಗೆ ಶಾಸಕರಾದ ಹೆಚ್.ಪಿ.ಮಂಜುನಾಥ್, ಯತೀಂದ್ರ, ಮಂಡ್ಯ ಜಿಲ್ಲೆಗೆ ಮಾಜಿ ಸಚಿವರಾದ ಎನ್.ಚೆಲುವರಾಯಸ್ವಾಮಿ, ಪಿ.ಎಂ.ನರೇಂದ್ರ ಸ್ವಾಮಿ, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಚಾಮರಾಜನಗರಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣರನ್ನು ಸಂಯೋಜಕರಾಗಿ ನೇಮಿಸಲಾಗಿದೆ.

## ಸರಗೂರಲ್ಲಿ ವಿವೇಕ ಸೈನಿಕ ಶಾಲೆ; ರಕ್ಷಣಾ ಸಚಿವಾಲಯದಿಂದ ಅನುಮೋದನೆ

**ಮೈಸೂರು:** ಜಿಲ್ಲೆಯ ಸರಗೂರಿನಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿವೈಎಂ)ನಿಂದ ನಡೆಸಲಾಗುತ್ತಿರುವ ವಿವೇಕ ಉತ್ಕೃಷ್ಟ ಶಾಲೆ (ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್)ಯಲ್ಲಿ 'ಸೈನಿಕ ಶಾಲೆ' ನಡೆಸಲು ಅನುಮೋದನೆ ದೊರೆತಿದೆ.

ರಕ್ಷಣಾ ಸಚಿವಾಲಯದ ಸೈನಿಕ ಶಾಲೆ ಸೊಸೈಟಿಯು (ಎಸ್‌ಎಸ್‌ಎಸ್) ಎಸ್‌ವಿವೈಎಂನ ಶಾಲೆಗೆ ಅನುಮೋದನೆ ನೀಡಿದೆ. 2022–23ನೇ ಸಾಲಿನ ಅಧಿಕೃತ ಉದ್ಘಾಟನಾ ಕಾರ್ಯಕ್ರಮ ಸೆ.3ರಂದು ನಡೆಯಲಿದೆ. ದೇಶದ ವಿವಿಧೆಡೆ ಪ್ರಸಕ್ತ ಸಾಲಿನಲ್ಲಿ ಮೊದಲ ಹಂತ




ದಲ್ಲಿ ಆರಂಭಿಸಲಾಗುತ್ತಿರುವ 19 ಸೈನಿಕ ಶಾಲೆಗಳ ಪೈಕಿ ಸರಗೂರು ವಿವೇಕ ಶಾಲೆ ಒಂದಾಗಿದೆ. ಸದ್ಯ ಪ್ರವೇಶಾತಿ ಪ್ರಕ್ರಿಯೆ ನಡೆಯುತ್ತಿದೆ. ಸೈನಿಕ ಶಾಲೆಗಳ ಪ್ರವೇಶಕ್ಕೆ, ರಕ್ಷಣಾ ಸಚಿವಾಲಯದ ಸೈನಿಕ ಶಾಲೆ ಸೊಸೈಟಿಯು ಇದೇ ವರ್ಷದ ಜನವರಿಯಲ್ಲಿ ನಡೆಸಿದ್ದ ಅಖಿಲ ಭಾರತ ಮಟ್ಟದ ಪ್ರವೇಶ ಪರೀಕ್ಷೆ ತೆಗೆದುಕೊಂಡು, ವೇಟಿಂಗ್ ಲಿಸ್ಟ್‌ನಲ್ಲಿದ್ದ 24 ಮಕ್ಕಳಿಗೆ 6ನೇ ತರಗತಿಗೆ ಇಲ್ಲಿ ಪ್ರವೇಶ ದೊರೆಯಲಿದೆ. ದೇಶದ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಇವರಾಗಿದ್ದಾರೆ. ವಿವೇಕ ಶಾಲೆಯಲ್ಲಿ ಓದುತ್ತಿರುವ 36 ವಿದ್ಯಾರ್ಥಿಗಳನ್ನು ▶ 8ನೇ ಪುಟಕ್ಕೆ

## ಹಿಜಾಬ್ ವಿವಾದ: ಇಂದು ಸುಪ್ರೀಂನಲ್ಲಿ ಮೇಲ್ಮನವಿ ವಿಚಾರಣೆ

ನವದೆಹಲಿ,ಆ.28–ಕರ್ನಾಟಕ ಸರ್ಕಾರವು ರಾಜ್ಯದ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ನಿಷೇಧಿಸಿದ ಆದೇಶವನ್ನು ಎತ್ತಿಹಿಡಿದ ಹೈಕೋರ್ಟ್ ತೀರ್ಪು ವಿರುದ್ಧ ಸಲ್ಲಿಸಲಾಗಿರುವ ಮೇಲ್ಮನವಿಗಳನ್ನು ನಾಳೆ (ಸೋಮವಾರ) ಸುಪ್ರೀಂಕೋರ್ಟ್ ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.



ಕಳೆದ ಕೆಲವು ದಿನಗಳಿಂದ ತಣ್ಣಗಾದಂತೆ ಕಂಡು ಬಂದಿದ್ದ ಹಿಜಾಬ್ ವಿಷಯ ನಾಳೆ ಮತ್ತೆ ಮುನ್ನೆಲೆಗೆ ಬರಲಿದೆ. ವಿಚಾರಣೆಯ ಅಂತ್ಯದಲ್ಲಿ ಸುಪ್ರೀಂ ತೀರ್ಪು ಯಾರ ಪರವಾಗಿರಲಿದೆ? ರಾಜ್ಯ ಸರಕಾರಕ್ಕೆ ಹಿನ್ನಡೆಯಾಗಲಿದೆಯೇ? ಮೇಲ್ಮನವಿ ಸಲ್ಲಿಸಿದವರಿಗೆ ಹಿನ್ನಡೆಯಾಗಲಿದೆಯೇ? ಇತ್ಯಾದಿ ಪ್ರಶ್ನೆಗಳೂ ಮೂಡಿವೆ.

ನ್ಯಾಯಮೂರ್ತಿ ಹೇಮಂತ್ ಗುಪ್ತಾ ನೇತೃತ್ವದ ದ್ವಿಸದಸ್ಯ ಪೀಠ ಮತ್ತು ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರನ್ನೊಳಗೊಂಡ ಪೀಠವು ಆಗಸ್ಟ್ 29, ಸೋಮವಾರ, ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವುದರ ಮೇಲಿನ ನಿಷೇಧವನ್ನು ಎತ್ತಿಹಿಡಿದಿರುವ ಕರ್ನಾಟಕ ಹೈಕೋರ್ಟ್‌ನ ಆದೇಶದ ವಿರುದ್ಧದ ಮೇಲ್ಮನವಿಗಳ ವಿಚಾರಣೆ ನಡೆಸಲಿದೆ. ಸರಕಾರಿ ಅಧಿಕಾರಿಗಳ ಮಲತಾಯಿ ಧೋರಣೆಯು ವಿದ್ಯಾರ್ಥಿಗಳ ನಂಬಿಕೆಯನ್ನು ಕಸಿದುಕೊಳ್ಳುತ್ತದೆ, ವಿದ್ಯಾರ್ಥಿಗಳ ಕಲಿಕೆಗೆ ಅಡ್ಡಿ ಮಾಡುತ್ತಿದೆ, ಅನಗತ್ಯವಾಗಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡಲು ಕಾರಣವಾಗುತ್ತದೆ ಎಂದು ಮೇಲ್ಮನವಿಯಲ್ಲಿ ಆರೋಪಿಸಲಾಗಿದೆ. ▶ 6ನೇ ಪುಟಕ್ಕೆ



## ಕೆಲವು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಕೆರೆ-ಕಟ್ಟೆ ತುಂಬಿ ಕೋಡಿ ಬಿದ್ದ ಪರಿಣಾಮ

# ಮೈಸೂರಿನ ಜನ ವಸತಿ ಪ್ರದೇಶ, ಕೃಷಿ ಭೂಮಿ ಜಲಾವೃತ

- ದಿವಾನ್ ಪೂರ್ಣಯ್ಯ ನಾಲೆ ಅತಿಕ್ರಮಣದಿಂದ ಅನಾಹುತ
- ಸಂಕಷ್ಟದಿಂದ ತತ್ತರಿಸುತ್ತಿರುವ ಜನತೆ





ಮೈಸೂರು,ಆ.28(ಎಂಟಿವೈ)–ಮೈಸೂರು ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಕೆರೆ–ಕಟ್ಟೆಗಳು ತುಂಬಿ ಕೋಡಿ ಬೀಳುತ್ತಿದ್ದು, ಜನ ತತ್ತರಿಸುವಂತಾಗಿದೆ. ಅದರಲ್ಲೂ ಬೋಗಾದಿ ಸೇರಿದಂತೆ ಸುತ್ತಮುತ್ತಲಿನ ಹಲವು ಕೆರೆಗಳು ತುಂಬಿ ಹರಿಯುತ್ತಿದ್ದು ಜನ ವಸತಿ ಪ್ರದೇಶ, ತೋಟ, ಖಾಸಗಿ ಬಡಾವಣೆಗಳಿಗೆ ನುಗ್ಗಿರುವುದರಿಂದ ನೂರಾರು ಕುಟುಂಬಗಳು ಪರಿತಪಿಸುತ್ತಿವೆ.

ಮೈಸೂರು ಹೊರವಲಯದ ಬೋಗಾದಿ ಸುತ್ತಮುತ್ತ ಇರುವ ಹಲವಾರು ಕೆರೆಗಳು ಮಳೆ ನೀರಿನಿಂದ ತುಂಬಿ ಕೋಡಿ ಬಿದ್ದಿವೆ. ಕೆರೆಯಿಂದ ಉಕ್ಕುತ್ತಿರುವ ನೀರು ನೂರಾರು ಎಕರೆ ಕೃಷಿ ಭೂಮಿ ಹಾಗೂ ತೋಟಗಳಿಗೆ ನುಗ್ಗಿದ್ದು, ಅಪಾರ ಪ್ರಮಾಣ ನಷ್ಟ ಸಂಭವಿಸಿದೆ. ಅಲ್ಲದೆ ಹಲವು ಖಾಸಗಿ ಬಡಾವಣೆಗಳು ಹಾಗೂ ತೋಟದಲ್ಲಿ ವಾಸಿಸುತ್ತಿರುವವರ ಕುಟುಂಬಗಳ ಸಂಕಷ್ಟ ಹೇಳತೀರದ್ದಾಗಿದೆ. ಮನೆಗಳು ನೀರಿನಿಂದ ಆವೃತವಾಗಿದ್ದು, ಜನರು ಹೊರ ಬರಲಾಗದೇ ತೊಂದರೆಗೀಡಾಗಿದ್ದಾರೆ.

**ರಾಜಕಾಲುವೆ ಒತ್ತುವರಿ:** ಬೋಗಾದಿ ಕೆರೆ ಸೇರಿದಂತೆ ಹಲವು ಕೆರೆಗಳು ಒಂದಕ್ಕೊಂದು ಲಿಂಕ್ ಹೊಂದಿದ್ದು, ಒಂದು ಕೆರೆ ತುಂಬಿದರೆ, ರಾಜಕಾಲುವೆ ಮೂಲಕ ನೀರು ಹರಿದು ಮತ್ತೊಂದು ಕೆರೆ ಸೇರುತ್ತಿತ್ತು. ಆದರೆ ದಿವಾನ್ ಪೂರ್ಣಯ್ಯ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಕೆಲವರು ಖಾಸಗಿ ಲೇಔಟ್ ನಿರ್ಮಾಣ, ತೋಟ ಸೇರಿದಂತೆ ವಿವಿಧ ಚಟುವಟಿಕೆಗೆ ಜಾಗವನ್ನು ಅತಿಕ್ರಮಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಕೆರೆಗಳು ಕೋಡಿ ಬಿದ್ದರೆ ನೀರು ಸರಾಗವಾಗಿ ಹರಿದು ಹೋಗಲು ಸಾಧ್ಯವಾಗದೇ ವಸತಿ ಪ್ರದೇಶ, ತೋಟಗಳಿಗೆ ನುಗ್ಗಿ ಅವಾಂತರ ಸೃಷ್ಟಿ ಮಾಡುತ್ತಿವೆ.

**ಕಂಗೆಟ್ಟ ಜನ:** ಭಾರಿ ಮಳೆಯಿಂದಾಗಿ ಕೆಲ ಕೆರೆಗಳು ಕೋಡಿ ಹರಿಯುತ್ತಿದ್ದು, ಪರಸಯ್ಯನಹುಂಡಿ ಸಮೀಪದ ಕೆ.ಹೆಮ್ಮನಹಳ್ಳಿ, ಆನಂದನಗರ ಮತ್ತು ಅರ್ಪಿತಾನಗರ ಸೇರಿದಂತೆ ಇನ್ನಿತರ ಬಡಾವಣೆಗೆ ಅಪಾರ ಪ್ರಮಾಣದಲ್ಲಿ ನೀರು ನುಗ್ಗಿದ್ದು, ಭಾರಿ ಪ್ರಮಾಣದ ಹಾನಿಗೊಳಿಸಿದೆ. ಅದೇ ನೀರು ಬೋಗಾದಿ ಕೆರೆಗೂ ಹರಿದು ಅಲ್ಲಿಂದ ಬೋಗಾದಿ ಸಿಗ್ನಲ್ ವೃತ್ತಕ್ಕೆ ನುಗ್ಗಿದೆ. ಇದರಿಂದ ರಿಂಗ್ ರಸ್ತೆ ಸೇರಿದಂತೆ ಬೋಗಾದಿ ರಸ್ತೆಯಲ್ಲಿ ಹೆಚ್ಚಿನ ಪ್ರಮಾಣದ ನೀರು ಸಂಗ್ರಹವಾಗಿ ವಾಹನ ಸವಾರರು ಪರದಾಡುವಂತಾಗಿದೆ. ಕಳೆದ ವರ್ಷವೂ ಆನಂದನಗರ ಸೇರಿದಂತೆ ▶ 8ನೇ ಪುಟಕ್ಕೆ

### ದಿವಾನ್ ಪೂರ್ಣಯ್ಯ ರಾಜಕಾಲುವೆ ರಕ್ಷಣೆಗೆ ಉನ್ನತ ಸಮಿತಿ ರಚನೆ ಅಗತ್ಯ

**ಮೈಸೂರು:** ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿರುವ ದಿವಾನ್ ಪೂರ್ಣಯ್ಯ ರಾಜಕಾಲುವೆಯ ರಕ್ಷಣೆಯೊಂದಿಗೆ ಪುನರ್ ನಿರ್ಮಾಣಕ್ಕೆ ಉನ್ನತ ಸಮಿತಿ ರಚಿಸುವ ಅಗತ್ಯವಿದೆ ಎಂದು ಮೈಸೂರು ಗ್ರಾಹಕ ಪರಿಷತ್ ಸಂಚಾಲಕ ಭಾಮಿ ವಿ.ಶೆಣೈ ಒತ್ತಾಯಿಸಿದ್ದಾರೆ.



ಭಾಮಿ ವಿ.ಶೆಣೈ

ಬೋಗಾದಿ ಕೆರೆಗಳ ಕೋಡಿ ನೀರು ವಸತಿ ಪ್ರದೇಶಕ್ಕೆ ನುಗ್ಗಿ ಅವಾಂತರ ಸೃಷ್ಟಿಸುತ್ತಿರುವುದಕ್ಕೆ ಸಂಬಂಧಿಸಿದಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಈ ಹಿಂದೆ ಬೋಗಾದಿ ಹಾಗೂ ಸುತ್ತಮುತ್ತಲಿನ ಕೆರೆಗಳಿಂದ ಕುಕ್ಕರಹಳ್ಳಿ ಕೆರೆಗೆ ಶುದ್ಧ ನೀರನ್ನು ತರುವ ಉದ್ದೇಶದಿಂದ 22 ಕಿ.ಮೀ ಉದ್ದದ ಪೂರ್ಣಯ್ಯ ರಾಜಕಾಲುವೆ ನಿರ್ಮಿಸಲಾಗಿತ್ತು. ಆದರೆ, ಇದೀಗ ಈ ರಾಜಕಾಲುವೆ ಉಳಿದಿರುವುದು ಕೇವಲ 4 ಕಿ.ಮೀ ಮಾತ್ರ ಇದರಿಂದ ಕೆರೆ ತುಂಬಿದರೆ ನೀರು ಸರಾಗವಾಗಿ ಮತ್ತೊಂದು ಕೆರೆಗೆ ಹರಿಯಲಾಗದೇ ವಸತಿ ಪ್ರದೇಶಕ್ಕೆ ನುಗ್ಗುತ್ತಿದೆ ಎಂದು ವಿಷಾದಿಸಿದರು.

ಮೈಸೂರು ನಗರದ ಹಿತದೃಷ್ಟಿಯಿಂದ ಮಹಾರಾಜರ ಆಳ್ವಿಕೆ ಕಾಲದಲ್ಲೇ ಕುಕ್ಕರಹಳ್ಳಿ ಕೆರೆಯನ್ನು ನಿರ್ಮಿಸಲಾಗಿದೆ. ಬೊಮ್ಮನಹಳ್ಳಿ ಕೆರೆಯಿಂದ (ಹುಯಿಲಾಲು) ಕುಕ್ಕರಹಳ್ಳಿ ಕೆರೆಗೆ ಸಿಹಿನೀರು ತುಂಬಲು ದಿವಾನ್ ಪೂರ್ಣಯ್ಯ ಕಾಲುವೆಯನ್ನು ನಿರ್ಮಿಸಲಾಗಿದೆ. ಆದರೆ, ಕಳೆದ ಕೆಲ ವರ್ಷದಿಂದ ರಾಜಕಾಲುವೆ ಮೇಲೆ ಖಾಸಗಿ ▶ 8ನೇ ಪುಟಕ್ಕೆ

## ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : (ಬಹಳ ವರ್ಷಗಳ ನಂತರ ಸಿಕ್ಕಿದ ವಿದ್ಯಾರ್ಥಿಯನ್ನುದ್ದೇಶಿಸಿ) ಈಗ ಏನ್ ಮಾಡ್ತಾ ಇದ್ದೀಯಾ?
ವಿದ್ಯಾರ್ಥಿ : 'ಎಂಬಿಎ' ಸಾರ್.
ಮಾಸ್ಟರ್ : ಗುಡ್ 'ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್' ಅಲ್ವ
ವಿದ್ಯಾರ್ಥಿ : ಅಲ್ಲ ಸರ್, ಮಂಡ್ಯದಲ್ಲಿ ಬೋಂಡಾ ಅಂಗಡಿ.

ಮೈಸೂರು ಮಿತ್ರ

ಸೋಮವಾರ, 29 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

### ಅಮೃತವಾಹಿನಿ

ನಮ್ಮನ್ನು ನಾವು ಸರಿಪಡಿಸಿಕೊಂಡರೆ, ಇಡಿ ಜಗತ್ತನ್ನು ಸರಿಪಡಿಸಿದಂತೆ. ನಮ್ಮಲ್ಲಿ ನಾವು ಪರಿವರ್ತನೆ ತಂದುಕೊಂಡರೆ, ಜಗತ್ತಿಗೆ ಬೆಳಕು ನೀಡಿದಂತೆ.

– ರಮಣ ಮಹರ್ಷಿ

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಟ್ಟುವುದು ಕಠಿಣ, ಕೆಡಹುವುದು ಸುಲಭ.

## ನಿಮ್ಮ ಪತ್ರಗಳು

### ಟೊಮೆಟೊ ಜ್ವರ ಎಚ್ಚರಿಕೆ ಅಗತ್ಯ

ಮಾನ್ಯರೆ,

ಕೊರೊನಾದಿಂದ ಚೇತರಿಸಿಕೊಳ್ಳುತ್ತಿರುವ ಭಾರತದಲ್ಲಿ ಪ್ರಸ್ತುತ ಟೊಮೆಟೊ ಜ್ವರ (ಟೊಮೆಟೊ ಫ್ಲೂ) ಪ್ರಕರಣಗಳು ವರದಿಯಾಗುತ್ತಿರುವುದು ಜನಸಾಮಾನ್ಯರಲ್ಲಿ ಆತಂಕ ಮೂಡಿಸಿದೆ. ಅಧ್ಯಯನದ ಪ್ರಕಾರ ಟೊಮ್ಯಾಟೊ ಜ್ವರ ಒಂದರಿಂದ ಐದು ವರ್ಷದ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತಿರುವುದು ಗಂಭೀರವಾದ ವಿಚಾರವಾಗಿದೆ.



ಮೇ 6, 2022ರಲ್ಲಿ ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ಮೊದಲ ಟೊಮೆಟೊ ಜ್ವರದ ಪ್ರಕರಣವನ್ನು ಗುರುತಿಸಲಾಯಿತು. ಈ ಜ್ವರದ ಪರಿಣಾಮವಾಗಿ ದೇಹದಲ್ಲಿ ಕೆಂಪು ಮತ್ತು ನೋವಿನ ಗುಳ್ಳೆಗಳು ಹೊರ ಹೊಮ್ಮುವ ಕಾರಣ ಈ ಜ್ವರಕ್ಕೆ ಟೊಮೆಟೊ ಜ್ವರ ಎಂದೂ ಕರೆಯಲಾಗಿದೆ. ಟೊಮೆಟೊ ಜ್ವರದ ಲಕ್ಷಣಗಳೆಂದರೆ ಆಯಾಸ, ವಾಕರಿಕೆ, ವಾಂತಿ, ಅತಿಸಾರ, ನಿರ್ಜಲೀಕರಣ, ಕೀಲು ಊತ, ದೇಹದ ನೋವು, ಕೆಂಪು ನೋವಿನ ಗುಳ್ಳೆಗಳು ಇತ್ಯಾದಿ. ಕೆಲವು ಅಧ್ಯಯನಗಳ ಪ್ರಕಾರ ರೋಗ ನಿರೋಧಕ ಶಕ್ತಿಯಿಲ್ಲದವರಲ್ಲಿ ಈ ಜ್ವರ ಕಂಡುಬರುತ್ತದೆ ಎಂದು ತಿಳಿಸಲಾಗಿದೆ.

ಟೊಮೆಟೊ ಜ್ವರದಿಂದ ಬಳಲುವ ರೋಗಿಗೆ ಪ್ರತ್ಯೇಕವಾಗಿ ಚಿಕಿತ್ಸೆ ನೀಡಬೇಕು ಮತ್ತು ದ್ರವ ಪದಾರ್ಥಗಳನ್ನು ನೀಡಬೇಕು ಮತ್ತು ಗುಳ್ಳೆಗಳ ನಿವಾರಣೆಗೆ ಬಿಸಿ ನೀರಿನ ಸ್ಪಂಜನ್ನು ಬಳಸುವುದು ಸೂಕ್ತವೆಂದು ವೈದ್ಯಲೋಕ ತಿಳಿಸುತ್ತದೆ. ಇಲ್ಲಿಯವರೆಗೂ 82 ಟೊಮೆಟೊ ಜ್ವರದ ಪ್ರಕರಣಗಳು ದಾಖಲಾಗಿದ್ದು ಎಚ್ಚರ ವಹಿಸುವುದು ಅನಿವಾರ್ಯವಾಗಿದೆ. ಸಣ್ಣ ಮಕ್ಕಳಲ್ಲಿ ಟೊಮೆಟೊ ಜ್ವರ ಕಂಡುಬರುತ್ತಿರುವುದು ಆತಂಕ ಮೂಡಿಸಿದ್ದು, ಪೋಷಕರು ತಮ್ಮ ಮಕ್ಕಳನ್ನು ಜಾಗೃತವಾಗಿ ನೋಡಿಕೊಳ್ಳಬೇಕಾಗಿದೆ. ರಾಜ್ಯ ಸರ್ಕಾರ ಟೊಮೆಟೊ ಜ್ವರವನ್ನು ತಡೆಯಲು ಶೀಘ್ರವಾಗಿ ಕಾರ್ಯ ಪ್ರವೃತ್ತವಾಗಬೇಕು.

– ರಾಸುಮ ಭಟ್, ಚಿಕ್ಕಮಗಳೂರು.

### ತಲೆ ಎತ್ತಿರುವ ಅನಧಿಕೃತ ವೈದ್ಯ ಜೋಪಡಿಗಳು

ಮಾನ್ಯರೆ,

ಬೆಂಗಳೂರು–ಮೈಸೂರು, ಮೈಸೂರು–ಮಡಿಕೇರಿ, ಮೈಸೂರು–ಹಾಸನ ಹೆದ್ದಾರಿಯಲ್ಲಿ ಅಲ್ಲಲ್ಲಿ ಅವೈಜ್ಞಾನಿಕ ವೈದ್ಯ ಕುಟೀರಗಳು ತಲೆ ಎತ್ತಿದ್ದು, ಕೆಲವು ಉತ್ತೇಜಕ ಔಷಧಿಗಳ ಆಮಿಷವೊಡ್ಡಿ ನಾಟಿ ಔಷಧ ಕೊಡುವ ಮೂಲಕ ಯುವಕರು ಮತ್ತು ಮಧ್ಯ ವಯಸ್ಕರನ್ನು ಹಾದಿತಪ್ಪಿಸುತ್ತಿವೆ... ಒಮ್ಮೆ ಕುತೂಹಲಕ್ಕೋ, ರೋಗವಾಸಿಗೋ ಅಂತ ಇದರ ಒಳಹೊಕ್ಕರೆ ಅದು ಇದು ಅಂತ ಪರೀಕ್ಷೆ ಮಾಡಿ ಅತ್ಯಧಿಕ ಪ್ರಮಾಣದ ಹಣವನ್ನು ಸುಲಿಗೆ ಮಾಡುತ್ತಿವೆ. ನಂತರ ಔಷಧವನ್ನು ಮನೆಗೂ ಕೊಂಡೊಯ್ದು ಬಳಸಿ ಎಂದು ಸಲಹೆ ಸೂಚನೆಗಳನ್ನು ನೀಡಿ ಕಳುಹಿಸುತ್ತಾರೆ. ಯುವ ಜನರಿಗೆ ಮಧ್ಯವಯಸ್ಕರಿಗೆ ವಯೋಸಹಜವಾಗಿ ಕಾಡುವ ಸಮಸ್ಯೆಗಳೇ ಇವರ ಟಾರ್ಗೆಟ್ ಎನ್ನಬಹುದು. ಸಂಕೋಚ ಸ್ವಭಾವದವರು ಇಂತಹ ರೋಗಗಳ ಬಗ್ಗೆ ಇವರ ಬಳಿ ಚಿಕಿತ್ಸೆ ಪಡೆಯುತ್ತಾರೆ.

ಇವು ಸಾಮಾನ್ಯವಾಗಿ ಜನನಿಬಿಡ ಪ್ರದೇಶಗಳಲ್ಲಿ ಕಂಡುಬರುತ್ತವೆ. ಎಂತಹದೋ ಗಿಡಮೂಲಿಕೆ ತಂದು ಅದರಲ್ಲಿ ರಸತೆಗೆದು ಬಾಟಲಿಗಳಲ್ಲಿ ಸಂಗ್ರಹಿಸಿಡುತ್ತಾರೆ. ಅವುಗಳಿಗೆ ಔಷಧಿ ದಿನಾಂಕ ವರ್ಷ ಮುಗಿಯುವ ಅವಧಿಯೇ ಇರುವುದಿಲ್ಲ. ರಸ್ತೆ ಪಕ್ಕದಲ್ಲಿ ಬಿಡಾರಗಳನ್ನು ರಾಜಾರೋಷವಾಗಿ ನಿರ್ಮಿಸಿ ತಮ್ಮ ವ್ಯಾಪಾರವನ್ನು ಆರಂಭಿಸುತ್ತಾರೆ. ಇವರುಗಳು ಒಬ್ಬೊಬ್ಬರೇ ಬಂದಿಲ್ಲ ಬದಲಾಗಿ ಒಂದೊಂದು ಗುಂಪು ಕಟ್ಟಿಕೊಂಡು ಅಲ್ಲಲ್ಲಿ ಮಾನವ ನಿರ್ಮಿತ ಬಿಡಾರಗಳಲ್ಲಿ ವಾಸಿಸುತ್ತಾರೆ. ಇವರು ದೂರದ ರಾಜಸ್ತಾನ, ಪಂಜಾಬ್ ಮತ್ತಿತರ ರಾಜ್ಯಗಳಿಂದ ಆಗಮಿಸಿರುವುದಾಗಿ ತಿಳಿದು ಬಂದಿವೆ.





ಜೀವದ ಜತೆ ಚೆಲ್ಲಾಟವಾಡುವ ಇವರು ಬಂದ ಮೂಲವಾದರೂ ಯಾವುದೋ ಗೊತ್ತಿಲ್ಲ, ಜತೆಗೆ ಇಲ್ಲಿಗೆ ಬಂದು ಇರುವುದಕ್ಕೆ, ಇಂತಹ ಮೂಲಿಕೆಗಳನ್ನು ತಂದು ಮಾರಾಟ ಮಾಡುವುದಕ್ಕೆ ಇವರಿಗೆ ಪರವಾನಗಿ ನೀಡಿದವರು ಯಾರು, ಇದು ನಮ್ಮ ಆರೋಗ್ಯ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೇ, ಬಂದಿದ್ದರೂ ಜಾಣಗುರುಡೇ ತಿಳಿಯದು... ಈಗಲಾದರೂ ಈ ಬಗ್ಗೆ ಪರಿಶೀಲಿಸಿ ಸೂಕ್ತ ರೀತಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಮನವಿ.

– ಎ.ಎಸ್. ಗೋವಿಂದೇಗೌಡ,
ಪಿರಿಯಾಪಟ್ಟಣ ತಾಲೂಕು

### 'ದಿಟದ ಮನೆ'

ಮಾನ್ಯರೆ,

ವೈಯಕ್ತಿಕ ಸಂಗತಿಯೊಂದನ್ನು ಇಲ್ಲಿ ಸಾರ್ವತ್ರೀಕರಿಸಬಯಸುತ್ತೇನೆ.

ಇತ್ತೀಚೆಗೆ ನಾನೊಂದು ಹೊಸ ಮನೆ ಕಟ್ಟಿಸಿದೆ. (ಹಳೆಯದರ ತಳಹದಿಯ ಮೇಲೆ). ಅದರ 'ಗೃಹ ಪ್ರವೇಶ'ವೂ ಆಯಿತು. ಆದರೆ ಈ ವಯಸ್ಸಿನಲ್ಲಿ ಎಂಥ ಗೃಹ ಪ್ರವೇಶ!! 'ಶ್ರೀ ರಾಮಾಯಣ ದರ್ಶನ'ದ ಆರಂಭ ನೆನಪಾಗುತ್ತದೆ. 'ಈಗ ಮನೆಗೆ ಹೋಗುತ್ತೇನೆ; ಮತ್ತೊಮ್ಮೆ ಬರುತ್ತೇನೆ' ಎಂದು ಹೇಳಿಹೋದ, ಆದರೆ ಮರಳದ ತಮ್ಮ ಗುರು ಟಿ.ಎಸ್.ವೆಂಕಣ್ಣಯ್ಯನವರಿಗೆ ಕುವೆಂಪು ಚಮತ್ಕಾರ ಪೂರ್ಣವಾಗಿ ಹೇಳುತ್ತಾರೆ:

**ಮನೆಗೈದಿದಿರಿ ದಿಟಂ;**
**ದಿಟದ ಮನೆಗೈದಿದಿರಿ!**

ಇಬ್ಬರೂ ಒಂದಲ್ಲಾ ಒಂದು ದಿನ 'ದಿಟದ ಮನೆ'ಗೆ ಹೋಗಲೇಬೇಕು: ಇಲ್ಲಿರುವುದೆಲ್ಲ ಮಿಥ್ಯಾ ಗೃಹಗಳು. ("ಅಲ್ಲಿರುವುದು ನಮ್ಮನೆ, ಇಲ್ಲಿರುವುದು ಸುಮ್ಮನೆ!")

**ಆಕರ್ಷಣೆ:** ಸಿದ್ದರಾಮಯ್ಯರ ಕಾರಿಗೆ ಆಕರ್ಷಕ ಶಕ್ತಿಯಿದೆ: ಹಿಂದೊಮ್ಮೆ ಕಾರು ಕಾಗೆಯೊಂದನ್ನು ಸೆಳೆಯಿತು. (ಊಹಾಪೋಹಗಳಿಗೆ ಅನ್ವಯವಾಯಿತು); ಈಗ ಕೋಳಿಮೊಟ್ಟೆಗಳನ್ನು ಕರೆಯಿತು!

–ಸಿಪಿಕೆ, ಮೈಸೂರು

# 12ನೇ ಶತಮಾನದ ವಚನಗಳನ್ನು 21ನೇ ಶತಮಾನದಲ್ಲಿ ಓದುವ ಅವಶ್ಯಕತೆ ಏನು?

**ಸಾ**ಕಪ್ಪಾ ಸಾಕು! ಈ ವಚನಗಳನ್ನು ಯಾಕಾದರೂ ಪಠ್ಯವಾಗಿ ಇಟ್ಟಿದ್ದಾರೋ. ಒಬ್ಬರ ವಚನ ಸಾಲದು ಅಂತ ನಾಲ್ಕು, ನಾಲ್ಕು ಶರಣರ, ವಚನಕಾರರ ವಚನಗಳನ್ನು ಇಟ್ಟಿದ್ದಾರೆ.ಅಲ್ಲ ಆ ಪಠ್ಯಕ್ರಮವನ್ನು ಸಿದ್ಧಪಡಿಸಿದವರಿಗೆ ಸ್ವಲ್ಪವಾದರೂ ತಿಳುವಳಿಕೆ ಇರಬಾರದಾ. 12ನೇ ಶತಮಾನದಲ್ಲಿದ್ದ ವಚನವನ್ನು ನಾವು ಈಗ 21ನೇ ಶತಮಾನದಲ್ಲಿ ಯಾಕ್ ಓದಬೇಕು. ಅದರಿಂದ ನಮಗಾಗುವ ಲಾಭವಾದರೂ ಏನು. ಒಂದೇ ಸಮನೆ ಬೇಸರದಿಂದ ಮಾತನಾಡುತ್ತಿದ್ದ ವಿದ್ಯಾರ್ಥಿಯೊಬ್ಬನ ಈ ಮಾತುಗಳನ್ನು ತರಗತಿಯ ಹೊರಗಡೆ ನಿಂತು ಕೇಳಿಸಿಕೊಳ್ಳುತ್ತಿದ್ದ ಕನ್ನಡ ಸಹಾಯಕ ಪ್ರಾಧ್ಯಾಪಕರಿಗೆ ಒಂದು ಕ್ಷಣ ಮನಸು ಮೂಕವಾಯಿತು.

ನಿಜ, ಯಾರಿಗೇ ಆದರೂ ಒಮ್ಮೆ ಈ ತರ ಅನಿಸುವುದುಂಟು. 12ನೇ ಶತಮಾನದ ವಚನಗಳನ್ನು ಈ 21ನೇ ಶತಮಾನದಲ್ಲಿ ಯಾಕಾದರೂ ಓದಬೇಕು ಅಂತ ಅಂದುಕೊಂಡಿರಬಹುದು.ಈ ಪ್ರಶ್ನೆಗಳಿಗೆ ತಕ್ಕಮಟ್ಟಿಗಾದರೂ ಉತ್ತರ ಕೊಡಬಹುದೆಂಬ ಸಣ್ಣ ಭರವಸೆಯೊಂದಿಗೆ ಈ ಲೇಖನ ಮೂಡಿಬಂದಿದೆ.


12ನೇ ಶತಮಾನ ಒಂದು ಚಳವಳಿಯನ್ನು ಹುಟ್ಟುಹಾಕಿದ ಯುಗ. ಇವತ್ತಿಗೂ ಅಸಾಧ್ಯವಾಗಿರುವ ಜಾತಿ ಎಂಬ ಸರಪಳಿಯನ್ನು ಕಿತ್ತುಹಾಕಲು ಹೊರಟ, ಅಸಂಖ್ಯಾತ ಜನರನ್ನು ಒಂದು ಕಡೆ ಸೇರಿಸಿ ಜಾತಿ ಎಂಬ ಬೇಲಿಯನ್ನು ಕಿತ್ತೊಗೆಯಬೇಕೆಂಬ ಆಸೆಯಿಂದ ಪ್ರಾರಂಭವಾದದ್ದೇ ವಚನ ಸಾಹಿತ್ಯ. ಅದುವರೆವಿಗೂ ಅರಮನೆಗೆ ಸೀಮಿತವಾಗಿದ್ದ ಸಾಹಿತ್ಯವನ್ನು ನಡುಬೀದಿಗೆ ತಂದದ್ದು, ಸಾಮಾನ್ಯ ಜನರ ಭಾವನೆಗಳಿಗೆ ಮಹತ್ವವನ್ನು ಕೊಟ್ಟು ಅವರ ಅನುಭವದ ನುಡಿಗಳಿಗೆ ಬರಹ ರೂಪವನ್ನು ಕೊಟ್ಟಿದ್ದು ಶರಣರ ಒಂದು ದೊಡ್ಡ ಸಾಧನೆ. ವಿವಿಧ ವೃತ್ತಿಯಲ್ಲಿದ್ದವರು ತಮ್ಮ ಅನುಭವಗಳನ್ನು ಹಾಡಿನ ರೂಪದಲ್ಲಿ ಹೇಳುತ್ತಾ ರೂಪುಗೊಂಡದ್ದು ವಚನ ಸಾಹಿತ್ಯ. ಈ ಸಾಹಿತ್ಯದ ಮೇರು ವ್ಯಕ್ತಿಗಳಾಗಿ ಬಸವಣ್ಣ, ಅಲ್ಲಮ ಪ್ರಭು, ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ ಮೊದಲಾದ ವಚನಕಾರರು ಕಾಣಿಸಿಕೊಳ್ಳುತ್ತಾರೆ.

21ನೇ ಶತಮಾನದಲ್ಲಿ ಇರುವ ನಾವು ಏನನ್ನು ಬಯಸುತ್ತೇವೋ, ಯಾವುದರ ಬಗ್ಗೆ ಚಿಂತಿಸುತ್ತೇವೋ ಅವೆಲ್ಲದರ ಬಗ್ಗೆ 12ನೇ ಶತಮಾನದಲ್ಲೇ ವಚನಗಳ ರೂಪದಲ್ಲಿ ಬರೆದಿದ್ದಾರೆ ಎಂದರೆ ಆಗಿನ ಕಾಲದಲ್ಲಿದ್ದ ಜನರ ಯೋಚನಾಲಹರಿಯ ಬಗ್ಗೆ ಮೆಚ್ಚುಗೆ ಸೂಚಿಸಬೇಕಾಗುತ್ತದೆ


ಉದಾಹರಣೆಯಾಗಿ ಹೇಳುವುದಾದರೆ ನಾವೀಗ 21ನೇ ಶತಮಾನದಲ್ಲಿ ಇದ್ದೀವಿ. ಉತ್ತಮವಾಗಿ ಯೋಚಿಸಬಲ್ಲೆವು ಎಂದೆಲ್ಲಾ ಹೇಳಿದರೂ ಕೂಡ ಏನಾದರೂ ಒಂದು ಸಣ್ಣ ಟೀಕೆ ಬಂದರೆ ಅಥವಾ ನಮ್ಮ ಬಗ್ಗೆ ಇತರರು ಕೆಟ್ಟದ್ದಾಗಿ ಮಾತನಾಡಿದರೆ ಅದನ್ನು ಸಹಿಸಲಾಗದು, ಕ್ಷಣ ಮಾತ್ರವೂ ತಾಳ್ಮೆ ಇಲ್ಲದೆ ಚಡಪಡಿಸುತ್ತೇವೆ.ಇಂತಹ ಸಂದರ್ಭದಲ್ಲಿ ನನಗೆ 12ನೇ ಶತಮಾನದಲ್ಲಿದ್ದ ಅಕ್ಕಮಹಾದೇವಿಯ ಒಂದು ವಚನ ನೆನಪಾಗುತ್ತದೆ

**ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ. ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯಾ.ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ. ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.**

ಈ ವಚನದಲ್ಲಿ ಅಕ್ಕಮಹಾದೇವಿಯು ಈ ಧರೆಯಲ್ಲಿ ಜನ್ಮ ತಾಳಿದ ನಂತರ ಕಷ್ಟ–ನಷ್ಟಗಳು, ನೋವು ಅವಮಾನಗಳನ್ನು ಎದುರಿಸಲೇಬೇಕು. ಅವುಗಳಿಗೆ ಹೆದರಿ ಹಿಮ್ಮೆಟ್ಟುವುದು ಸರಿಯಲ್ಲ ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾಳೆ.









**12ನೇ ಶತಮಾನ ಒಂದು ಚಳವಳಿಯನ್ನು ಹುಟ್ಟುಹಾಕಿದ ಯುಗ. ಇವತ್ತಿಗೂ ಅಸಾಧ್ಯವಾಗಿರುವ ಜಾತಿ ಎಂಬ ಸರಪಳಿಯನ್ನು ಕಿತ್ತುಹಾಕಲು ಹೊರಟ, ಅಸಂಖ್ಯಾತ ಜನರನ್ನು ಒಂದು ಕಡೆ ಸೇರಿಸಿ ಜಾತಿ ಎಂಬ ಬೇಲಿಯನ್ನು ಕಿತ್ತೊಗೆಯಬೇಕೆಂಬ ಆಸೆಯಿಂದ ಪ್ರಾರಂಭವಾದದ್ದೇ ವಚನ ಸಾಹಿತ್ಯ. ಅದುವರೆವಿಗೂ ಅರಮನೆಗೆ ಸೀಮಿತವಾಗಿದ್ದ ಸಾಹಿತ್ಯವನ್ನು ನಡುಬೀದಿಗೆ ತಂದದ್ದು, ಸಾಮಾನ್ಯ ಜನರ ಭಾವನೆಗಳಿಗೆ ಮಹತ್ವವನ್ನು ಕೊಟ್ಟು ಅವರ ಅನುಭವದ ನುಡಿಗಳಿಗೆ ಬರಹ ರೂಪವನ್ನು ಕೊಟ್ಟಿದ್ದು ಶರಣರ ಒಂದು ದೊಡ್ಡ ಸಾಧನೆ. ವಿವಿಧ ವೃತ್ತಿಯಲ್ಲಿದ್ದವರು ತಮ್ಮ ಅನುಭವಗಳನ್ನು ಹಾಡಿನ ರೂಪದಲ್ಲಿ ಹೇಳುತ್ತಾ ರೂಪುಗೊಂಡದ್ದು ವಚನ ಸಾಹಿತ್ಯ**

ಪ್ರಸ್ತುತ ದಿನಗಳಲ್ಲಿ ಒಂದು ಸಣ್ಣ ಮಾತನ್ನು ಬೇರೆಯವರಿಂದ ಕೇಳಲು ಇಷ್ಟಪಡದ ನಮ್ಮ ಯುವ ಜನಾಂಗಕ್ಕೆ ನೀತಿಯನ್ನು ಹೇಳಿದಂತಿದೆ ಈ ವಚನ. ನಿಜ ಅಲ್ವ, ಮನುಷ್ಯನಾಗಿ ಹುಟ್ಟಿ ಬಂದ ಮೇಲೆ ಏನೇ ಅವಮಾನ, ನಿಂದೆಗಳು ಬಂದರೂ ಒಂದು ವೇಳೆ ಹೊಗಳಿಕೆಗಳು ಬಂದರೂ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಗುಣ ನಮ್ಮದಾಗಬೇಕೆಂಬ ನೀತಿ ಈ ವಚನದಲ್ಲಿದೆ. ಹೊಗಳಿಕೆಗೆ ಹಿಗ್ಗದೇ, ತೆಗಳಿಕೆಗೆ ಕುಗ್ಗದೆ ಎರಡನ್ನೂ ಸಮಾನಚಿತ್ತವಾಗಿ ಸ್ವೀಕರಿಸಿದರೆ ಬದುಕು ಸುಂದರವಾಗಿರುತ್ತದೆ.

ಇನ್ನು ಮುಂದಿನ ಭವಿಷ್ಯವನ್ನು ನೆನೆದು ಆತಂಕಪಡುವ ನಾವು ಈ ವಚನವನ್ನು ಗಮನಿಸಿದರೆ ಉತ್ತಮ ಅಂತ ಅನ್ನಿಸುತ್ತದೆ. ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ನಮಗೀಗಲೇ ಬರಲಿ, ಇದಕಾರಂಜುವರು, ಇದಕಾರಳುಕುವರು 'ಜಾತಸ್ಯ ಮರಣಂ ಧ್ರುವಂ' ಎಂಬುದಾಗಿ ನಮ್ಮ ಕೂಡಲಸಂಗಮದೇವರು ಬರೆದ ಬರೆಹವ ತಪ್ಪಿಸುವಡೆಹರಿಬ್ರಹ್ಮಾದಿಗಳಿಗಳವಲ್ಲ

ಏನೇ ಬಂದರೂ ಅದಕ್ಕೆ ಹೆದರದೆ ಬಾಳಬಹುದು. ಮುಂದಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.ಏನೇ ಬಂದರೂ ಅದನ್ನು ಎದುರಿಸಿ ನಿಲ್ಲುವೆ ಎಂಬ ಅರ್ಥವನ್ನು ಕೊಡುವ ಈ ವಚನ ಕೇವಲ 12ನೇ ಶತಮಾನಕ್ಕಲ್ಲ ಎಲ್ಲಾ ಶತಮಾನಕ್ಕೂ ಅನ್ವಯವಾಗುತ್ತದೆ. ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನಿಗೂ ಕೂಡ ಒಂದಲ್ಲ ಒಂದು ಚಿಂತೆ ಇರುತ್ತದೆ. ಚಿಂತೆ ಇಲ್ಲದ ಮನುಷ್ಯರು ಯಾರಾದರೂ ಉಂಟಾ? ಎಂಬ ಪ್ರಶ್ನೆ ಎದುರಾದರೆ ಉತ್ತರ ಖಂಡಿತವಾಗಿಯೂ ಇಲ್ಲ ಎಂದೇ ಬರುತ್ತದೆ. ಚಿಂತೆ ಯಾವ್ಯಾವ ರೀತಿಯಲ್ಲಿ ಇರುತ್ತದೆ ಎಂಬುದನ್ನು ಕೂಡ ಅಂಬಿಗರ ಚೌಡಯ್ಯನ ವಚನವೊಂದು ತಿಳಿಸುತ್ತದೆ

ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ,ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ,ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ,ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ, ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು. ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ [ನಿಜ]ಶರಣನು.

ಮನುಷ್ಯನಿಗೂ ಒಂದು ಚಿಂತೆ ಅಥವಾ ಒಂದು ಸಮಸ್ಯೆ ಮುಗಿದರೆ ಮತ್ತೊಂದು ಚಿಂತೆ ಅಥವಾ ಸಮಸ್ಯೆ ಎದುರಾಗುತ್ತದೆ ಎಂಬುದನ್ನು 12ನೇ ಶತಮಾನದಲ್ಲೇ ಅಂಬಿಗರ ಚೌಡಯ್ಯ ಈ ರೀತಿ ತಿಳಿಸಿದ್ದಾನೆ.ಈ ವಚನ ಆ ಕಾಲಕ್ಕೆ ಮಾತ್ರವಲ್ಲ , ಎಲ್ಲಾ ಕಾಲಕ್ಕೂ ಕೂಡ ಅನ್ವಯವಾಗಬಲ್ಲದು.

ಇವತ್ತಿನ ಸಮಾಜದಲ್ಲಿ ನಾವೇನೇ ಮಾಡಿದರೂ ಅದನ್ನು ಟೀಕಿಸುವವರು, ಅಲ್ಲಗಳೆಯುವವರು, ಇಲ್ಲಸಲ್ಲದ್ದನ್ನು ಮಾತನಾಡುವವರು ಕಂಡು ಬರುತ್ತಾರೆ. ಬಹುಶಃ ಇಂತಹವರು ಎಲ್ಲಾ ಶತಮಾನಗಳಲ್ಲೂ ಕಂಡುಬರುತ್ತಾರೆ ಅಂತ ಅನಿಸುತ್ತದೆ.

**ಉಂಡಡೆ ಭೂತವೆಂಬರು,**
**ಉಣದಿರ್ದಡೆ ಚಕೋರಿಯೆಂಬರು.**
**ಊರೊಳಗಿರ್ದಡೆ ಸಂಸಾರಿಕನೆಂಬರು,**
**ಅಡವಿಯೊಳಗಿರ್ದಡೆ ಮರ್ಕಟನೆಂಬರು.**
**ಮಾತನಾಡಿದಡೆ ಪಾಪಕರ್ಮಿಯೆಂಬರು,**
**ಮಾತನಾಡದಿರ್ದಡೆ ಮುಸುಕರ್ಮಿಯೆಂಬರು.**
**ಮಲಗದಿರ್ದಡೆ ಚೋರನೆಂಬರು,**
**ಮಲಗಿರ್ದಡೆ ಜಡದೇಹಿಯೆಂಬರು.**
**ಇಂತೀ ವಸುಧೆಯೊಳಗೆ ಎಂಟುವಿಧ**
**ಕಳೆಯಲು ವಶವಲ್ಲ ಕಾಣಾ**
**ಕಲಿದೇವರದೇವಾ.**

–ಮಡಿವಾಳ ಮಾಚಿದೇವ

ನಾವು ಏನೇ ಕೆಲಸ ಮಾಡಿದರೂ, ಮಾಡದೇ ಇದ್ದರೂ ಕೂಡ ಮಾತನಾಡುವ, ಟೀಕೆ ಮಾಡುತ್ತಲೇ ಇರುವರು ಎಂಬುದನ್ನು ಮಡಿವಾಳ ಮಾಚಿದೇವ ಆಗಿನ ಕಾಲದಲ್ಲೇ ತಿಳಿಸಿದ್ದಾನೆ. ಈ ವಚನವೂ ಕೂಡ ಎಲ್ಲಾ ಕಾಲಕ್ಕೆ ಅನ್ವಯವಾಗುವಂತಹದ್ದು.

ಪ್ರಸ್ತುತ ದಿನಗಳಲ್ಲಿ ಮನುಷ್ಯರ ಜೀವಿತಾವಧಿ ಕಡಿಮೆಯಾಗುತ್ತಾ ಬರುತ್ತಿದೆ.ಕಾರಣ – ಒತ್ತಡ, ಕೋಪ, ಹತಾಶೆ ಮೊದಲಾದ ಕಾರಣಗಳಿಂದ ಮಾನಸಿಕ ನೆಮ್ಮದಿಗಳನ್ನು ಕಳೆದುಕೊಳ್ಳುತ್ತಾ ಜೀವನವನ್ನು ಸಾಗಿಸುತ್ತಾ ಇರುವ ನಮಗೆ ಈ ಕೋಪವನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗಿಲ್ಲ. ಕೋಪದ ಬಗ್ಗೆಯೂ ಕೂಡ ವಚನಕಾರರು ವಚನಗಳನ್ನು ಬರೆದಿದ್ದಾರೆ.

**ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ ತನಗಾದ ಆಗೇನು ಅವರಿಗಾದ ಚೇಗೆಯೇನುತನುವಿನ ಕೋಪ ತನ್ನ ಹಿರಿಯತನದ ಕೇಡು. ಮನದ ಕೋಪ ತನ್ನ ಅರಿವಿನ ಕೇಡು.ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು ಕೂಡಲಸಂಗಮದೇವಾ.**

ಕೋಪ ಎಂಬ ಬೆಂಕಿ ಮೊದಲು ಸುಡುವುದು ನಮ್ಮನ್ನೇ ಹೊರತು ಬೇರೆಯವರನ್ನಲ್ಲ ಎಂಬಂಶವನ್ನು ಈ ವಚನ ತಿಳಿಸುತ್ತದೆ. ವಿದ್ಯೆಯನ್ನು ಕಲಿಸುವ ಶಿಕ್ಷಕರು ,ವಿದ್ಯೆ ಕಲಿಯುವ ಶಿಷ್ಯರು ಕಾಲ ಕಾಲಕ್ಕೆ ಹೇಗೆ ಬದಲಾಗುತ್ತಾರೆ ಎಂಬುದನ್ನು ಅಲ್ಲಮ ಪ್ರಭುವಿನ ಈ ವಚನ ತಿಳಿಸುತ್ತದೆ.

**ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ–ಆಗಲಿ ಮಹಾಪ್ರಸಾದವೆಂದೆನಯ್ಯ ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ–ಆಗಲಿ ಮಹಾಪ್ರಸಾದವೆಂದೆನಯ್ಯ. ದ್ವಾಪರ ಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದರೆ–ಆಗಲಿ ಮಹಾಪ್ರಸಾದವೆಂದೆನಯ್ಯ. ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ–ಆಗಲಿ ಮಹಾಪ್ರಸಾದವೆಂದೆನಯ್ಯ, ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು.**

ಬಹುಶಃ ಕಾಲದ ಮಹಿಮೆ, ಕಾಲ–ಕಾಲಕ್ಕೆ ಬದಲಾಗುವ ಗುರು–ಶಿಷ್ಯರ ಮನೋಭಾವನೆಗಳನ್ನು ಈ ವಚನ ತಿಳಿಸುವ ರೀತಿ ಬೆರಗುಗೊಳಿಸುವಂತಿದೆ. ತೋರಿಕೆಯ ಭಕ್ತಿಯನ್ನು ಮಾಡುತ್ತಾ ಜನರನ್ನೂ ಮೋಸ ಮಾಡುವಂತಹ ಜನರಿಗೆ ಚಾಟಿ ಬೀಸಿದಂತೆ ಜೇಡರ ದಾಸಿಮಯ್ಯ ವಚನವೊಂದನ್ನು ಬರೆದಿದ್ದಾರೆ.

**ಬರು ಸಗನ ಭಕ್ತಿ ದಿಟವೆಂದು ನಚ್ಚಲು ಬೇಡ; ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತು ಕಾಣಾ ರಾಮನಾಥ.**

ಸುಳ್ಳು ಅಥವಾ ಕಪಟತನದ ನಡೆನುಡಿಗಳಿಂದ ಸಹ ಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುತ್ತಾ, ಜನಮೆಚ್ಚುಗೆಯನ್ನು ಪಡೆಯಲೆಂದು ದೇವರಲ್ಲಿ ಒಲವು ಉಳ್ಳವನಂತೆ ಬಹುಬಗೆಯ ಪೂಜೆ ಅಥವಾ ಆಚರಣೆಗಳಲ್ಲಿ ತೊಡಗಿರುವ ವ್ಯಕ್ತಿಯನ್ನು ಒಳ್ಳೆಯವನೆಂದು ನಂಬಬಾರದು ಎಂಬ ಎಚ್ಚರಿಕೆಯನ್ನು ಈ ವಚನದಲ್ಲಿ ನೀಡಲಾಗಿದೆ.

ಈ ಮೇಲೆ ತಿಳಿಸಿರುವ ವಚನಗಳ ಭಾಗಗಳು ಕೇವಲ ವಚನವೆಂಬ ಸಮುದ್ರದೊಳಗಿನಿಂದ ಬೊಗಸೆಯಲ್ಲಿ ನೀರನ್ನು ಹಿಡಿದಂತೆ ಕೇವಲ ಉದಾಹರಣೆಗಳು ಮಾತ್ರ. ಇನ್ನೂ ತಿಳಿಯುವಂತಹ, ತಿಳಿದುಕೊಳ್ಳಬೇಕಾದಂತಹ ವಚನಗಳು ವಿಫುಲವಾಗಿವೆ. ತಿಳಿದುಕೊಂಡರೆ ಸರಿಯಾಗಿ ಅರ್ಥೈಸಿಕೊಂಡವರಿಗೆ ಯಾಕೆ 12ನೇ ಶತಮಾನದ ವಚನಗಳನ್ನು ನಾವು 21ನೇ ಶತಮಾನದಲ್ಲಿ ಓದುವ ಅವಶ್ಯಕತೆಯಾದರೂ ಏನು ಎಂಬ ಪ್ರಶ್ನೆಗೆ ಉತ್ತರ ಸಮರ್ಪಕವಾಗಿ ತಿಳಿಯುತ್ತದೆ. ಏಕೆಂದರೆ ವಚನ ಸಾಹಿತ್ಯದಲ್ಲಿ ವಚನಕಾರರು ತಿಳಿಸಿರುವ ವಿಷಯಗಳು, ನಡೆಸಿರುವ ಚರ್ಚೆಗಳು ಎಲ್ಲಾ ಕಾಲಕ್ಕೂ ಅನ್ವಯ ಮತ್ತು ಅನುಕರಣೀಯವಾದವುಗಳು.

■ ರಾಘವೇಂದ್ರ ಸಿ.ಎಸ್.
ಸಹಾಯಕ ಪ್ರಾಧ್ಯಾಪಕರು,
ಹಿಂದೂಸ್ಥಾನ್ ಕಾಲೇಜು, ಮೈಸೂರು

# ಮೀಸಲಾತಿ ಬಯಸದೆ, ಸ್ವಯಂ ಉದ್ಯಮಿಗಳಾಗಿ, ಉದ್ಯೋಗ ನೀಡಿ

## ನಾಯಕ ಸಮುದಾಯದವರಿಗೆ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಸಲಹೆ

● ಬೇಡುವುದಕ್ಕಿಂತ ಕೊಡುವ ಕೈಗಳಾಗಿ ಬೆಳೆಯಿರಿ ● ಶಿಕ್ಷಣದಿಂದ ಎಲ್ಲಾ ಕ್ಷೇತ್ರಗಳಲ್ಲೂ ಬೆಳೆಯಬಹುದು ● ಸಾಧಕರಿಗೆ, ಪ್ರತಿಭಾವಂತರಿಗೆ ಸನ್ಮಾನ

ಮೈಸೂರು, ಆ.28(ಎಂಟಿವೈ)–ಸಾಮಾನ್ಯ ವರ್ಗದಿಂದಲೇ ನಾಯಕ ಸಮುದಾಯವು ಸ್ಪರ್ಧೆ ಮಾಡಿ ಅವಕಾಶ ಪಡೆಯುವ ಮೂಲಕ ಮೀಸಲಾತಿ ಸೀಮಿತ ಪರಿಧಿಯಿಂದ ಹೊರಬರಬೇಕು. ಅಲ್ಲದೇ ಸರ್ಕಾರಿ ಉದ್ಯೋಗವನ್ನೇ ನಿರೀಕ್ಷಿಸದೆ ಸ್ವ–ಉದ್ಯಮಿಗಳಾಗಿ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಮುಂದಾಗಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ವಾಲ್ಮೀಕಿ ಭವನದಲ್ಲಿ ರಾಜ್ಯ ನಾಯಕರ ಯುವ ಸೇನೆ, ರವಿ ಡಿ. ಚನ್ನಣ್ಣನವರ್ ಅಭಿಮಾನಿ ಬಳಗ, ಸತೀಶ್ ಜಾರಕಿಹೊಳಿ ಅಭಿಮಾನಿ ಬಳಗದಿಂದ ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ಹಿಂದುಳಿದ ವರ್ಗಗಳಿಗೆ ನೀಡಲಾಗುವ ಮೀಸಲಾತಿ ಪ್ರಮಾಣ ಕಡಿಮೆಯಾಗುತ್ತಿದೆ. ಈ ರೀತಿಯ ಬದಲಾವಣೆಗಳನ್ನು ಎದುರಿಸಲು ಸಮುದಾಯದ ಜನತೆ ಸಿದ್ಧರಾಗಬೇಕು ಎಂದರು.

ಸಾಮಾನ್ಯ ವರ್ಗದ ಕೋಟಾದಡಿಯಲ್ಲಿಯೇ ಸ್ಪರ್ಧಿಸಿ ಸವಲತ್ತುಗಳನ್ನು ಪಡೆಯುವ ಸಾಮರ್ಥ್ಯ ಹಾಗೂ ಮನೋಭಾವ ಸೃಷ್ಟಿಸಿಕೊಳ್ಳಬೇಕು. ಇಲ್ಲದಿದ್ದರೆ ಮುಂದೆ ಎದುರಾಗುವ ಸವಾಲುಗಳನ್ನು ಎದುರಿಸಲು ಕಷ್ಟಕರವಾಗಲಿದೆ ಎಂದರು. ಸಂವಿಧಾನವಿಲ್ಲದಿದ್ದರೆ ನಮ್ಮಂತಹ ಸಮುದಾಯದವರು ಅವಕಾಶಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲರಂತೆ ನಾವು ತಲೆ ಎತ್ತಿ ಬದುಕಲು ಸಾಧ್ಯವಾಗುತ್ತಿರಲಿಲ್ಲ. ಸಂವಿಧಾನ ನಮ್ಮಂತಹ ಹಿಂದುಳಿದ ವರ್ಗಗಳಿಗೆ ಎಲ್ಲಾ ರೀತಿಯ ಸ್ಥಾನ–ಮಾನಗಳನ್ನು ನೀಡಿದೆ. ಹೀಗಾಗಿ ಸಂವಿಧಾನ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಸಂವಿಧಾನದಲ್ಲಿ ಹೇಳಿರುವಂತೆ ಸಮ–ಸಮಾಜದ ನಿರ್ಮಾಣ ಆಗಬೇಕು. ಬೇಡುವುದಕ್ಕಿಂತ ಕೊಡುವ ಕೈಗಳಾಗಿ ಸಮುದಾಯದವರು ಬೆಳೆಯಬೇಕು. ಇದಕ್ಕಾಗಿ ಶಿಕ್ಷಣವೇ ಬಹು ದೊಡ್ಡ ಆಸ್ತಿಯಾಗಿದೆ. ಈ ಹಿನ್ನೆಲೆಯಲ್ಲಿ ಎಸ್ಎಸ್ಎಲ್‌ಸಿ, ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸುವುದು ಶ್ಲಾಘನೀಯ. ಡಾ.ಅಂಬೇಡ್ಕರ್ ಹೇಳಿರುವ ಮಾತಿನಂತೆ ಶಿಕ್ಷಣ ಪಡೆದರೆ ಎಲ್ಲ ಕ್ಷೇತ್ರಗಳಲ್ಲೂ ಮುಂದುವರಿಯಬಹುದು ಎಂದು ಅಭಿಪ್ರಾಯಪಟ್ಟರು.



### ರಾಜಕೀಯ ಪ್ರವೇಶದ ಸುಳಿವು ನೀಡಿದ ರವಿ ಚನ್ನಣ್ಣನವರ್

ಭವಿಷ್ಯದಲ್ಲಿ ಮೈಸೂರು ಭಾಗದ ಜನರ ನಿರೀಕ್ಷೆಯಂತೆ ನಡೆದುಕೊಳ್ಳುತ್ತೇನೆ ಎಂದು ಹೇಳಿಕೆ ನೀಡುವ ಮೂಲಕ ಪೊಲೀಸ್ ಅಧಿಕಾರಿ ರವಿ ಡಿ.ಚೆನ್ನಣ್ಣನವರ್ ಮುಂದಿನ ದಿನಗಳಲ್ಲಿ ರಾಜಕೀಯ ಕ್ಷೇತ್ರಕ್ಕೆ ಬರುವ ಇಂಗಿತ ವ್ಯಕ್ತಪಡಿಸಿದರು. ಇದೇ ಕಾರ್ಯಕ್ರಮದಲ್ಲಿ ಸಾಕಷ್ಟು ಮಂದಿ ನನ್ನ ಒಡನಾಡಿಗಳು ಸಾರ್ ನಿಮ್ಮ ಮೇಲೆ ಸಾಕಷ್ಟು ನಿರೀಕ್ಷೆಗಳಿವೆ. ಅದಕ್ಕೆ ಪೂರಕವಾಗಿ ನಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಅದಕ್ಕೂ ಮುನ್ನ ಮುಂದಿನ 4 ತಿಂಗಳಲ್ಲಿ ಮೈಸೂರಿನಲ್ಲಿ ಸುಸಜ್ಜಿತ ಸ್ಪರ್ಧಾತ್ಮಕ ತರಬೇತಿ ಕೇಂದ್ರ ಆರಂಭಿಸುತ್ತಿದ್ದೇನೆ. ಇದಲ್ಲದೇ ರಾಜ್ಯದ ಇನ್ನೂ ಕೆಲವೆಡೆ ಕೇಂದ್ರ ಆರಂಭಿಸುತ್ತಿದ್ದೇನೆ. ಇದು ನನ್ನ ಮುಂದಿನ ಮೊದಲ ಆದ್ಯತೆಯಾಗಿದೆ. ಹೀಗಾಗಿ ತಕ್ಷಣಕ್ಕೆ ನಿರ್ಧಾರ ಕೈಗೊಳ್ಳಲಾಗದಿದ್ದರೂ ನಂತರದ ಅವಧಿಯಲ್ಲಿ ಜನರ ನಿರೀಕ್ಷೆಯಂತೆ ನಡೆದುಕೊಳ್ಳುತ್ತೇನೆ ಎನ್ನುವ ಮೂಲಕ ರಾಜಕೀಯಕ್ಕೆ ಬರುವ ಇಂಗಿತ ವ್ಯಕ್ತಪಡಿಸಿದರು.

ಸಿಐಡಿ ವಿಭಾಗ ವರಿಷ್ಠಾಧಿಕಾರಿ ರವಿ ಡಿ. ಚೆನ್ನಣ್ಣನವರ್ ಮಾತನಾಡಿ, ಸಮಾಜದಲ್ಲಿ ನಾಗರಿಕ ಪ್ರಜ್ಞೆ ಹೆಚ್ಚಾಗಬೇಕು. ಹೀಗೆ ಜಾಗೃತರಾದ ಸಂಘಟನೆಗಳು, ಹೋರಾಟ, ಅಭಿಯಾನಗಳು ನೊಂದವರಿಗೆ, ಇಲ್ಲದವರಿಗೆ ಭರವಸೆ ಹುಟ್ಟಿಸುತ್ತವೆ. ಆತ್ಮವಿಶ್ವಾಸವನ್ನು ರೂಪಿಸಿಕೊಂಡು ಸಮಾಜವನ್ನು ಎಚ್ಚರಿಸುವ ಕೆಲಸ ಮಾಡಬೇಕು. ನಾವು ಇರುವ ಪರಿಸ್ಥಿತಿಯನ್ನು ನೆನೆದು ಮರಗುವುದಕ್ಕಿಂತ ನಮಗಿಂತಲೂ ಅವಕಾಶ ವಂಚಿತರಾದವರನ್ನು ಪ್ರೇರಣೆಯಾಗಿ ಪಡೆಯಬೇಕು. ಆದರೆ ನಮ್ಮ ಸಹವಾಸ ನಮಗಿಂತಲೂ ಬುದ್ಧಿಶಕ್ತಿ, ಆಲೋಚನೆ ಸೇರಿದಂತೆ ಎಲ್ಲಾ ರೀತಿಯಲ್ಲಿಯೂ ದೊಡ್ಡಮಟ್ಟದಲ್ಲಿ ಇರುವವರೊಂದಿಗೆ ಇರಬೇಕು ಎಂದರು. ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನಾಯಕ ಸಮಾಜ ರಾಜಕೀಯ, ಶೈಕ್ಷಣಿಕವಾಗಿ ಮುಂದುವರಿಯಬೇಕು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಅತೀ ಹೆಚ್ಚು ಅಂಕ ಪಡೆದ ನಾಯಕ ಸಮಾಜದ 104 ಎಸ್ಎಸ್ಎಲ್‌ಸಿ, 126 ಪಿಯುಸಿ ವಿದ್ಯಾರ್ಥಿಗಳನ್ನು ಹಾಗೂ ಸಮಾಜದ ನಾನಾ ಕ್ಷೇತ್ರದಲ್ಲಿ ಸಾಧನೆ ಮಾಡಿದ 20 ಮಂದಿ ಸಾಧಕರನ್ನು ಸನ್ಮಾನಿಸಲಾಯಿತು. ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ರಾಜ್ಯ ನಾಯಕರ ಯುವಸೇನೆ ರಾಜ್ಯಾಧ್ಯಕ್ಷ ದೇವರಾಜ್, ಟಿ.ಕಾಟೂರು ರಾಜ್ಯ ನಾಯಕರ ಯುವ ಸೇನೆ ಜಿಲ್ಲಾಧ್ಯಕ್ಷ ಶಿವಕುಮಾರ್, ಹೆಚ್.ಡಿ.ಕೋಟೆ ತಾಲೂಕು ನಾಯಕರ ಸಂಘದ ಅಧ್ಯಕ್ಷ ಹರೀಶ್, ಮುಕ್ತ ವಿವಿ ಮನೋವಿಜ್ಞಾನ ಪ್ರಾಧ್ಯಾಪಕ ಪ್ರೊ.ಮಂಜುನಾಥ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

# ಕಾವಿಕಲೆ ಕಾರ್ಯಾಗಾರದಲ್ಲಿ ಕಲಾವಿದರಿಗೆ ಸನ್ಮಾನ



ಮೈಸೂರು, ಆ.28(ಜಿಎ)– ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಎಬಿವಿಪಿ ಅಂಗ ಸಂಸ್ಥೆಯಾದ ಆರ್ಟ್ ಮ್ಯಾಟರ್ ಹಾಗೂ ಮೈಸೂರು ವಿವಿ ಆಶ್ರಯದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ನಡೆದ ನಾಲ್ಕು ದಿನಗಳ ರಾಜ್ಯ ಮಟ್ಟದ ಕಾವಿಕಲೆ ಕಾರ್ಯಾಗಾರದ ಭಾನುವಾರ ಸಂಪನ್ನಗೊಂಡಿತು

ನಾಲ್ಕು ದಿನಗಳ ರಾಜ್ಯ ಮಟ್ಟದ ಕಾವಿಕಲೆ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಕಲಾವಿದರಿಗೆ ಬಹುಮಾನ ನೀಡಿ ಅಭಿನಂಧಿಸಲಾಯಿತು. ಈ ವೇಳೆ ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಮಾತನಾಡಿ, ಸರ್ವತೋಮುಖ ಸಮಾಜ ಮತ್ತು ಭಾರತೀಯ ಸಂಸ್ಕೃತಿ ಕಟ್ಟುವಲ್ಲಿ ಕಾವಿಕಲೆ ರೀತಿಯ ಕಲೆಗಳು ಪ್ರಮುಖ ಪಾತ್ರವಹಿಸುತ್ತಿದ್ದು, ಕಲಾವಿದರು ತಾಳ್ಮೆಯಿಂದ ತಮ್ಮ ಮನಸ್ಥಿತಿಯನ್ನು ರೂಪಿಸಿಕೊಂಡಿರುತ್ತಾರೆ. ವಿದ್ಯೆ ಯಾರೂ ಕದಿಯದ ಸೊತ್ತು ಎಂಬ ವಾಡಿಕೆಯ ಮಾತಿದೆ. ಅಂತೆಯೇ ಕಲೆಯು ಯಾರು ಕದಿಯುವ ಸೋತ್ತಲ್ಲ. ಇತ್ತೀಚಿನ ಮೊಬೈಲ್ ಯುಗದಲ್ಲಿ ಓದುವುದು ಮತ್ತು ಬರೆಯುವುದನ್ನು ನಿಲ್ಲಿಸಿದ್ದೇವೆ ಹಾಗೂ ಕೇಳಿಸಿಕೊಳ್ಳುವುದನ್ನು ಸಂಪೂರ್ಣವಾಗಿ ಕಡಿಮೆ ಮಾಡುತ್ತಿರು ವುದರಿಂದ ನಮ್ಮಲ್ಲಿನ ಜ್ಞಾನದ ಸರಕು ಕಡಿಮೆಯಾಗುತ್ತಿದೆ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತ ಇಲಾಖೆಯಲ್ಲಿ ನಾನು ಇರುವುದು ಹೂವಿನ ಜೊತೆ ನಾರು ಸ್ವರ್ಗ ಸೇರುವಂತೆ ನಿರಂತರ ಕಲಾವಿದ ಒಡನಾಟದೊಂದಿಗೆ ನಾವು ಅನೇಕ ವಿಚಾರಗಳನ್ನು ಕಲಿತುಕೊಂಡಿದ್ದೇನೆ. ಕಲೆ ವಿಚಾರದೊಂದಿಗೆ ಸಮಾಜಮುಖಿ ಕಾರ್ಯ ಮಾಡುವ ಮನಸ್ಸಿದ್ದರೆ, ನಮ್ಮ ಇಲಾಖೆಯು ಸದಾಕಾಲ ನಿಮ್ಮ ಕೈಜೋಡಿಸಲಿದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಸಚಿವ ( ಪರೀಕ್ಷಾಂಗ ) ಪ್ರೊ.ಎ.ಪಿ. ಜ್ಞಾನಪ್ರಕಾಶ್, ಕರ್ನಾಟಕ ಲಲಿತಾಕಲಾ ಅಕಾಡೆಮಿ ಅಧ್ಯಕ್ಷ ಎಚ್. ಮಹೇಂದ್ರ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಪ್ರಾಧ್ಯಾಪಕ ಡಾ.ವಿಟ್ಟಲ್ ರೆಡ್ಡಿ ಚುಳುಕಿ ಉಪಸ್ಥಿತರಿದ್ದರು.

# ದಿ ಕಾಸ್ಮೋಪಾಲಿಟನ್ ಕ್ಲಬ್ ಚುನಾವಣೆಯಲ್ಲಿ ಸಿ.ನಾರಾಯಣಗೌಡ ಬಣ ಜಯಬೇರಿ

ಮೈಸೂರು, ಆ.28(ಎಂಕೆ)– ಮೈಸೂರಿನ ಪ್ರತಿಷ್ಠಿತ ದಿ ಕಾಸ್ಮೋಪಾಲಿಟನ್ ಕ್ಲಬ್(ಸಿಸಿ ಕ್ಲಬ್)ನ 2022–23ನೇ ಸಾಲಿನ ಆಡಳಿತ ಮಂಡಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಕ್ಲಬ್‌ನ ಮಾಜಿ ಅಧ್ಯಕ್ಷ ಹಾಗೂ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಬಣ ಜಯಬೇರಿ ಬಾರಿಸಿದೆ.

ಇಂದು ಬೆಳಿಗ್ಗೆ 10.30ಕ್ಕೆ ಸರ್ವ ಸದಸ್ಯರ ಸಭೆ ನಡೆದ ನಂತರ ಮಧ್ಯಾಹ್ನ 1 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಚುನಾವಣೆ ನಡೆದು ಮತ ಎಣಿಕೆ ಕಾರ್ಯವನ್ನು ಚುನಾವಣಾಧಿಕಾರಿ ಕೆ.ಎನ್.ಸುರೇಶ್ ಕುಮಾರ್ ನೇತೃತ್ವದಲ್ಲಿ ನಡೆಸಲಾಯಿತು. ಚುನಾವಣೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿ ಸ್ಥಾನಕ್ಕೆ ತಲಾ ಇಬ್ಬರು, ಖಜಾಂಚಿ ಸ್ಥಾನಕ್ಕೆ ಮೂವರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಒಂಬತ್ತು ಮಂದಿ ಸ್ಪರ್ಧಿಸಿದ್ದರು.


656 ಮಂದಿ ಸದಸ್ಯರು ಮತ ಚಲಾಯಿಸಿದ್ದು, ಅಧ್ಯಕ್ಷರಾಗಿ ವಿ.ಗಿರೀಶ್‌ಗೌಡ 364 ಮತ ಪಡೆದು ಜಯಶೀಲರಾದರೆ, ಅವರ ಪ್ರತಿಸ್ಪರ್ಧಿ ಎನ್.ಶ್ರೀನಿವಾಸ 292 ಮತ ಪಡೆದರು. 379 ಮತ ಪಡೆದು ಹೆಚ್.ಎನ್.ಜಯಪಾಲ್ ಉಪಾಧ್ಯಕ್ಷರಾಗಿ ಆಯ್ಕೆಯಾದರೆ, ಅವರ ಪ್ರತಿಸ್ಪರ್ಧಿ ಕೆ.ಬಿ.ನಾಗೇಂದ್ರ 277 ಮತ ಪಡೆದರು. ಗೌರವ ಕಾರ್ಯದರ್ಶಿ ವಿ.ಟಿ.ಶೆಟ್ಟಿ 395 ಮತದಿಂದ ಜಯಗಳಿಸಿದರೆ, ಪ್ರತಿಸ್ಪರ್ಧಿ ಎಲ್.ಕೃಷ್ಣ 261 ಮತ ಪಡೆದಿದ್ದರು. ಖಜಾಂಚಿ ಸ್ಥಾನಕ್ಕೆ ಜಿ.ಸುಜಯ್ 335 ಮತ ಪಡೆದು ಆಯ್ಕೆಯಾದರೆ, ಬಿ.ಪಿ.ವಿರೇಶ್ 224 ಮತ್ತು ಜಿ.ರಿಷಬ್ ದೇವ್ 97 ಮತ ಪಡೆದರು.

ಕಾರ್ಯಕಾರಿಣಿ ಸದಸ್ಯರಾಗಿ ಸಿ.ಮೋಹನ್ ಕುಮಾರ್(575), ಉಮಾ ಅನಿಲ್(554), ಹೆಚ್.ಆರ್. ಲಕ್ಷ್ಮಣ್ ಸ್ವರೂಪ್ ರಾಜ್ ಅರಸ್(546), ಯು.ಎಂ. ಗುರುಶಾಂತಪ್ಪ(523), ಆರ್.ಯಶವಂತ್ ಕುಮಾರ್(514), ಎಂ.ವಿ.ಪ್ರಮೋದ್(509), ಹೆಚ್.ಎಸ್.ವೆಂಕಟೇಶ್(485) ಆಯ್ಕೆಯಾದರು.



# ಸ್ಮೃತಿ ವನ್ ಸ್ಮಾರಕವನ್ನು ಉದ್ಘಾಟಿಸಿದ ಪ್ರಧಾನಿ ಮೋದಿ

ಭುಜ್, ಆ.28– 2001ರಲ್ಲಿ ಗುಜರಾತ್‌ನ ಕಚ್ ಪ್ರದೇಶದಲ್ಲಿ ಸಂಭವಿಸಿದ ವಿನಾಶಕಾರಿ ಭೂಕಂಪದ ಸಮಯದಲ್ಲಿ ಜನರು ತೋರಿದ ಸ್ಥಿತಿಸ್ಥಾಪಕತ್ವವನ್ನು ಆಚರಿಸುವ ಸ್ಮೃತಿ ವನ್ ಸ್ಮಾರಕವನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಉದ್ಘಾಟಿಸಿದರು.



ಸ್ಮೃತಿ ವನ್ ಕಳೆದುಹೋದ ಜೀವಗಳಿಗೆ ಮತ್ತು ಕಚ್ ಜನರ ಗಮನಾರ್ಹ ಹೋರಾಟದ ಮನೋಭಾವಕ್ಕೆ ಗೌರವವಾಗಿದೆ ಎಂದು ಮೋದಿ ಹೇಳಿದರು.

ಭುಜ್‌ನಲ್ಲಿ ಭೂಕಂಪನದ ತೀವ್ರತೆ ಹೆಚ್ಚಾಗಿದ್ದು ಈ ವೇಳೆ 13,000 ಜನರು ಸಾವನ್ನಪ್ಪಿದರು. ಇದರಿಂದ ಹೊರಬರುವ ಮನೋಭಾವವನ್ನು ಆಚರಿಸಲು ಸುಮಾರು 470 ಎಕರೆಗಳಲ್ಲಿ ಸ್ಮಾರಕವನ್ನು ನಿರ್ಮಿಸಲಾಗಿದೆ. ಸ್ಮಾರಕದಲ್ಲಿ ಭೂಕಂಪದ ಸಮಯದಲ್ಲಿ ಪ್ರಾಣ ಕಳೆದುಕೊಂಡ ಜನರ ಹೆಸರು ಇರಲಿದೆ. ಇದು ಅತ್ಯಾಧುನಿಕ ಸ್ಮೃತಿ ವನ್ ಭೂಕಂಪ ವಸ್ತುಸಂಗ್ರಹಾಲಯವನ್ನು ಸಹ ಹೊಂದಿದೆ.


ವಸ್ತುಸಂಗ್ರಹಾಲಯದಲ್ಲಿ ಗುಜರಾತ್‌ನ ಸ್ಥಳಾಕೃತಿ, ಪುನರ್ನಿರ್ಮಾಣ ಉಪಕ್ರಮಗಳು, 2001ರ ಭೂಕಂಪದ ನಂತರದ ಯಶಸ್ಸಿನ ಕಥೆಗಳನ್ನು ಪ್ರದರ್ಶಿಸುತ್ತದೆ. ವಿವಿಧ ರೀತಿಯ ವಿಪತ್ತುಗಳು ಮತ್ತು ಯಾವುದೇ ರೀತಿಯ ವಿಪತ್ತಿಗೆ ಭವಿಷ್ಯದ ಸಿದ್ಧತೆಯ ಬಗ್ಗೆ ತಿಳಿಸುತ್ತದೆ. ಇದು 5ಆ ಸಿಮ್ಯುಲೇಟರ್‌ನ ಸಹಾಯದಿಂದ ಭೂಕಂಪದ ಅನುಭವವನ್ನು ಮರುಕಳಿಸಲು ಒಂದು ಬ್ಲಾಕ್ ಅನ್ನು ಹೊಂದಿದೆ. ಮೃತ ಜನರ ಆತ್ಮಗಳಿಗಾಗಿ ಗೌರವ ಸಲ್ಲಿಸಲು ಮತ್ತೊಂದು ಬ್ಲಾಕ್ ಅನ್ನು ಹೊಂದಿದೆ.

## ಮುರುಘಾ ಶ್ರೀಗಳ ವಿರುದ್ಧ ಪೋಕ್ಸೋ ಪ್ರಕರಣ

# ಸಂತ್ರಸ್ತೆಯರ ಹೇಳಿಕೆ ಪಡೆದ ತನಿಖಾ ತಂಡ


### ಬಾಲಕಿಯರ ಪೋಷಕರನ್ನು ಕೂಡ ವಿಚಾರಣೆ

ಚಿತ್ರದುರ್ಗ, ಆ.28– ಮುರುಘಾಶ್ರೀಗಳ ವಿರುದ್ಧ ಪೋಕ್ಸೋ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖೆ ಚುರುಕುಗೊಂಡಿದೆ. ತನಿಖಾಧಿಕಾರಿಗಳ ತಂಡ ಸಂತ್ರಸ್ತೆಯರ ಹೇಳಿಕೆ ಪಡೆದುಕೊಂಡಿದೆ. ಅಲ್ಲದೆ ಸಂತ್ರಸ್ತೆಯರ ಪೋಷಕರನ್ನು ಕೂಡ ಬಾಲಮಂದಿರಕ್ಕೆ ಕರೆತಂದು ವಿಚಾರಣೆ ನಡೆಸಲಾಗುತ್ತಿದೆ. ಡಿವೈಎಸ್ಪಿ ಅನಿಲ್ ಕುಮಾರ್ ನೇತೃತ್ವದಲ್ಲಿ ಈ ತನಿಖೆ ನಡೆಯುತ್ತಿದ್ದು, ಮಹಿಳಾ ಪಿಎಸ್‌ಐಗಳು ಬಾಲಕಿಯರಿಂದ ಮಾಹಿತಿ ಸಂಗ್ರಹ ಮಾಡುತ್ತಿದ್ದಾರೆ. ಸದ್ಯ ಬಾಲಕಿಯರ ಹೇಳಿಕೆಗಳು ಸ್ವಾಮೀಜಿಗೆ ಮುಳುವಾಗುತ್ತೋ ಇಲ್ಲ ಬಚಾವ್ ಮಾಡುತ್ತೋ ಎಂಬ ಕುತೂಹಲ ಹುಟ್ಟಿದೆ.




ಇತ್ತ ಮುರುಘಾ ಮಠದ ಆವರಣದಲ್ಲಿ ಭಕ್ತರು ಪ್ರತಿಭಟನೆ ನಡೆಸುತ್ತಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳಿಂದ ಸ್ವಾಮೀಜಿ ವಿರುದ್ಧ ಪಿತೂರಿ ನಡೆಸಲಾಗುತ್ತಿದೆ. ಪ್ರಕರಣ ಕುರಿತು ಸೂಕ್ತ ತನಿಖೆಗೆ ಭಕ್ತರು ಒತ್ತಾಯ ಮಾಡುತ್ತಿದ್ದು, ಆಡಳಿತಾಧಿಕಾರಿ ಬಸವರಾಜನ್ ವಿರುದ್ಧ ಆಕ್ರೋಶ ಹೆಚ್ಚಿದೆ.

**ತನಿಖೆ ನಂತರ ಸತ್ಯ ಹೊರಬೀಳಲಿದೆ:** ಮುರುಘಾ ಶ್ರೀಗಳ ಮೇಲೆ ಪೋಕ್ಸೋ ಅಡಿ ಎಫ್‌ಐಆರ್ ದಾಖಲಾಗಿದ್ದು, ತನಿಖೆಯ ನಂತರ ಸತ್ಯ ಹೊರಬೀಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ತಮ್ಮ ನಿವಾಸದ ಬಳಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ತನಿಖೆ ನಂತರ ಸತ್ಯ ಹೊರಗೆ ಬರಲಿದೆ ಎಂದರು.



ಇದೊಂದು ಪ್ರಮುಖ ಪ್ರಕರಣವಾಗಿದ್ದು, ಚಿತ್ರದುರ್ಗದಲ್ಲಿ ಕಿಡ್ನಾಪ್ ಪ್ರಕರಣವೂ ದಾಖಲಾಗಿದೆ ಎರಡೂ ಪ್ರಕರಣಗಳನ್ನು ದಾಖಲಿಸಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ನಾವು ಮಾತನಾಡುವುದಾಗಲಿ, ವ್ಯಾಖ್ಯಾನ ಮಾಡುವುದಾಗಲಿ ತನಿಖೆ ದೃಷ್ಟಿಯಿಂದ ಸರಿಯಲ್ಲ ಎಂದು ಹೇಳಿದರು.

**ಮುರುಘಾ ಶ್ರೀಗಳ ವಿರುದ್ಧ ಸುಳ್ಳು ಆರೋಪ:** ಚಿತ್ರದುರ್ಗದ ಮುರುಘಾ ಶ್ರೀಗಳ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಹೇಳಿದ್ದಾರೆ.



ಮುರುಘಾ ಶ್ರೀಗಳ ವಿರುದ್ದ ಲೈಂಗಿಕ ಕಿರುಕುಳ ಆರೋಪ ವಿಚಾರ ಸಂಬಂಧ ಪ್ರತಿಕ್ರಿಯಿಸಿದ ಅವರು, ಶ್ರೀಗಳ ವಿರುದ್ಧದ ಆರೋಪದಲ್ಲಿ ಯಾವುದೇ ಸತ್ಯಾಂಶ ಇಲ್ಲ. ತನಿಖೆ ಆದ ಮೇಲೆ ಸತ್ಯಾಂಶ ಹೊರಬರುತ್ತದೆ. ಶ್ರೀಗಳು ಆರೋಪ ಮುಕ್ತರಾಗಿ ಬರುತ್ತಾರೆ ಎಂಬ ಸಂಪೂರ್ಣ ವಿಶ್ವಾಸ ಇದೆ ಎಂದರು.

**ಮುರುಘಾ ಶ್ರೀ ವಿರುದ್ಧ ಷಡ್ಯಂತ್ರ ನಡೆದಂತಿದೆ:** 'ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಮೇಲೆ ಮಾಡಿರುವ ಆರೋಪವು ಷಡ್ಯಂತ್ರದ ರೀತಿ ಇದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.



ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ಪ್ರಕರಣದ ಬಗ್ಗೆ ಸಂಪೂರ್ಣ ತನಿಖೆಯ ಅಗತ್ಯವಿದೆ. ಬಳಿಕವಷ್ಟೆ ಸತ್ಯಾಸತ್ಯತೆ ಗೊತ್ತಾಗಲಿದೆ' ಎಂದು ಹೇಳಿದರು. 'ಉತ್ತರ ಕರ್ನಾಟಕದಲ್ಲಿ ಮಹದಾಯಿ ಸೇರಿದಂತೆ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಪಕ್ಷದಿಂದ ದೊಡ್ಡ ಮಟ್ಟದಲ್ಲಿ ಪಾದಯಾತ್ರೆ ನಡೆಸಲು ಯೋಜಿಸಲಾಗಿದೆ' ಎಂದರು.



**ಮೈಸೂರು ಮಿತ್ರ 43 ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

# ಆ.31, ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆಗೆ ಚಾಲನೆ



ಮಂಡ್ಯ, ಆ.28– ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಆ.31ರಂದು ಕಬ್ಬು ಅರೆಯುವಿಕೆಗೆ ಸಾಂಕೇತಿಕ ಚಾಲನೆ ನೀಡಲಾಗುವುದು. ಸೆ.10ರೊಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸಿ, ಮತ್ತೊಮ್ಮೆ ಕಾರ್ಖಾನೆ ಪುನರಾರಂಭಕ್ಕೆ ಚಾಲನೆ ನೀಡಲಿದ್ದಾರೆ ಎಂದು ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ತಿಳಿಸಿದರು.

ನಗರದ ಮೈಷುಗರ್ ಸಕ್ಕರೆ ಕಾರ್ಖಾನೆಗೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ಕಾರ್ಖಾನೆಗೆ ಆ.30 ರಂದು ಒಟ್ಟಿಗೆ ಮಾಡಿಕೊಂಡಿರುವ ಕಬ್ಬನ್ನು ಸರಬರಾಜು ಮಾಡಿಕೊಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅದರಂತೆ 31 ರಂದು ಕಬ್ಬು ಅರೆಯುವಿಕೆ ಆರಂಭವಾಗಲಿದೆ ಎಂದರು.

ತಾಂತ್ರಿಕ ಸಮಿತಿ ರಚಿಸಿ ಕಾರ್ಖಾನೆ ಪರಿಶೀಲನೆ ನಡೆಸಿ ತಾಂತ್ರಿಕ ವರದಿ ಆಧಾರದ ಮೇಲೆ ಕಾರ್ಖಾನೆಯನ್ನು ದುರಸ್ತಿಗೊಳಿಸಿ ಸರ್ಕಾರಿ ನಿಯಂತ್ರಣದಲ್ಲೇ ಕಾರ್ಖಾನೆ ಪುನರಾರಂಭಿಸಲಾಗುತ್ತಿದೆ. ಕಾರ್ಖಾನೆಗೆ ಯಾವುದೇ ಹಣದ ಕೊರತೆ ಇಲ್ಲದೇ ಮುಂದೆ ಯಾವುದೇ ರೀತಿಯ ನಷ್ಟ ಸಂಭವಿಸದಂತೆ ಲಾಭದಾಯಕದತ್ತ ಕೊಂಡೊಯ್ಯಲು ಎಲ್ಲಾ ರೀತಿಯ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಖಾನೆಯಲ್ಲಿ ಎಥನಾಲ್ ಘಟಕ ಸ್ಥಾಪಿಸುವ ಮೂಲಕ ಎಥನಾಲ್ ಉತ್ಪಾದನೆಗೆ ಹೆಚ್ಚು ಒತ್ತು ನೀಡಲಾಗುವುದು. ಕೇಂದ್ರ ಸರ್ಕಾರದ ಎಫ್‌ಆರ್‌ಪಿ ನಿಗದಿಯಂತೆ ಕಬ್ಬು ಬೆಳೆಗಾರರಿಗೆ ದರ ನೀಡಲಾಗುವುದು. ಹಾಗೂ ಜೊತೆಗೆ ಉಪ ಉತ್ಪನ್ನಗಳಿಗೂ ಆದ್ಯತೆ ನೀಡಿ ಕಾರ್ಖಾನೆಯನ್ನು ಲಾಭದಾಯಕದತ್ತ ಕೊಂಡೊಯ್ಯಲಾಗುವುದು ಎಂದರು.

ಕಾರ್ಖಾನೆಯು ಸರ್ಕಾರದ ನಿಯಂತ್ರಣದಲ್ಲಿಯೇ ನಡೆಯಲಿದೆ. ಪ್ರಸ್ತುತ 295 ನೌಕರರಿದ್ದು, ಕಾರ್ಖಾನೆಯನ್ನು ಕಾನೂನು ರೀತಿಯಲ್ಲೇ ಪಾರದರ್ಶಕವಾಗಿ ನಡೆಸಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ. ಆದರೆ ಕಾರ್ಖಾನೆ ವಿಚಾರದಲ್ಲಿ ವಿರೋಧ ಪಕ್ಷದವರು ರಾಜಕಾರಣ ಮಾಡಬಾರದು. ಹಾಗೇನಾದರೂ ಮಾಡಿದರೆ ರೈತರು ವಿರೋಧಿಸಲಿದ್ದಾರೆ. ಎಲ್ಲಾ ರೈತರು, ಸಂಘ– ಸಂಸ್ಥೆಗಳು, ರೈತ ಸಂಘಟನೆ, ಜನಪ್ರತಿನಿಧಿಗಳು ಕಾರ್ಖಾನೆ ಆರಂಭಕ್ಕೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಮಂಡ್ಯ ಮೈಷುಗರ್ ಕಾರ್ಖಾನೆಯ ನಿರ್ವಹಣೆಗೆ ನಾನು ಯಾವುದೇ ಆಪ್ತ ಸಹಾಯಕರನ್ನು ನೇಮಕ ಮಾಡಿಕೊಂಡಿಲ್ಲ. ಆಪ್ತ ಸಹಾಯಕನೆಂದು ಹೇಳಿಕೊಂಡು ಯಾರಾದರೂ ಕಾರ್ಖಾನೆ ಬಂದರೆ ನನಗೆ ಮಾಹಿತಿ ನೀಡಬೇಕು. ನಾನು ಅವರ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇನೆ ಎಂದು ಎಚ್ಚರಿಸಿದರು.

**ಮುರುಘಾ ಮಠದ ಬಗ್ಗೆ ಬಿಎಸ್‌ವೈ, ಸಿಎಂ ಮಧ್ಯ ಪ್ರವೇಶಿಸಲಿ:** ಮುರುಘಾ ಮಠದಲ್ಲಿ ಕೇಳಿ ಬಂದಿರುವ ಲೈಂಗಿಕ ದೌರ್ಜನ್ಯದ ಬಗ್ಗೆ ಈಗಾಗಲೇ ಗೃಹ ಸಚಿವ ಅರಗ ಜ್ಞಾನೇಂದ್ರ ಮಾತನಾಡಿದ್ದು, ಪ್ರಕರಣದ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಧ್ಯ ಪ್ರವೇಶಿಸಿ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ, ಸೂಕ್ತ ಬಗೆಹರಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಅಪ್ಪಾ ಸಾಹೇಬ್ ಪಾಟೀಲ್, ಪ್ರಧಾನ ವ್ಯವಸ್ಥಾಪಕ ಶಿವಾನಂದಮೂರ್ತಿ, ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ, ಮುಖಂಡರಾದ ಸಿದ್ದರಾಮಯ್ಯ, ಚಂದಗಾಲು ಶಿವಣ್ಣ, ರೈತ ನಾಯಕಿ ಸುನಂದಾ ಜಯರಾಂ ಉಪಸ್ಥಿತರಿದ್ದರು.

# ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಅಗತ್ಯ



ಪಾಂಡವಪುರ, ಆ.28– ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಸಾಹಿತ್ಯ, ಸಂಸ್ಕಾರ, ಶಿಸ್ತು ಅಷ್ಟೇ ಮುಖ್ಯ. ಕ್ರೀಡೆಯಿಂದ ಮಕ್ಕಳು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿ ಆರೋಗ್ಯವಂತರಾಗಿರುತ್ತಾರೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಪಟ್ಟಣದಲ್ಲಿ ಭಾನುವಾರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ದೈಹಿಕ ಶಿಕ್ಷಣ ವಿಭಾಗ ಪಾಂಡವಪುರ, ಶಂಕರಾನಂದ ಭಾರತಿ ವಿದ್ಯಾಪೀಠ ಕುಂತಿಬೆಟ್ಟ ವತಿಯಿಂದ ನಡೆದ ಕುಂತಿಬೆಟ್ಟ ವೃತ್ತ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆ ನಮ್ಮ ಜೀವನದ ಒಂದು ಪ್ರಮುಖ ಭಾಗವಾಗಿದೆ. ಕ್ರೀಡೆ ಮನರಂಜನಾ ಸ್ಪರ್ಧೆಯ ಕ್ಷೇತ್ರ ಭಾಗವಾಗಿದೆ ವಿದ್ಯಾರ್ಥಿಗಳು ಪಠ್ಯ ಪುಸ್ತಕಗಳನ್ನು ಓದುವುದ ಜೊತೆಗೆ ಕ್ರೀಡೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು. ಸಂಸ್ಥೆಯ ಅಧ್ಯಕ್ಷ ಹೆಚ್.ಎಲ್.ನಂಜೇಗೌಡ ಧ್ವಜಾರೋಹಣ ನೆರವೇರಿಸಿದರು. ಕ್ರೀಡಾ ಜ್ಯೋತಿಯನ್ನು ಉಪಾಧ್ಯಕ್ಷ ದೇವೇಗೌಡ ಸ್ವೀಕರಿಸಿದರು. ಗ್ರಾಪಂ ಅಧ್ಯಕ್ಷ ಮಹದೇವ, ಬಿಇಒ ಜಿ.ಪಿ.ಲೋಕೇಶ್, ಕಾರ್ಯದರ್ಶಿ ಸಿ.ಎಂ.ಚನ್ನೇಗೌಡ, ನಿರ್ದೇಶಕರಾದ ಶಿವರಾಮೇಗೌಡ, ಚಂದ್ರಶೇಖರ್, ಹರೀಶ್, ಸಿ.ಚನ್ನೇಗೌಡ, ರಾಜೇಂದ್ರ, ಮುಖ್ಯಶಿಕ್ಷಕ ಪಾರ್ಥೇಗೌಡ, ದೈಹಿಕ ಶಿಕ್ಷಣ ಶಿಕ್ಷಕ ಸಂಘದ ಅಧ್ಯಕ್ಷ ಬಸವರಾಜು ಹಾಜರಿದ್ದರು.

# ಶಾಂತಿಯುತ ಗಣೇಶ ಹಬ್ಬ ಆಚರಣೆಗೆ ಮನವಿ

ಕಿಕ್ಕೇರಿ, ಆ.28– ಗೌರಿ–ಗಣೇಶ ಹಬ್ಬ ಎಲ್ಲಾ ಧರ್ಮಗಳ ಭಾವೈಕ್ಯತೆ ಕಾಪಾಡಿಕೊಳ್ಳುವ ಸೌಹಾರ್ದತೆಯ ಹಬ್ಬವಾಗಿದ್ದು, ಶಾಂತಿಯುತವಾಗಿ ಆಚರಿಸಬೇಕು ಎಂದು ಇನ್‌ಸ್ಪೆಕ್ಟರ್



ಸುನಿಲ್‌ಕುಮಾರ್ ತಿಳಿಸಿದರು. ಪಟ್ಟಣದ ಠಾಣೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಗೌರಿ–ಗಣೇಶ ಹಬ್ಬ ಪೂರ್ವಭಾವಿ ಶಾಂತಿ ಸಭೆಯಲ್ಲಿ ಮಾತನಾಡಿ ಅವರು, ಗಲ್ಲಿಗೊಂದು ಗಣಪತಿ, ಬಲವಂತವಾಗಿ ಸಾರ್ವಜನಿಕರಿಂದ ಚಂದಾ ವಸೂಲಿ, ಬೆಳಗ್ಗೆ ಸಂಜೆ ನಿಗದಿತ ಡೆಸಿಬಲ್ ಶಬ್ದಕ್ಕಿಂತ ಹೆಚ್ಚು ಶಬ್ದದ ಧ್ವನಿವರ್ಧಕ ಬಳಕೆ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಪ್ರತಿಷ್ಠಾಪನೆಗೆ ಮುನ್ನ ಕಡ್ಡಾಯವಾಗಿ ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪಡೆಯಬೇಕು ಎಂದರು. ಡಿಜೆ ಸೌಂಡ್ಸ್ ಬಳಸುವಿಕೆ ಬೇಡ. ವಿಶೇಷ ಕಾರ್ಯಕ್ರಮಗಳ ಮಾಹಿತಿ ಮೊದಲೇ ತಿಳಿಸಿ, ರಸ್ತೆ ಬಂದ್ ಮಾಡಿ ಸಾರ್ವಜನಿಕರಿಗೆ ಕಿರಿಕಿರಿ ಮಾಡದಿರಿ. ಗಣಪತಿ ವಿಸರ್ಜನೆ ಸಮಯದಲ್ಲಿ ಅಸಭ್ಯ ವರ್ತನೆ, ಡಿಜೆ ಸೌಂಡ್ಸ್ ಬಳಸದಿರಿ. ಪರಿಸರ ಗಣಪತಿಗೆ ವಿಶೇಷ ಒತ್ತು, ನೀಡಿ ನಿಗದಿತ ಸ್ಥಳದಲ್ಲಿ ಗಣಪತಿ ವಿಸರ್ಜನೆ ಮಾಡಬೇಕು ಎಂದರು. ಭಜರಂಗದಳದ ಕಾರ್ಯಕರ್ತ ಅಕ್ಷಯ್ ಸೇರಿದಂತೆ ಹೋಬಳಿಯ ವಿವಿಧ ಗ್ರಾಮಗಳ ಸಂಘ–ಸಂಸ್ಥೆ ಪದಾಧಿಕಾರಿಗಳು ಇದ್ದರು.

# ಕೆ.ಆರ್.ಪೇಟೆ: ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ



ಕೆ.ಆರ್.ಪೇಟೆ, ಆ.28– ಪಟ್ಟಣದ ಸಾಹುಕಾರ್ ಚಿಕ್ಕಣ್ಣಗೌಡ ಸಮುದಾಯ ಭವನದಲ್ಲಿ ಶ್ರೀ ಶಂಭುಲಿಂಗೇಶ್ವರ ಚಾರಿಟಬಲ್ ಟ್ರಸ್ಟ್‌ನ ಉದ್ಘಾಟನೆ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆದಿಚುಂಚನಗಿರಿ ಕೊಮ್ಮೇರಹಳ್ಳಿ ಶಾಖಾ ಮಠದ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ ಮಾತನಾಡಿ, ಬಡವರು, ನಿರ್ಗತಿಕರಿಗೆ ಕೈಲಾದ ಸಹಾಯವನ್ನು ಸಮಾಜದಲ್ಲಿ ಉಳ್ಳವರು ಮಾಡಬೇಕು. ಈ ನಿಟ್ಟಿನಲ್ಲಿ ವಕೀಲ ವಿ.ಎಸ್. ಧನಂಜಯಕುಮಾರ್ ಅವರು ಸಮಾಜ ಸೇವೆಯ ಉದ್ದೇಶದಿಂದ ಶ್ರೀ ಶಂಭುಲಿಂಗೇಶ್ವರ ಸೇವಾ ಟ್ರಸ್ಟ್ ಆರಂಭಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೇಬಿ ಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಬೆಡದಹಳ್ಳಿ ಶ್ರೀಪಂಚಭೂತೇಶ್ವರ ಶ್ರೀಕ್ಷೇತ್ರದ ಶ್ರೀ ರುದ್ರಮುನಿ ಸ್ವಾಮೀಜಿ, ಕಾಪನಹಳ್ಳಿ ಗವಿ ಮಠ ಕ್ಷೇತ್ರದ ಪೀಠಾಧಿಪತಿ ಶ್ರೀಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.

ಈ ವೇಳೆ ಸ್ವಾತಂತ್ರ್ಯ ಹೋರಾಟಗಾರ ಮಡವಿನಕೋಡಿ ಎಂ.ಬಿ.ಹಾಲೇಗೌಡ, ವಕೀಲ ಎಸ್‌ಸಿ. ವಿಜಯಕುಮಾರ್, ನಿವೃತ್ತ ಪ್ರಾಂಶುಪಾಲ ಜಿ.ಮಾದೇಗೌಡ, ರೈತರಾದ ವಿಠಲಾಪುರ ಸುಬ್ಬೇಗೌಡ, ಬಳ್ಳೇಕೆರೆ ಮಂಜುನಾಥ್, ಪ್ರಗತಿಪರ ಹೋರಾಟಗಾರ ಬಸ್ತಿ ರಂಗಪ್ಪ, ತಾಲೂಕು ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಶಿವಕುಮಾರ್, ಖ್ಯಾತ ಯೋಗಪಟು ಅಲ್ಲಮಪ್ರಭು ಅವರಿಗೆ ಕಾಯಕ ಯೋಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಸಂಸ್ಥಾಪಕ ಅಧ್ಯಕ್ಷ ವಿ.ಎಸ್.ಧನಂಜಯ್ ಕುಮಾರ್, ಕೆ.ಆರ್.ನಗರ ಕಾಗಿನೆಲೆ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಕಸಾಪ ಮಾಜಿ ಅಧ್ಯಕ್ಷ ಎಂ.ಕೆ.ಹರಿಚರಣತಿಲಕ್, ನಿವೃತ್ತ ಸೈನಿಕ ಸುಕುಮಾರ್, ವಿ.ಎಸ್.ಧನಂಜಯ್ ಕುಮಾರ್, ಮತ್ತೀಕೆರೆ ಲಕ್ಕೇಗೌಡ, ಟ್ರಸ್ಟ್‌ನ ಕಾರ್ಯದರ್ಶಿ ಅನುಜಾ, ಶಿಕ್ಷಕರಾದ ಕೆ.ಎಸ್. ಚಂದ್ರು, ಸವಿತಾ ರಮೇಶ್, ಶ್ರೀಕಾಂತ್ ಚಿಮ್ಮಲ್, ರವಿಶಿವಕುಮಾರ್ ಇತರರಿದ್ದರು.

# ಮಳೆ ಹಾನಿ ಪರಿಹಾರಕ್ಕೆ ಸೂಚನೆ



ಮದ್ದೂರು, ಆ.28– ಮಳೆ ಹಾನಿಗೊಳಗಾದ ಪ್ರದೇಶಗಳಿಗೆ ಶನಿವಾರ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಶಾಸಕ ಡಿ.ಸಿ.ತಮ್ಮಣ್ಣ ಭೇಟಿ ನೀಡಿ, ಪರಿಶೀಲಿಸಿದರು.

ನಂತರ ಮಾತನಾಡಿ, ಮಳೆಹಾನಿಯಿಂದ ನಷ್ಟವಾಗಿರುವ ಬಗ್ಗೆ ಅಧಿಕಾರಿಗಳು ಸರ್ವೆ ನಡೆಸಿ ಶೀಘ್ರವಾಗಿ ಸರ್ಕಾರದಿಂದ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಮಳೆ ನೀರಿಗೆ ಕೊಚ್ಚಿ ಹೋಗಿರುವ ನಿಡಘಟ್ಟ–ತಿಪ್ಪೂರು ಮಾರ್ಗದ ಸಂಪರ್ಕ ಸೇತುವೆಯ ಕಾಮಗಾರಿ ಶೀಘ್ರವಾಗಿ ಆರಂಭಿಸಿ ಈ ಭಾಗದ ಸಾರ್ವಜನಿಕ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಗುವುದು. ಮಳೆಯಿಂದ ಯಾವುದೇ ಅಹಿತಕರ ಘಟನೆ ನಡೆಯದಂತೆ ತಾಲೂಕು ಮಟ್ಟದ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು. ಈ ವೇಳೆ ತಹಸೀಲ್ದಾರ್ ಟಿ.ಎನ್. ನರಸಿಂಹಮೂರ್ತಿ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಹೆಚ್.ಸಿ.ಮಹದೇವಪ್ಪ ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳು ಇದ್ದರು.

## ಮಹಿಳೆ ನಾಪತ್ತೆ



ನಾಗಮಂಗಲ, ಆ.28– ತಾಲೂಕಿನ ಕಸಬಾ ಹೋಬಳಿಯ ಅಂಚೆ ಚಿಟ್ಟನಹಳ್ಳಿ ಗ್ರಾಮದ ಯೋಗೇಶ್ ಎಂಬುವವರ ಪತ್ನಿ ಪದ್ಮಾ ಕಳೆದ 10 ದಿನಗಳಿಂದ ನಾಪತ್ತೆಯಾಗಿದ್ದು, ಈ ಸಂಬಂಧ ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಆ.18ರಿಂದ ಪದ್ಮಾ(30) ಅವರು ನಾಪತ್ತೆಯಾಗಿದ್ದು, ಇವರಿಗಾಗಿ ಎಲ್ಲೆಡೆ ಹುಡುಕಿದರೂ ಪತ್ತೆಯಾಗದ ಹಿನ್ನೆಲೆಯಲ್ಲಿ ಈಕೆಯ ಪತಿ ಯೋಗೇಶ್ ದೂರು ನೀಡಿದ್ದಾರೆ. ಇವರ ಬಗ್ಗೆ ಸುಳಿವು ದೊರೆತರೆ ಕೂಡಲೇ ನಾಗಮಂಗಲ ಗ್ರಾಮಾಂತರ ಠಾಣೆ ದೂ: 9480804877 ಅಥವಾ ಕಂಟ್ರೋಲ್ ರೂಂ ದೂ: 08232–224888 ಸಂಪರ್ಕಿಸಲು ಕೋರಲಾಗಿದೆ.

# ಮೇಲುಕೋಟೆ ಪ್ರಥಮ ದರ್ಜೆ ಕಾಲೇಜಿಗೆ ಅಗತ್ಯ ಸೌಲಭ್ಯ



ಮೇಲುಕೋಟೆ, ಆ.28– ಶ್ರೀಚೆಲುವನಾರಾಯಣಸ್ವಾಮಿ ಸನ್ನಿಧಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಎಲ್ಲಾ ಸೌಲಭ್ಯಗಳಿರುವ ಮಾದರಿ ಕಾಲೇಜನ್ನಾಗಿ ರೂಪಿಸಲಾಗುತ್ತಿದೆ ಎಂದು ಶಾಸಕ ಸಿ.ಎಸ್. ಪುಟ್ಟರಾಜು ತಿಳಿಸಿದರು.

ಮೇಲುಕೋಟೆಯ ಪ್ರಥಮದರ್ಜೆ ಕಾಲೇಜಿನಲ್ಲಿ ಮೂರು ಕೊಠಡಿಗಳ ನಿರ್ಮಾಣ ಮತ್ತು ಕಾಂಪೋಂಡ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮೇಲುಕೋಟೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಅದರಲ್ಲೂ ಹೆಣ್ಣು ಮಕ್ಕಳು ಪಿಯುಸಿ ನಂತರ ತಾಲೂಕು ಕೇಂದ್ರಗಳಿಗೆ ಹೋಗಲಾಗದೆ ಅರ್ಧದಲ್ಲೇ ವ್ಯಾಸಂಗ ತೊರೆಯುತ್ತಿದ್ದರು. ಇದನ್ನು ಮನಗಂಡು ಮೇಲುಕೋಟೆಯಲ್ಲಿ ಪದವಿ ಕಾಲೇಜು ಆರಂಭಿಸಿ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇದೀಗ ಕೋಟಿ ರೂ. ವೆಚ್ಚದಲ್ಲಿ ಮೂರು ಕೊಠಡಿಗಳ ನಿರ್ಮಾಣ ಮತ್ತು ಕಾಂಪೋಂಡ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ತರಗತಿ ಕೊಠಡಿಗಳನ್ನು ಗುಣಮಟ್ಟದೊಂದಿಗೆ ನಿರ್ಮಾಣ ಮಾಡಲು ಇಂಜಿನಿಯರ್‌ಗೆ ಸೂಚನೆ ನೀಡಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಎ.ಎನ್.ಸುರೇಶ್ ಮಾತನಾಡಿದರು. ಇದೇ ವೇಳೆ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ವರ್ಗಾವಣೆಯಾಗಿರುವ 13 ಮಂದಿ ಉಪನ್ಯಾಸಕರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಗ್ರಾಪಂ ಅಧ್ಯಕ್ಷ ಸೋಮಶೇಖರ್, ಉಪಾಧ್ಯಕ್ಷ ತಿರುಮಲೈ, ಸದಸ್ಯ ಜಯರಾಮೇಗೌಡ, ಪಿಡಿಓ ರಾಜೇಶ್ವರ್, ಉಪನ್ಯಾಸಕರಾದ ಡಾ.ಬಿ. ಚಂದ್ರಶೇಖರ್, ಶಂಕರ್, ಸುಜಾತಾ, ಅಧೀಕ್ಷಕ ಅನಿಲ್, ಸೇರಿದಂತೆ ಹಲವು ಗಣ್ಯರು ಇದ್ದರು.

ಮೂರನೇ ಪುಟದಿಂದ

# ರಾಯಚೂರುವರೆಗೆ ಕಾಂಗ್ರೆಸ್ ಪಾದಯಾತ್ರೆ

ರಾಜ್ಯದಲ್ಲಿ ನಿತ್ಯ 25 ಕಿ.ಮೀ ದೂರ ಪಾದಯಾತ್ರೆ ಮಾಡಲಾಗುವುದು. ಎಲ್ಲ ಜಿಲ್ಲೆಗಳ ಜನರು ಪಾದಯಾತ್ರೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗುವುದು. ರಾಹುಲ್ ಗಾಂಧಿ ಅವರು ರಾಷ್ಟ್ರಾದ್ಯಂತ 3,500 ಕಿ.ಮೀ. ಹೆಜ್ಜೆ ಹಾಕಲಿದ್ದಾರೆ ಎಂದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಇಂದು ನಡೆದಿದ್ದು, ನಾಳೆ (ಆ. 29) ಪದಾಧಿಕಾರಿಗಳ ಸಭೆ ನಡೆಯಲಿದೆ. ಪಾದಯಾತ್ರೆಯಲ್ಲಿ ಎಲ್ಲ ನಾಯಕರು ಜವಾಬ್ದಾರಿಯನ್ನು ಹಂಚಿಕೊಳ್ಳುತ್ತೇವೆ. ರಾಜ್ಯದ ಪ್ರಮುಖ ನಾಯಕರೆಲ್ಲರೂ ಸೆ. 7ರಂದು ಕನ್ಯಾಕುಮಾರಿಯಲ್ಲಿ ಈ ಯಾತ್ರೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇವೆ ಎಂದರು

ರಾಜ್ಯದಲ್ಲಿ ಪಾದಯಾತ್ರೆ ಉಸ್ತುವಾರಿಯನ್ನು ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್ ಅವರಿಗೆ ನೀಡಲಾಗಿದೆ. ರಾಷ್ಟ್ರ ಮಟ್ಟದ ಸಮಿತಿಯಲ್ಲಿ ರಾಜ್ಯದಿಂದ ಕೆ.ಜೆ. ಜಾರ್ಜ್ ಮತ್ತು ಸಲೀಂ ಅಹ್ಮದ್ ಅವರಿಗೆ ಸ್ಥಾನ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲರ ಜತೆ ಸಭೆ ಮಾಡಿ ಯಾರೆಲ್ಲಾ 21 ದಿನ ನಡೆಯಬೇಕು ಎಂದು ಅಭಿಪ್ರಾಯ ಸಂಗ್ರಹಿಸಿ, ನಂತರ ಅವರನ್ನು ಆಯ್ಕೆ ಮಾಡಲಾಗುವುದು. ಎಲ್ಲರಿಗೂ ಅಧಿಕೃತ ವೆಬ್ ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಬಳ್ಳಾರಿಯಲ್ಲಿ ಸಾರ್ವಜನಿಕ ಸಮಾವೇಶ ಹಮ್ಮಿಕೊಳ್ಳಲಾಗುವುದು. ಮೈಸೂರಿನಲ್ಲಿ ತಾಂತ್ರಿಕ ಸಮಸ್ಯೆ ಇದೆ. ಅಕ್ಟೋಬರ್ 4–5 ರಂದು ದಸರಾ ಹಬ್ಬ ನಡೆಯಲಿದ್ದು, ಈ ದಿನ ಯಾವ ರೀತಿ ಮಾಡಬೇಕು ಎಂದು ದೆಹಲಿ ನಾಯಕರ ಜತೆ ಚರ್ಚಿಸಿ ತೀರ್ಮಾನಿಸುತ್ತೇವೆ ಎಂದರು.

ವಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ದೇಶದಲ್ಲಿ ಸಾಮರಸ್ಯ ಹಾಳಾಗುತ್ತಿದೆ, ಐಕ್ಯತೆಗೆ ಧಕ್ಕೆ ಬಂದಿದೆ. ಹೀಗಾಗಿ ಸಾಮರಸ್ಯ ಮೂಡಿಸಬೇಕಾದ ಅಗತ್ಯವಿದೆ. ಪ್ರಜಾಪ್ರಭುತ್ವಕ್ಕೆ ಬೀಳುತ್ತಿರುವ ಹೊಡೆತವನ್ನು ತಪ್ಪಿಸಬೇಕಿದೆ. ಧರ್ಮ ರಾಜಕಾರಣ ಹೆಚ್ಚಾಗುತ್ತಿದೆ. ಮತಗಳ ಕ್ರೋಢೀಕರಣಕ್ಕೆ ಧರ್ಮ ರಾಜಕಾರಣ ಮಾಡಲಾಗುತ್ತಿದೆ. ಸಮ ಸಮಾಜವನ್ನು ನಿರ್ಮಿಸುವುದು ನಮ್ಮ ಪಕ್ಷದ ಉದ್ದೇಶ ಎಂದರು.

ಅದಕ್ಕೂ ಮೊದಲು ಮಾತನಾಡಿದ ಬಿ.ಕೆ. ಹರಿಪ್ರಸಾದ್, ಕನ್ಯಾಕುಮಾರಿಯಿಂದ ಆರಂಭವಾಗಲಿರುವ ಯಾತ್ರೆ ತಮಿಳುನಾಡಿನಲ್ಲಿ ನಾಲ್ಕು ದಿನ, ಕೇರಳದಲ್ಲಿ 19 ದಿನ ಸಾಗಲಿದೆ. 125 ಜನರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಹೆಜ್ಜೆ ಹಾಕಲಿದ್ದಾರೆ. 12 ರಾಜ್ಯಗಳು, 2 ಕೇಂದ್ರಾಡಳಿತ ಪ್ರದೇಶಗಳ ಮೂಲಕ ಯಾತ್ರೆ ಸಾಗಲಿದೆ ಎಂದರು.


ಕರ್ನಾಟಕದಲ್ಲಿ ಬೆಳಿಗ್ಗೆ 7 ಗಂಟೆಗೆ ಪಾದಯಾತ್ರೆ ಆರಂಭವಾಗಲಿದೆ. 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೂ ಸಾಹಿತಿಗಳು, ವಕೀಲರು, ಶಿಕ್ಷಕರು, ವಿದ್ಯಾರ್ಥಿಗಳು, ಯುವಕ, ಯುವತಿಯರ ಜೊತೆ ಸಂವಾದ. ಸಂಜೆ 4ಗಂಟೆಗೆ 20 ಸಾವಿರ ಜನ ರಾಹುಲ್ ಗಾಂಧಿ ಜೊತೆ ಹೆಜ್ಜೆ ಹಾಕಲಿದ್ದಾರೆ. ಗುಂಡ್ಲುಪೇಟೆ ಮಾರ್ಗವಾಗಿ ಪ್ರವೇಶಿಸುವ ಯಾತ್ರೆ ರಾಯಚೂರು ಜಿಲ್ಲೆಯೊಂದಿಗೆ ಮತ್ತೊಂದು ರಾಜ್ಯಕ್ಕೆ ಪ್ರವೇಶಿಸಲಿದೆ ಎಂದರು. ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್, ಎಐಸಿಸಿ ಕಾರ್ಯದರ್ಶಿಗಳಾದ ಅಭಿಷೇಕ್‌ದತ್, ಜೈಕುಮಾರ್, ವಿಷ್ಣುನಾಥನ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ, ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ರಾಮಲಿಂಗಾರೆಡ್ಡಿ, ಧ್ರುವನಾರಾಯಣ್, ಮಾಜಿ ಸಚಿವರಾದ ಕೆ.ಜೆ. ಜಾರ್ಜ್, ಕೆಪಿಸಿಸಿ ಸಂವಹನ, ಸಾಮಾಜಿಕ ಜಾಲತಾಣ ಘಟಕದ ಅಧ್ಯಕ್ಷ ಪ್ರಿಯಾಂಕ್ ಖರ್ಗೆ ಅವರು 'ಭಾರತ ಒಗ್ಗೂಡಿಸಿ' ಯಾತ್ರೆ ಲೋಗೊ ಬಿಡುಗಡೆ ಮಾಡಿದರು. ವಿಧಾನಸಭೆಯಲ್ಲಿ ಪಕ್ಷದ ಮುಖ್ಯ ಸಚೇತಕ ಡಾ. ಅಜಯ್ ಸಿಂಗ್, ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮನ್ಸೂರ್ ಅಲಿಖಾನ್ ಇದ್ದರು.

# ಸುಪ್ರೀಂನಲ್ಲಿ ಮೇಲ್ಮನವಿ ವಿಚಾರಣೆ

ಹೈಕೋರ್ಟ್‌ನ ತೀರ್ಪು ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ವಿಫಲವಾಗಿದೆ. ಪರಿಸ್ಥಿತಿಯ ಗಂಭೀರತೆಯನ್ನೂ ಅರ್ಥಮಾಡಿಕೊಳ್ಳಲಾಗಿಲ್ಲ. ಭಾರತದ ಸಂವಿಧಾನದ 25ನೇ ವಿಧಿಯ ಅಡಿಯಲ್ಲಿ ನೀಡಲಾದ ಅಗತ್ಯ ಧಾರ್ಮಿಕ ಆಚರಣೆಗಳ ಮೂಲಭೂತ ಅಂಶಗಳಿಗೆ ಪೂರಕವಾಗಿಲ್ಲ. ಹಿಜಾಬ್ ಧರಿಸು ವುದು ಇಸ್ಲಾಂ ಧರ್ಮದ ಆಚರಣೆಯಲ್ಲಿ ಅಗತ್ಯವಾಗಿದೆ ಎಂದು ಮೇಲ್ಮನವಿಯಲ್ಲಿ ಹೇಳಲಾಗಿದೆ. ಹಿಜಾಬ್ ಧರಿಸಿ ಪ್ರವೇಶ ನಿರಾಕರಿಸಿದ್ದಕ್ಕಾಗಿ ಮುಸ್ಲಿಮ್ ವಿದ್ಯಾರ್ಥಿನಿಯರ ಗುಂಪು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ್ದ ಹೈಕೋರ್ಟ್ ಮಾರ್ಚ್ 15 ರಂದು ತೀರ್ಪು ನೀಡಿತ್ತು. ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ತಿ ನೇತೃತ್ವದ ಹೈಕೋರ್ಟ್ ಪೀಠವು ಅರ್ಜಿಗಳನ್ನು ವಜಾಗೊಳಿಸುವಾಗ, ಹಿಜಾಬ್ ಅಭ್ಯಾಸವು ಇಸ್ಲಾಂ ಧರ್ಮದ ಅಡಿಯಲ್ಲಿ ಅತ್ಯಗತ್ಯವಾದ ಆಚರಣೆಯಲ್ಲ ಮತ್ತು ಆದ್ದರಿಂದ ಭಾರತದ ಸಂವಿಧಾನದ 25 ನೇ ಪರಿಚ್ಛೇದದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ತನ್ನ ತೀರ್ಪಿನಲ್ಲಿ ಹೇಳಿದೆ. ಮಾರ್ಚ್ 15, 2022 ರಂದು ಸುಪ್ರೀಂ ಕೋರ್ಟ್‌ಗೆ ವಿವಿಧ ಅರ್ಜಿಗಳನ್ನು ಸಲ್ಲಿಸಲಾಯಿತು.

# ಕಾಮನಕೆರೆ ಹುಂಡಿ ಕೆರೆಯಲ್ಲಿ ಮೀನುಗಳ ಮಾರಣಹೋಮ





ಮೈಸೂರು, ಆ.28(ಎಂಟಿವೈ)– ಮೈಸೂರಿನ ಪ್ರಮುಖ ಕೆರೆಗಳಲ್ಲಿ ಒಂದಾಗಿರುವ ಕಾಮನಕೆರೆ ಹುಂಡಿ ಕೆರೆಯಲ್ಲಿ ನೂರಾರು ಮೀನುಗಳ ಮಾರಣಹೋಮ ನಡೆದಿದ್ದು, ಪರಿಸ್ಥಿತಿ ಹದಗೆಟ್ಟು ಸ್ಥಳೀಯರು ಪರದಾಡುವಂತಾಗಿದೆ.

ಕೆರೆಯಲ್ಲಿರುವ ನೂರಾರು ಮೀನುಗಳು ನಾಲ್ಕೈದು ದಿನಗಳ ಹಿಂದೆಯೇ ಮೃತಪಟ್ಟಿದ್ದು, ದುರ್ವಾಸನೆ ಬೀರಲಾರಂಭಿಸಿವೆ. ಕೆಸರೆಯಿಂದ ಮೂರು ಕಿಮೀ ಹಾಗೂ ಮೈಸೂರು ನಗರದಿಂದ 7–8 ಕಿಮೀ ದೂರದಲ್ಲಿರುವ ಕಾಮನಕೆರೆ ಹುಂಡಿ ಕೆರೆ ವಾತಾವರಣ ಮಾಲಿನ್ಯಗೊಳ್ಳುತ್ತಿರುವುದರಿಂದ ಮೀನುಗಳ ಮಾರಣ ಹೋಮ ಆರಂಭವಾಗಿದೆ. ಕೆರೆಯಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗಿರುವುದರಿಂದ ಹಾಗೂ ಕೆರೆಯೊಳಗಿನ ನೀರಿನಲ್ಲಿ ಹೆಚ್ಚಿನ ವಿಷಕಾರಿ ಅಂಶದಿಂದಾಗಿ ಸಾವುಗಳು ಸಂಭವಿಸುತ್ತಿವೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. 15 ಎಕರೆ ವಿಸ್ತೀರ್ಣದ ಈ ಕೆರೆ ಹಂತ–ಹಂತವಾಗಿ ಒತ್ತುವರಿಗೆ ತುತ್ತಾಗುವುದರೊಂದಿಗೆ ಕಲುಷಿತ ನೀರು ಸೇರಿ ಹಾಳಾಗುತ್ತಿದೆ. ಹಳೆಯ ಕೆರೆಯಾಗಿರುವ ಕಾಮನಕೆರೆ ಹುಂಡಿ ಕೆರೆಗೆ ಒಳಚರಂಡಿ ನೀರು ಸೇರುತ್ತಿದೆ. ಕೆರೆಯ ಬಳಿಯಿರುವ ಮನೆಗಳಿಂದಲೂ ತ್ಯಾಜ್ಯ ನೀರು ಕೆರೆಗೆ ಸೇರುತ್ತಿದೆ. ಇದರಿಂದ ಅಪಾರ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ, ಮನೆಗಳಲ್ಲಿ ನಡೆಯುವ ಕಾರ್ಯಕ್ರಮ, ಧಾರ್ಮಿಕ ಕಾರ್ಯಕ್ರಮದ ತ್ಯಾಜ್ಯ, ಕೆರೆ ಪಾಲಾಗುತ್ತಿದೆ. ಇದರಿಂದಲೇ ಕೆರೆ ವಾತಾವರಣ ಹಾಳಾಗುತ್ತಿದೆ ಎನ್ನಲಾಗಿದೆ.

> "ವರುಣಾ ಕಾಲುವೆಗೆ ಆಗಸ್ಟ್‌ನಲ್ಲಿ ನೀರು ಬಿಡಲಾಗುತ್ತದೆ. ರೈತರು ಭತ್ತದ ಬೆಳೆಗೆ ಬಳಸುವ ಕೀಟನಾಶಕ, ಕಳೆನಾಶಕ ಹಾಗೂ ಇನ್ನಿತರ ರಾಸಾಯನಿಕ ವಸ್ತುಗಳ ಮಿಶ್ರಣದ ನೀರು ಕೆರೆಗೆ ಹರಿದು ಬರುವುದರಿಂದ ಕೆರೆಯಲ್ಲಿರುವ ಮೀನುಗಳ ಸಾವಿಗೆ ಕಾರಣವಾಗುತ್ತವೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಜೆ.ಪಿ.ನಗರದ ನಿವಾಸಿ ಸುನೀಲ್‌ಕುಮಾರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕಾಮನಕೆರೆಹುಂಡಿ ಕೆರೆಯಲ್ಲಿ ಮೀನು ಸಾಕಾಣಿಕೆ ಪಂಚಾಯಿತಿಯಿಂದ ರಾಮಣ್ಣ ಎಂಬುವರು ಟೆಂಡರ್ ಪಡೆದಿದ್ದಾರೆ. ಕೆರೆಗೆ 8 ಲಕ್ಷ ಮೌಲ್ಯದ ಮೀನುಮರಿಗಳನ್ನು ಬಿಟ್ಟಿದ್ದಾರೆ. ಆದರೆ ಕೆರೆಗಳಲ್ಲಿ ಮೀನುಗಳ ಸಾವಿನಿಂದ ನಷ್ಟ ಉಂಟಾಗುವ ಸಾಧ್ಯತೆ ಇದೆ. ಕೆರೆಗೆ ಕಲುಷಿತ ನೀರು ಸೇರದಂತೆ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

# ಸೆಪ್ಟೆಂಬರ್ ತಿಂಗಳನ್ನು ಪೋಷಣಾ ಮಾಸವಾಗಿ ಆಚರಿಸಲು ಮೋದಿ ಕರೆ



**ನವದೆಹಲಿ:** ಅಪೌಷ್ಟಿಕತೆಯನ್ನು ಹೋಗಲಾಡಿಸಲು ಜನರು ಪ್ರಯತ್ನಿಸಬೇಕು. ಸಾಮಾಜಿಕ ಜಾಗೃತಿಯು ಈ ಹೋರಾಟದ ನಿರ್ಣಾಯಕ ಅಂಶವಾಗಿದೆ. ಸೆಪ್ಟೆಂಬರ್ ತಿಂಗಳನ್ನು ಪೋಷಣಾ ಮಾಸವಾಗಿ ಆಚರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಮಾತನಾಡಿರುವ ನರೇಂದ್ರ ಮೋದಿ, ಭಾರತದ ಸ್ವಾತಂತ್ರ್ಯದ 75 ವರ್ಷಗಳ ಸಂಭ್ರಮದ ಅಂಗವಾಗಿ ನಡೆದ 'ಅಮೃತ್ ಮಹೋತ್ಸವ'ದ 'ಅಮೃತ್ ಧಾರೆ'ಯು ಈ ತಿಂಗಳಲ್ಲಿ ದೇಶದ ಮೂಲೆ ಮೂಲೆ ಗಳಲ್ಲಿ ಹರಿಯುತ್ತಿದೆ ಎಂದರು.

ಅಮೃತ ಮಹೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆಯ ವಿಶೇಷ ಸಂದರ್ಭದಲ್ಲಿ ನಾವು ದೇಶದ ಸಾಮೂಹಿಕ ಶಕ್ತಿಯನ್ನು ನೋಡಿದ್ದೇವೆ. ಹಬ್ಬಗಳ ಜೊತೆಗೆ, ಸೆಪ್ಟೆಂಬರ್ ಅನ್ನು ಪೌಷ್ಟಿಕತೆಗೆ ಸಂಬಂಧಿಸಿದ ದೊಡ್ಡ ಅಭಿಯಾನಕ್ಕೆ ಮೀಸಲಿಡಲಾಗಿದೆ. ನಾವು ಸೆಪ್ಟೆಂಬರ್ 1 ರಿಂದ 30ರ ವರೆಗೆ 'ಪೋಷಣಾ ಮಾಸ' ಅಥವಾ ಪೌಷ್ಟಿಕಾಂಶದ ತಿಂಗಳಾಗಿ ಆಚರಿಸಬೇಕು ಎಂದರು. ಅಪೌಷ್ಟಿಕತೆಯ ವಿರುದ್ಧ ಅನೇಕ ಸೃಜನಶೀಲ ಮತ್ತು ವೈವಿಧ್ಯಮಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ.ತಂತ್ರಜ್ಞಾನದ ಉತ್ತಮ ಬಳಕೆ ಮತ್ತು ಸಾರ್ವಜನಿಕ ಸಹಭಾಗಿತ್ವವು 'ಪೋಷಣಾ ಅಭಿಯಾನ'ದ ಪ್ರಮುಖ ಭಾಗವಾಗಿರಲಿದೆ ಎಂದರು.

**ಕೋಲಾರ ಧ್ವಜಾರೋಹಣಕ್ಕೆ ಮೋದಿ ಮೆಚ್ಚುಗೆ:** ಪ್ರಸಕ್ತ ಸಾಲಿನ ಸ್ವಾತಂತ್ರ್ಯ ದಿನದಂದು ಕೋಲಾರದಲ್ಲಿ ವಿಶ್ವದಾಖಲೆಯ ಗಾತ್ರದ ರಾಷ್ಟ್ರಧ್ವಜ ಅನಾವರಣಗೊಳಿಸಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯ ದೊರೆತು 75 ವರ್ಷಗಳು ಪೂರ್ಣ ಗೊಂಡು ಅಮೃತ ಮಹೋತ್ಸವ ಆಚರಣೆ ನೆನಪಿನಲ್ಲಿ ಉಳಿಯುವಂತೆ ಮಾಡಲು ದೇಶದ ಜನರು ಸ್ಮರಣೀಯ ಕೊಡುಗೆ ನೀಡಿದ್ದಾರೆ. ಕೋಲಾರದಲ್ಲಿ 630 ಅಡಿ ಉದ್ದ, 205 ಅಡಿ ಅಗಲದ ರಾಷ್ಟ್ರಧ್ವಜ ಅನಾವರಣ ಗೊಳಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ದೇಶಕ್ಕಾಗಿ ಕರ್ತವ್ಯ ನಿರ್ವಹಿಸುವ ಯೋಧರು ಕೂಡ ಸಿಯಾಚಿನ್‌ನಲ್ಲಿ ರಾಷ್ಟ್ರ ಧ್ವಜಾರೋಹಣ ನಡೆಸಿ ರಾಷ್ಟ್ರ ಗೀತೆ ಹಾಡಿದ್ದಾರೆ. ಸಿಕ್ಕಿಂನಲ್ಲಿ ಕೂಡ ಸಮುದ್ರ ಮಟ್ಟದಿಂದ 18,800 ಅಡಿ ಎತ್ತರದ ಪ್ರದೇಶದಲ್ಲಿ ಇಂಡೋ–ಟಿಬೆಟಿಯನ್ ಬಾರ್ಡರ್ ಪಡೆ ಯೋಧರು ರಾಷ್ಟ್ರಧ್ವಜಾರೋಣ ನಡೆಸಿದರು ಎಂದರು ಪ್ರಧಾನಿ.

# ಸಚಿವ ಸೋಮಣ್ಣನಿಗೆ ಸೋಲಿನ ರುಚಿ ತೋರಿಸುತ್ತೇವೆ

**ಬೆಂಗಳೂರು:** ಮುಂದಿನ ದಿನಗಳಲ್ಲಿ ಗೋವಿಂದರಾಜನಗರ, ವಿಜಯನಗರ ಕ್ಷೇತ್ರಗಳು



ಗೆಲ್ಲುವ ಮೂಲಕ ಸಚಿವ ವಿ.ಸೋಮಣ್ಣ ಅವರಿಗೆ ಮತ್ತೆ ಸೋಲಿನ ರುಚಿ ತೋರಿಸುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದರು. ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ಗೋವಿಂದರಾಜನಗರದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷ ಸೇರಿಕೊಂಡ ಮಾಜಿ ಪಾಲಿಕೆ ಸದಸ್ಯ ಡಿ.ಉಮಾಶಂಕರ್ ನೇತೃತ್ವ ತಂಡವನ್ನು ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದರು.

ನನ್ನ ಮುಖ್ಯಮಂತ್ರಿ ಅವಧಿಯಲ್ಲಿ ಕ್ಷೇತ್ರದಲ್ಲಿ ಅನುಮೋದನೆ ದೊರೆತಿರುವ ಕಾಮಗಾರಿಗಳಿಗೆ ನಡೆಯದಂತೆ ಸೋಮಣ್ಣ ಅಡ್ಡಗಾಲು ಹಾಕಿ ಸಣ್ಣತನದ ರಾಜಕಾರಣವನ್ನು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಇಲ್ಲಿ ಸೇರಿರುವ ಜನಸ್ತೋಮವೇ ಮುಂದಿನ ಚುನಾವಣೆಯ ಗೆಲುವಿನ ಫಲಿತಾಂಶವನ್ನು ಬರೆದಿಟ್ಟಿದ್ದಾರೆ. ನಿತ್ಯ ಬರಿ ಸುಳ್ಳು ಹೇಳಿಕೊಂಡು ಜನರನ್ನು ವಂಚಿಸುತ್ತಿರುವ ಸೋಮಣ್ಣನವರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದು ಹೇಳಿದರು.

# ನೋಯ್ಡಾದಲ್ಲಿ ಕೆಲವೇ ಸೆಕೆಂಡುಗಳಲ್ಲಿ ನೆಲಕ್ಕುರುಳಿದ ಅವಳಿ ಗೋಪುರದ ಕಟ್ಟಡ



ನೋಯ್ಡಾ, ಆ.28– ನಿಯಮ ಬಾಹಿರವಾಗಿ ನಿರ್ಮಿಸಿದ್ದ ಕಟ್ಟಡವನ್ನು ನೆಲಸಮ ಮಾಡುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿದ ಒಂದು ವರ್ಷದ ಬಳಿಕ ನೋಯ್ಡಾದಲ್ಲಿ ಅಕ್ರಮವಾಗಿ ನಿರ್ಮಾಣವಾಗಿದ್ದ ಸೂಪರ್‌ಟೆಕ್ ಅವಳಿ ಗೋಪುರಗಳನ್ನು ಕೇವಲ ಕೆಲವೇ ಸೆಕೆಂಡುಗಳಲ್ಲಿ ಭಾನುವಾರ ನೆಲಸಮ ಮಾಡಲಾಗಿದೆ.

ಈ ಅವಳಿ ಗೋಪುರದ ಕಟ್ಟಡಗಳು ಭಾರತದಲ್ಲಿ ಕೆಡವಿರುವ ಅತಿ ಎತ್ತರದ ಕಟ್ಟಡಗಳಾಗಿವೆ. ಅಪೆಕ್ಸ್ (32 ಮಹಡಿಗಳು) ಮತ್ತು ಸೆಯಾನೆ (29 ಮಹಡಿಗಳು) ಟವರ್‌ಗಳು 2009 ರಿಂದ ದೆಹಲಿಯ ರಾಷ್ಟ್ರ ರಾಜಧಾನಿಗೆ ಹೊಂದಿಕೊಂಡಿರುವ ನೋಯ್ಡಾದ ಸೆಕ್ಟರ್ 93ಂ ನಲ್ಲಿರುವ ಸೂಪರ್‌ಟೆಕ್ ಎಮರಾಲ್ಡ್ ಕೋರ್ಟ್ ಹೌಸಿಂಗ್ ಸೊಸೈಟಿಯೊಳಗೆ ನಿರ್ಮಾಣ ಹಂತದಲ್ಲಿದ್ದವು.

ಕಟ್ಟಡಗಳನ್ನು ಉರುಳಿಸಲು 3,700 ಕೆಜಿ ಸ್ಫೋಟಕಗಳನ್ನು ಬಳಸಲಾಗಿದೆ.

ನೆಲಸಮಗೊಳಿಸುವುದಕ್ಕೂ ಮುನ್ನ ಕಟ್ಟಡದ ಸುತ್ತಲೂ ನಾಗರಿಕರ ಸುರಕ್ಷತೆ ಹಾಗೂ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಪ್ರಾಂತೀಯ ಸಶಸ್ತ್ರ ಪಡೆಗಳ (ಪಿಎಸಿ) ಜೊತೆಗೆ 500 ಪೊಲೀಸ್ ಹಾಗೂ ಸಂಚಾರ ದಳ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಎಮರಾಲ್ಡ್ ಕೋರ್ಟ್ ಸೊಸೈಟಿ ಆವರಣದಲ್ಲಿ ನಿಯಮಬಾಹಿರವಾಗಿ ನಿರ್ಮಿಸಿರುವ ಕಟ್ಟಡಗಳನ್ನು ಇಂದು ಮಧ್ಯಾಹ್ನ 2.30ಕ್ಕೆ ನೆಲಸಮಗೊಳಿಸಲು ಸಮಯ ನಿಗದಿಪಡಿಸಲಾಗಿತ್ತು. ಕಟ್ಟಡದ ಸುತ್ತಲಿನ 500 ಚದರ ಮೀಟರ್ ಪ್ರದೇಶವನ್ನು ನಿಷೇಧಿತ ವಲಯ ಎಂದೂ ಘೋಷಿಸಲಾಗಿತ್ತು.

ನೋಯ್ಡಾ ಪ್ರಾಧಿಕಾರದ ಮಾರ್ಗದರ್ಶನದಲ್ಲಿ ಎಡಿಫೈಸ್ ಇಂಜಿನಿಯರ್ ಕಂಪನಿಯು 20 ಕೋಟಿ ಖರ್ಚಿನಲ್ಲಿ ಸುಮಾರು 3,700 ಕೆ.ಜಿ ಸ್ಫೋಟಕಗಳನ್ನು ಬಳಸಿ ಕಟ್ಟಡಗಳನ್ನು ನೆಲಸಮಗೊಳಿಸಿದೆ.

2012ರಲ್ಲಿ ಸ್ಥಳೀಯ ನಿವಾಸಿಗಳು ಕಾನೂನುಬಾಹಿರವಾಗಿ ಈ ಅವಳಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ ಎಂದು ಅಲಹಾಬಾದ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಬಳಿಕ 2014ರಲ್ಲಿ ನ್ಯಾಯಾಲಯ ನಿವಾಸಿಗಳ ಪರವಾಗಿ ತೀರ್ಪು ನೀಡಿತು. 4 ತಿಂಗಳ ಒಳಗಾಗಿ ಕಂಪನಿಯು ತನ್ನ ಸ್ವಂತ ಖರ್ಚಿನಲ್ಲಿ ಕಟ್ಟಡಗಳನ್ನು ನೆಲಸಮ ಮಾಡಬೇಕೆಂದು ಆದೇಶ ನೀಡಿತ್ತು.

ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ವಿರೋಧಿಸಿ ಫ್ಲಾಟ್ ಖರೀದಿದಾರರು ಮತ್ತು ಕಂಪನಿಯು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಅಂತಿಮವಾಗಿ ಸುಪ್ರೀಂ ಕೋರ್ಟ್ ಕೂಡ ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಎತ್ತಿ ಹಿಡಿದು, ಕಟ್ಟಡಗಳನ್ನು ನೆಲಸಮ ಮಾಡುವಂತೆ ಆದೇಶಿಸಿತ್ತು.

# ಕೊಡಗಿಗೆ ಕೇರಳದಿಂದ ಪಿಎಫ್‌ಐ ಕಾರ್ಯಕರ್ತರು ಬಂದಿರುವುದು ಸುಳ್ಳು

## ಆರೋಪದ ಬಗ್ಗೆ ಸ್ಪಷ್ಟನೆ ನೀಡಲು ಎಸ್ಪಿಗೆ ಆಗ್ರಹ



ಮಡಿಕೇರಿ, ಆ.28– ಕೊಡಗಿಗೆ ಕೇರಳದಿಂದ ಬಹು ಸಂಖ್ಯೆಯಲ್ಲಿ ಪಿಎಫ್‌ಐ ಕಾರ್ಯಕರ್ತರು ಬಂದಿದ್ದಾರೆ ಎಂಬ ಆರೋಪ ಸತ್ಯಕ್ಕೆ ದೂರವಾಗಿದ್ದು, ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಪಷ್ಟನೆ ನೀಡಬೇಕು ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕೊಡಗು ಜಿಲ್ಲಾ ಘಟಕ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಪಿಎಫ್‌ಐ ರಾಜ್ಯ ಸಮಿತಿ ಸದಸ್ಯ ಟಿ.ಹೆಚ್.ಅಬೂಬಕ್ಕರ್ ಮಾತನಾಡಿ, ಪಿಎಫ್‌ಐ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದ ಸಂಘಟನೆಯಾಗಿದ್ದು, ಇದುವರೆಗೆ ಎಲ್ಲೂ ಹಿಂಸಾಚಾರ ನಡೆಸಿಲ್ಲ. ಸಮಾಜವನ್ನು ಒಡೆಯುವ ಶಕ್ತಿಗಳ ಷಡ್ಯಂತ್ರವನ್ನು ತಡೆಯುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಇದರಿಂದ ಮಾನಸಿಕವಾಗಿ ಧೃತಿಗೆಟ್ಟು ಪಿಎಫ್‌ಐ ವಿರುದ್ಧ ಕ್ಷುಲ್ಲಕ ಆರೋಪ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೊಡಗಿಗೆ ಕೇರಳದಿಂದ ಪಿಎಫ್‌ಐ ಕಾರ್ಯಕರ್ತರು ಬಂದಿದ್ದರೆ ಇಲ್ಲಿಯವರೆಗೆ ಯಾಕೆ ಒಬ್ಬ ಕಾರ್ಯಕರ್ತನನ್ನು, ಕೆಎಸ್‌ಆರ್‌ಪಿ ತುಕಡಿಗಳು ಬಂಧಿಸಿಲ್ಲ, ಬಂದವರು ಎಲ್ಲಿದ್ದಾರೆ ಎಂದು ಪ್ರಶ್ನಿಸಿದ ಅಬೂಬಕ್ಕರ್ ಯಾರಾದರೂ ಕೇರಳದಿಂದ ಬಂದಿದ್ದಲ್ಲಿ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸಿದರು.

ಸತತ 4–5 ಬಾರಿ ಗೆದ್ದ ಶಾಸಕರು, 2 ಬಾರಿ ಗೆದ್ದ ಸಂಸದರು, ಗ್ರಾ.ಪಂ, ಸ್ಥಳೀಯ ಸಂಸ್ಥೆಗಳು ಬಿಜೆಪಿ ಆಡಳಿತವಿದ್ದರೂ ಜಿಲ್ಲೆ ಅಭಿವೃದ್ಧಿ ಶೂನ್ಯವಾಗಿದೆ, ಅಲ್ಲದೆ ಭ್ರಷ್ಟಾಚಾರ ಮಿತಿ ಮೀರಿದೆ. ಜಿಲ್ಲಾಧಿಕಾರಿಗಳ ಕಚೇರಿಯ ತಡೆಗೋಡೆಯ ಕಳಪೆ ಕಾಮಗಾರಿಯನ್ನು ಮರೆಮಾಚಲು ಮೊಟ್ಟೆ ಎಸೆಯಲಾಗಿದೆ. ಇಂತಹ ಪರಿಸ್ಥಿಯ ಲಾಭ ಪಡೆದ ಕಾಂಗ್ರೆಸ್ ಪಕ್ಷ 'ಮಡಿಕೇರಿ ಚಲೋ' ಕಾರ್ಯಕ್ರಮ ಹಮ್ಮಿಕೊಂಡಿತ್ತು. ಕಾಂಗ್ರೆಸ್, ಬಿಜೆಪಿ ದೊಂಬರಾಟದಿಂದ ಕೊಡಗಿನ ಜನ ಹೈರಾಣರಾಗಿದ್ದಾರೆ. ಬಿಜೆಪಿಯು ಜನ ಜಾಗೃತಿ ಕಾರ್ಯಕ್ರಮಕ್ಕೆ ಜನ ಸೇರುವುದಿಲ್ಲ ಎಂಬ ಸಂಶಯದಿಂದ ಕೇರಳದಿಂದ ಕೊಡಗಿಗೆ ಪಿಎಫ್‌ಐ ಕಾರ್ಯಕರ್ತರು ಗಲಭೆ ಎಬ್ಬಿಸಲು ಬಂದಿದ್ದಾರೆ ಎಂದು ಸುಳ್ಳು ಆರೋಪ ಮಾಡಲಾಗಿದೆ. ಮುಂಬರುವ ಚುನಾವಣೆಯನ್ನು ಮುಂದಿಟ್ಟು ಕೊಂಡು ಅಶಾಂತಿ ಸೃಷ್ಟಿಸುವ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಪಿಎಫ್‌ಐ ಜಿಲ್ಲಾಧ್ಯಕ್ಷ ಶೌಕರ್ ಅಲಿ, ಸದಸ್ಯ ಅಬ್ದುಲ್ ಜಲೀಲ್, ಮಡಿಕೇರಿ ನಗರಾಧ್ಯಕ್ಷ ರಿಯಾಜ್ ಹಾಗೂ ನಾಪೋಕ್ಲು ವಲಯಾಧ್ಯಕ್ಷ ಕೆ.ವೈ.ಅಶ್ರಫ್ ಉಪಸ್ಥಿತರಿದ್ದರು.

# ವಿರಾಜಪೇಟೆಯಲ್ಲಿ ಶಾಂತಿಯುತ ಗೌರಿ–ಗಣೇಶ ಹಬ್ಬ ಆಚರಣೆಗೆ ಸೂಚನೆ

- ಬೆಳಗ್ಗೆ 6 ರಿಂದ ರಾತ್ರಿ 10 ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ
- ಡಿಜೆ ಸಂಗೀತಕ್ಕೆ ಅವಕಾಶ ಇಲ್ಲ
- ಕಾನೂನು ಸುವ್ಯವಸ್ಥೆಗೆ ಭಂಗವಾದರೆ ಸಮಿತಿಯೇ ಹೊಣೆ

## ಗಣಪತಿ ಪ್ರತಿಷ್ಠಾಪನ ಸಮಿತಿಗಳೊಂದಿಗೆ ಡಿವೈಎಸ್ಪಿ ಚರ್ಚೆ



ವಿರಾಜಪೇಟೆ, ಆ.28– ಶ್ರೀ ಗೌರಿ–ಗಣೇಶ ಪ್ರತಿಷ್ಠಾಪನ ಸಮಿತಿಯ ಸದಸ್ಯರು ಗೌರಿ–ಗಣೇಶನ ಪ್ರತಿಷ್ಠಾಪನೆ ಮತ್ತು ವಿಸರ್ಜನೆ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಶಾಂತಿಯುತವಾಗಿ ಆಚರಿಸಬೇಕು ಎಂದು ವಿರಾಜಪೇಟೆ ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ವಿರಾಜಪೇಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ನಗರದ 21 ಗಣಪತಿ ಪ್ರತಿಷ್ಠಾಪನ ಸಮಿತಿ ಹಾಗೂ ಗ್ರಾಮಾಂತರ ಠಾಣಾ ವ್ಯಾಪ್ತಿಯ 20 ಸಮಿತಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಗೌರಿ–ಗಣೇಶನ ಪ್ರತಿಷ್ಠಾಪನೆ ಮಾಡುವ ಮೊದಲು ಪುರಸಭೆ, ಗ್ರಾಮ ಪಂಚಾಯಿತಿ, ಸೆಸ್ಕಾಂ ಮತ್ತು ಪೊಲೀಸ್ ಠಾಣೆಗಳಲ್ಲಿ ಅನುಮತಿ ಪಡೆದುಕೊಳ್ಳಬೇಕು ಹಾಗೂ ಮಂಟಪದ ಬಳಿ ಸಿಸಿ ಕ್ಯಾಮರಾ ಅಳವಡಿಸುವುದು ಉತ್ತಮ. ಹಗಲು ಮತ್ತು ರಾತ್ರಿ ವೇಳೆ ಭದ್ರತಾ ಸಿಬ್ಬಂದಿಯನ್ನು ಸಮಿತಿಯವರೇ ನೇಮಿಸಿಕೊಳ್ಳಬೇಕು ಎಂದರು.

ಕಾನೂನು ಸುವ್ಯವಸ್ಥೆಗೆ ಭಂಗ ಉಂಟಾದರೆ ಗಣೇಶ ಸಮಿತಿಯವರೇ ಜವಾಬ್ದಾರರು ಎಂದಾಗ ಸಮಿತಿ ಸದಸ್ಯ ವಕೀಲ ಟಿ.ಪಿ.ಕೃಷ್ಣ ಮಾತನಾಡಿ, ಅನೇಕ ವರ್ಷಗಳಿಂದಲೂ ವಿರಾಜಪೇಟೆಯಲ್ಲಿ ಅದ್ದೂರಿಯಿಂದ ಗೌರಿ ಗಣೇಶ ಹಬ್ಬವನ್ನು ಆಚರಿಸಿಕೊಂಡು ಬರುತ್ತಿದ್ದು, ಕಳೆದ ಮೂರು ವರ್ಷಗಳಿಂದ ಪ್ರಕೃತಿ ವಿಕೋಪ ಮತ್ತು ಕೋವಿಡ್ ಕಾರಣದಿಂದ ಸಾಧ್ಯವಾಗಿಲ್ಲ. ಆದರೆ ಈ ವರ್ಷದ ಹಬ್ಬಕ್ಕೆ ಅತಿಯಾದ ಕಾನೂನು ಹೇರುತ್ತಿದ್ದೀರಿ ಎಂದಾಗ ಡಿವೈಎಸ್ಪಿ ನಿರಂಜನ್ ಸಾರ್ವಜನಿಕರು ಪೊಲೀಸರೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು.

ಸರ್ಕಲ್ ಇನ್ಸ್‌ಪೆಕ್ಟರ್ ಶಿವರುದ್ರ ಮಾತನಾಡಿ ಶ್ರೀ ಗೌರಿ ಗಣೇಶನ ಪ್ರತಿಷ್ಠಾಪನಾ ಜಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಬೆಳಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ಮಾತ್ರ ಧ್ವನಿವರ್ಧಕ ಬಳಸುವುದು. ನಂತರ ಅವಕಾಶವಿಲ್ಲ, ಡಿಜೆಯನ್ನು ಕಡ್ಡಾಯವಾಗಿ ಬಳಸುವಂತಿಲ್ಲ. ಸಮಿತಿ ಸದಸ್ಯರು ಕಾನೂನು ಸುವ್ಯವಸ್ಥೆಗೆ ಭಂಗ ಉಂಟಾಗದಂತೆ ಎಚ್ಚರ ವಹಿಸಬೇಕು, ಹಬ್ಬದ ಸಂದರ್ಭ ಅಹಿತಕರ ಘಟನೆಗಳು ನಡೆಯದಂತೆ ಗಡಿ ಭಾಗದ ಚೆಕ್ ಪೋಸ್ಟ್‌ಗಳಿಗೂ ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗುವುದು. ನ್ಯಾಯಾಲಯದ ಆದೇಶದಂತೆ ಪೊಲೀಸ್ ಇಲಾಖೆಯ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಹೇಳಿದರು.

ವೇದಿಕೆಯಲ್ಲಿ ನಗರ ಠಾಣಾಧಿಕಾರಿ ಶ್ರೀಧರ್ ಮತ್ತು ಮತ್ತಣ್ಣ, ಗ್ರಾಮಾಂತರ ಠಾಣಾಧಿಕಾರಿ ರವಿಕುಮಾರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಒಟ್ಟು 41 ಸಮಿತಿ ಸದಸ್ಯರುಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಸೆ.4ರಂದು ತೋಕ್ ನಮ್ಮೆ, ರಾಜ್ಯಮಟ್ಟದ ಶೂಟಿಂಗ್ ಸ್ಪರ್ಧೆ

## ಮಾಯಮುಡಿಯಲ್ಲಿ ಪೂರ್ಣಗೊಂಡ ಸಿದ್ಧತೆ: ಅಯ್ಯಪ್ಪ ವಿವರಣೆ

ಪೊನ್ನಂಪೇಟೆ, ಆ.28– ಮಾಯಮುಡಿಯ ಐರನ್ ಸೈಟ್ ಶೂಟರ್ಸ್ ಸಂಸ್ಥೆ ವತಿಯಿಂದ ಕೈಲ್ ಪೊಳ್ದ್ ಹಬ್ಬದ ಪ್ರಯುಕ್ತ ಸಾಂಪ್ರದಾಯಿಕ ತೋಕ್ ನಮ್ಮೆ ಹಾಗೂ 3ನೇ ವರ್ಷದ ಶೂಟಿಂಗ್ ಸ್ಪರ್ಧೆ ಸೆ.4ರಂದು ನಡೆಯಲಿದೆ.

ಮಾಯಮುಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ಜರುಗಲಿರುವ ಈ ಸ್ಪರ್ಧೆಯ ಅಗತ್ಯ ಎಲ್ಲಾ ಸಿದ್ಧತೆಗಳು ಈಗಾಗಲೇ ಪೂರ್ಣಗೊಂಡಿದೆ ಎಂದು ಸಂಸ್ಥೆ ಮುಖ್ಯಸ್ಥ ಆಪಟ್ಟೀರ ಆರ್.ಅಯ್ಯಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಡಗು ಜಿಲ್ಲಾ ಯುವ ಒಕ್ಕೂಟ, ಮಾಯಮುಡಿಯ ಕಾವೇರಿ ಯುವಕ ಸಂಘ, ಕಾವೇರಿ ಅಸೋಸಿಯೇಷನ್–ಕೋಲುಬಾಣೆ, ಮಾಯಾಮುಡಿಯ ಕಂಗಳತ್ ನಾಡು ಮಹಿಳಾ ಸಮಾಜ, ಗೋಣಿಕೊಪ್ಪಲಿನ ಕಾವೇರಿ, ಪೊಮ್ಮಕ್ಕಡ ಕೂಟ ಹಾಗೂ ಕೊಡಗು ಜಾವ ಯೆಜ್ಡಿ ಮೋಟಾರ್ ಸೈಕಲ್ ಕ್ಲಬ್ ಇದರ ಸಹಯೋಗದಲ್ಲಿ ಆಯೋಜಿಸಲಾಗಿರುವ ಈ ರಾಜ್ಯಮಟ್ಟದ ಶೂಟಿಂಗ್ ಪೈಪೋಟಿಯಲ್ಲಿ 50 ಮೀ. ಅಂತರದಲ್ಲಿ 0.22 ರೈಫಲ್ ಮೂಲಕ ಮತ್ತು 30 ಮೀ. ಅಂತರದಲ್ಲಿ 12ನೇ ಬೋರ್ ಕೋವಿಯ ಮೂಲಕ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯು ಪ್ರತ್ಯೇಕ ವಿಭಾಗಗಳಲ್ಲಿ ನಡೆಯಲಿದೆ ಎಂದು ವಿವರಿಸಿದರು.

0.22 ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನದಲ್ಲಿ ವಿಜೇತರಾಗುವ ಸ್ಪರ್ಧಿಗೆ ದಿ. ಕಾಳಪಂಡ ಬಿ.ತಿಮ್ಮಯ್ಯ ಮತ್ತು ಕೆ.ಟಿ. ಸೀತಮ್ಮ ಸ್ಮರಣಾರ್ಥ ಅವರ ಮಗ ಕೆ.ಟಿ. ಟಿಪ್ಪು ಬಿದ್ದಪ್ಪ ಪ್ರಾಯೋಜಿಸಿರುವ 20,000 ರೂ. ನಗದು ಬಹುಮಾನ ಹಾಗೂ ಟ್ರೋಫಿ, ದ್ವಿತೀಯ ಸ್ಥಾನದ ಸ್ಪರ್ಧಿಗೆ ದಿ.ಸಣ್ಣುವಂಡ ಸಿ.ಸುಬ್ರಮಣಿ ಸುಬ್ಬಯ್ಯ ಸ್ಮರಣಾರ್ಥ ಅವರ ಪತ್ನಿ ಕಮಲಾಕ್ಷಿ ಹಾಗೂ ಮಗ ಚಿಟ್ಟಿಯಪ್ಪ ಪ್ರಾಯೋಜಿಸಿರುವ 15,000 ರೂ. ನಗದು ಬಹುಮಾನ ಮತ್ತು ಟ್ರೋಫಿ, ತೃತೀಯ ಸ್ಥಾನದ ಸ್ಪರ್ಧಿಗೆ ದಿ.ಹೊಟ್ಟೆಂಗಡ ಕೆ. ರಾಜು ದೇವಯ್ಯ ಹಾಗೂ ಕಾವೇರಮ್ಮ ಸ್ಮರಣಾರ್ಥ ಮಗ ಎಚ್.ಡಿ.ಬೋಪಯ್ಯ ಪ್ರಾಯೋಜಿಸಿರುವ 10 ಸಾವಿರ ರೂ. ನಗದು ಬಹುಮಾನ ಮತ್ತು ಟ್ರೋಫಿಯನ್ನು ನೀಡಲಾಗುವುದು ಎಂದು ಅಯ್ಯಪ್ಪ ಮಾಹಿತಿ ನೀಡಿದರು.

ಸಂಜೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಗುವುದು.

ಗೋಷ್ಠಿಯಲ್ಲಿ ಆಯೋಜನಾ ಸಮಿತಿ ಪದಾಧಿಕಾರಿಗಳಾದ ಕುಪ್ಪಂಡ ದಿಲನ್ ಬೋಪಣ್ಣ, ಶಾಂತೆಯಂಡ ಮಧು ಮಾಚಯ್ಯ, ಕೊಂಗಂಡ ಪಂಚು ದೇವಯ್ಯ ಮತ್ತು ಕಾಳಪಾಂಡ ನರು ನರೇಂದ್ರ ಉಪಸ್ಥಿತರಿದ್ದರು.

# ನಕ್ಷತ್ರ ಆಮೆ ಮಾರಾಟ ಯತ್ನ: ಇಬ್ಬರ ಬಂಧನ



ಕುಶಾಲನಗರ, ಆ.28– ನಕ್ಷತ್ರ ಆಮೆಯನ್ನು ಮಾರಾಟ ಮಾಡಲೆತ್ನಿಸುತ್ತಿದ್ದ ಇಬ್ಬರನ್ನು ಸಿಐಡಿ ಅರಣ್ಯ ಘಟಕದ ಪೊಲೀಸರು ಬಂಧಿಸಿ ಆಮೆಯನ್ನು ವಶಪಡಿಸಿಕೊಂಡಿದ್ದಾರೆ.

ಎಸ್.ವಿ. ಜಗದೀಶ್‌ಕುಮಾರ್ ಮತ್ತು ಶೇಖ್ ಗೈಬೂಸ ಬಾಷಾ ಬಂಧಿತ ಆರೋಪಿಗಳು. ತಾಲೂಕಿನ ಗುಡ್ಡೆಹೊಸೂರಿನಿಂದ ಹಾರಂಗಿ ಕಡೆ ಹೋಗುವ ರಸ್ತೆಯ ಬೊಳ್ಳೂರು–ಮಾದಾಪಟ್ಟಣ ರಸ್ತೆಯ ಜಂಕ್ಷನ್ ಬಳಿ ಅಕ್ರಮವಾಗಿ ನಕ್ಷತ್ರ ಆಮೆಯನ್ನು ವಶದಲ್ಲಿಟ್ಟುಕೊಂಡು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾಗ ಬಂಧಿಸಲಾಗಿದೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದ ಮೇರೆಗೆ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಕೆ.ಬಿ.ವಿಶ್ವನಾಥ್ ಮಾರ್ಗದರ್ಶನದಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ಸಿ.ಯು. ಸವಿ, ಮುಖ್ಯಪೇದೆಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಸಬ್‌ಇನ್ಸ್‌ಪೆಕ್ಟರ್ ಯೋಗೇಶ್, ಮೋಹನ್ ಮತ್ತು ಪೇದೆಗಳಾದ ಸ್ವಾಮಿ ಮತ್ತು ಮಂಜುನಾಥ ಅವರುಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ಕುಶಾಲನಗರ, ಗುಡ್ಡೆಹೊಸೂರಲ್ಲಿ ಕೆದಂಬಾಡಿ ರಾಮಯ್ಯಗೌಡರ ಪುತ್ಥಳಿಗೆ ಭವ್ಯ ಸ್ವಾಗತ

ಕುಶಾಲನಗರ, ಆ.28– ಮಂಗಳೂರಿನ ಬಾವುಟಗುಡ್ಡೆಯಲ್ಲಿ ಪ್ರತಿಷ್ಠಾನೆಯಾಗಲಿರುವ ಸ್ವಾತಂತ್ರ್ಯ ಹೋರಾಟಗಾರ ಕೆದಂಬಾಡಿ ರಾಮಯ್ಯ ಗೌಡರ ಕಂಚಿನ ಪುತ್ಥಳಿಗೆ ಕುಶಾಲನಗರ ಮತ್ತು ಗುಡ್ಡೆಹೊಸೂರಿನ ಶಿರಂಗಾಲದಲ್ಲಿ ಭಾನುವಾರ ಸಂಜೆ ಭವ್ಯ ಸ್ವಾಗತ ನೀಡಲಾಯಿತು.

**ಕುಶಾಲನಗರ:** ಕುಶಾಲನಗರದ ಗೌಡ ಸಮಾಜದ ಅಧ್ಯಕ್ಷ ಕೂರನ ಪ್ರಕಾಶ್ ನೇತೃತ್ವದಲ್ಲಿ ಸಮಾಜದ ಪದಾಧಿಕಾರಿಗಳು ಮತ್ತು ಮುಖಂಡರು ಸಾಂಪ್ರದಾಯಿಕ ಉಡುಪು ಧರಿಸಿ ಸುಜಿ ಪಟ್ಟಣದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಗಣಪತಿ ದೇವಾಲಯ ಬಳಿಗೆ ಆಗಮಿಸಿದ ಪುತ್ಥಳಿ ಮೆರವಣಿಗೆಗೆ ಪುಷ್ಪವೃಷ್ಟಿ ಮಾಡುವುದರ ಜೊತೆಗೆ ಮಹಿಳೆಯರು ಆರತಿ ಮಾಡಿ ಸ್ವಾಗತಿಸಿದರು.

ಗುಡ್ಡೆಹೊಸೂರು ಕುಶಾಲನಗರದ ಗಣಪತಿ ದೇವಸ್ಥಾನದಲ್ಲಿ ಪೂಜೆ ನಡೆಸಿ ಗುಡ್ಡೆಹೊಸೂರಿನ ವೃತ್ತದ ಬಳಿ ಸರ್ವರು ಸೇರಿ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭ ನೂರಾರು ದೇಶಭಕ್ತರು ಹಾಜರಿದ್ದರು ನಂತರ ಕೊಡಗಿನ ವಾಲಗದೊಂದಿಗೆ ಗುಡ್ಡೆಹೊಸೂರಿನ ಸಮಾಜ ಬಾಂಧವರು ಸೇರಿ ನೃತ್ಯ ನಡೆಸಲಾಯಿತು. ಕೆದಂಬಾಡಿ ರಾಮಯ್ಯಗೌಡರ ಪರ ಘೋಷಣೆ ಮೊಳಗಿತು.

ಈ ಸಂದರ್ಭ ಕೆದಂಬಾಡಿ ಪುತ್ಥಳಿ ಸಮಿತಿ ಕಿರಣ್ ಬುಡ್ಲೂಗದ್ದೆ, ಗೌಡ ಸಮಾಜದ ಮುಖಂಡರಾದ ಗಣಿ ಪ್ರಸಾದ್, ಆನಂದ್ ಕರಂದ್ಲಾಜೆ, ಕೊಡಗನ ಹರ್ಷ, ಹೇಮಂತ್, ವಿವೇಕ್, ಲತಾ ಧರ್ಮಕುಮಾರ್, ಭಾಗೀರಥಿ, ತುಂತಜೆ ಧ್ಯಾನ್, ಮೊಣ್ಣಪ್ಪ, ಕೊಡವ ಸಮಾಜದ ಅಧ್ಯಕ್ಷ ಬೋಸ್ ಮೊಣ್ಣಪ್ಪ, ಲಯನ್ಸ್ ಕ್ಲಬ್ ಸುಮನ್ ಮತ್ತಿತರರು ಇದ್ದರು.





# ನಿರಂತರ ಮಳೆ; ಯರಗಂಬಳ್ಳಿ ಬಳಿ ಕೆರೆ ಏರಿ ಒಡೆದು ಅಪಾರ ನಷ್ಟ





ಯಳಂದೂರು, ಆ.28–ಚಾಮರಾಜನಗರ ಜಿಲ್ಲೆಯ ಹಲವೆಡೆ ಕೆಲ ದಿನಗಳಿಂದ ಮುಂಗಾರು ಚುರುಕಾಗಿದ್ದು, ಧಾರಾಕಾರ ಮಳೆಯಿಂದ ಕೆರೆ–ಕಟ್ಟೆಗಳು ತುಂಬಿ ಹರಿಯುತ್ತಿದ್ದು, ಯರಗಂಬಳ್ಳಿಯ ಉಳುಗೆರೆ ಕೆರೆ ಏರಿ ಒಡೆದು ನೂರಾರು ಎಕರೆ ಕೃಷಿ ಪ್ರದೇಶಕ್ಕೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ.

ಉಳುಗೆರೆ ಕೆರೆಯು ಹಲವು ವರ್ಷಗಳಿಂದ ತುಂಬಿರಲಿಲ್ಲ. ಅಲ್ಲದೆ ಕೆರೆಯ ಏರಿ ಬಿರುಕು ಬಿಟ್ಟಿತ್ತು ಬಿಆರ್‌ಟಿ ತಪ್ಪಲಿನಲ್ಲಿರುವ ಕೃಷ್ಣಯ್ಯನ ಕಟ್ಟೆ ತುಂಬಿ ಹೆಚ್ಚುವರಿ ನೀರೂ ಹರಿದು ಬರುತ್ತಿದ್ದರಿಂದ ಹಾಗೂ ನಿರಂತರ ಮಳೆಯಿಂದ ಕೆರೆ ಏರಿ ಒಡೆದಿದೆ. ಇದರಿಂದ ಅಕ್ಕ–ಪಕ್ಕದಲ್ಲಿದ್ದ ಹತ್ತಾರು ಎಕರೆ ರೈತರ ಕೃಷಿ ಭೂಮಿಗೆ ನೀರು ನುಗ್ಗಿದ್ದು ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ. ಪಕ್ಕದಲ್ಲೇ ಕಬಿನಿ ಕಾಲುವೆಯೂ ಇರುವುದರಿಂದ ಹೆಚ್ಚಿನ ಪ್ರಮಾಣದ ನೀರು ಸದ್ಯ ಕಾಲುವೆಗೆ ಹರಿದಿದ್ದು ನಷ್ಟದ ಪ್ರಮಾಣ ತಗ್ಗಿದೆ.

ಯರಗಂಬಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಈ ಕೆರೆ ಒಳಪಟ್ಟಿದ್ದು. ಸ್ಥಳಕ್ಕೆ ಪಂಚಾಯತ್ ರಾಜ್‌ನ ಎಇಇ ಹರೀಶ್‌ಕುಮಾರ್ ಯರಗಂಬಳ್ಳಿ ಗ್ರಾಮದ ಪಿಡಿಓ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಉನ್ನತ ಅಧಿಕಾರಿಗಳಿಗೆ ನಷ್ಟದ ಮಾಹಿತಿ ಸಲ್ಲಿಸುವುದಾಗಿ ತಿಳಿಸಿದ್ದಾರೆ.

**ತುಂಬಿ ಹರಿಯುತ್ತಿರುವ ಕೆರೆಗಳು:** ಮೂರು ದಿನಗಳಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ತಾಲೂಕಿನ ಬಹುತೇಕ ಕೆರೆಗಳು ಮತ್ತು ಜಲಾಶಯಗಳು ಭರ್ತಿಯಾಗಿವೆ. ಯರಗಂಬಳ್ಳಿ ಕೆರೆ, ಕೃಷ್ಣಯ್ಯನಕಟ್ಟೆ, ಗುಂಬಳ್ಳಿ, ಹೊಂಗನೂರು, ಇರಸವಾಡಿ ಕೆರೆಗಳು ಸೇರಿದಂತೆ ಬಹುತೇಕ ಕೆರೆಗಳು ತುಂಬಿ ಕೋಡಿ ಬಿದ್ದಿವೆ.

**ತತ್ತರಿಸಿದ ಜನತೆ:** ಮಳೆಯಿಂದಾಗಿ ಯಳಂದೂರು ತಾಲೂಕು ಹಾಗೂ ಸುತ್ತಮುತ್ತಲಿನ ಕೆಲ ಗ್ರಾಮಗಳು ಸಂಪೂರ್ಣ ತತ್ತರಿಸಿವೆ. ಜಮೀನುಗಳಿಗೆ ನೀರು ನುಗ್ಗಿ ಸಾಕಷ್ಟು ಪ್ರಮಾಣದಲ್ಲಿ ಬೆಳೆ ಹಾನಿಯೂ ಆಗಿದೆ. ಅಲ್ಲದೆ ಸಂಪರ್ಕ ರಸ್ತೆಗಳೂ ನೀರು ಪಾಲಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಎಲ್ಲೆಡೆ ರೈತರು ಭತ್ತ ಬಿತ್ತನೆ ಕಾರ್ಯ ಆರಂಭಿಸಿದ್ದರು. ಕೆಲವೆಡೆ ಒಟ್ಲು ಮಾಡಿ, ಪೈರನ್ನು ನಾಟಿ ಮಾಡಿದ್ದರು. ಸತತ ಮಳೆ ಹಾಗೂ ಪ್ರವಾಹದಿಂದ ಪೈರೆಲ್ಲಾ ಸಂಪೂರ್ಣ ಕೊಚ್ಚಿ ಹೋಗಿದೆ. ದುಗ್ಗಹಟ್ಟಿ, ಹೊನ್ನೂರು, ಮೆಲ್ಲಹಳ್ಳಿ, ಕಂದಹಳ್ಳಿ, ಯಳಂದೂರು, ಕೃಷ್ಣಪುರ, ಗಣಿಗನೂರು, ಗುಂಬಳ್ಳಿ ಸೇರಿದಂತೆ ಹಲವು ಭೂ ಪ್ರದೇಶದಲ್ಲಿ ಭತ್ತದ ಪೈರು ಕೊಚ್ಚಿ ಹೋಗಿದೆ. ಜಿಲ್ಲಾಡಳಿತ ಸೂಕ್ತ ಪರಿಹಾರ ನೀಡುವ ನಿಟ್ಟಿನಲ್ಲಿ ಮುಂದಾಗಬೇಕೆಂದು ರೈತರು ಆಗ್ರಹಿಸಿದ್ದಾರೆ.

# ಕೋಡಿಬಿದ್ದ ಕಥಾನಾಯಕನ ಕೆರೆ ಸುತ್ತಮುತ್ತಲ ಜಮೀನುಗಳು ಜಲಾವೃತ

## ಶಾಸಕ ಸಿ.ಪುಟ್ಟರಂಗಶೆಟ್ಟಿ ಪರಿಶೀಲನೆ



ಚಾಮರಾಜನಗರ ಆ.28–ತಾಲೂಕಿನ ಜ್ಯೋತಿಗೌಡನಪುರ ಗ್ರಾಮದ ಸಮೀಪದ ಕಥಾನಾಯಕನಕೆರೆ ಈಚೆಗೆ ಸುರಿದ ಮಳೆಯಿಂದ ಕೋಡಿಬಿದ್ದಿದ್ದು, ಸುತ್ತ ಮುತ್ತಲ ಗ್ರಾಮಗಳ ಜಮೀನು ಜಲಾವೃತವಾದ ಹಿನ್ನೆಲೆಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧಿಕಾರಿಗಳ ಜೊತೆ ಭೇಟಿ ನೀಡಿ, ಪರಿಶೀಲಿಸಿದರು.

ನಂತರ ಮಾತನಾಡಿ, ಜಿಲ್ಲೆಯಾದ್ಯಂತ ಒಂದು ವಾರ ಕಾಲ ಸುರಿದ ಮಳೆಯ ಪರಿಣಾಮ ಈ ಭಾಗದ ಕಥಾನಾಯಕನ ಕೆರೆ ಕೋಡಿ ಬಿದ್ದಿದೆ. ಇದು ಒಂದುಕಡೆ ಸಂತಸ ತರುವ ವಿಚಾರ. ಮತ್ತೊಂದೆಡೆ ಕೆರೆಯ ನೀರು ಜಮೀನಿಗೆ ನುಗ್ಗಿ ರೈತರು ಬೆಳೆದಿರುವ ಅರಿಶಿನ, ಬಾಳೆ, ಮುಸುಕಿನಜೋಳ ಬೆಳೆ ಹಾಳಾಗಿದ್ದು, ರೈತರಿಗೆ ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ. ಮಳೆಯಿಂದಾಗಿ ಅಕ್ಕಪಕ್ಕದ ಸೇತುವೆಗಳು ಮುಳುಗಡೆಯಾಗಿವೆ. ಸರ್ಕಾರ ಬೆಳೆಹಾನಿಗೆ ಕೇವಲ 10 ಸಾವಿರ ಪರಿಹಾರ ವಿತರಣೆ ಮಾಡಿದೆ. ಈ ಪರಿಹಾರ ಸಾಲುವುದಿಲ್ಲ. ಸರ್ಕಾರ ಪರಿಹಾರದ ಮೊತ್ತ ಹೆಚ್ಚಳ ಮಾಡಬೇಕು. ನಷ್ಟದ ಅಂದಾಜನ್ನು ಪರಿಶೀಲಿಸಿ ಸೂಕ್ತ ಪರಿಹಾರ ಕೊಡಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಸೂಚಿಸಿದರು.

ಇದೇ ವೇಳೆ ಶಾಸಕರು ಕೆರೆಕೋಡಿಬಿದ್ದ ಸ್ಥಳ ಜೊತೆಗೆ ಕುಂಟಗುಡಿ, ಹೊಂಡರ ಬಾಳು ಬಳಿಯ ಶಿಥಿಲಾವಸ್ಥೆ ಸೇತುವೆ, ಜ್ಯೋತಿಗೌಡನಪುರ ಸಮೀಪದ ಸಿಲ್ವಾರ್ ಕಟ್ಟೆ ಪರಿಶೀಲಿಸಿದರು. ತಹಸೀಲ್ದಾರ್ ಬಸವರಾಜು, ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಿಗರು, ನಾಗವಳ್ಳಿ ನಾಗಯ್ಯ, ಮಹದೇವಸ್ವಾಮಿ, ಮಹದೇವಯ್ಯ, ರಮೇಶ್‌ಸ್ವಾಮಿ ಮಹೇಶ್ ಸೇರಿದಂತೆ ಇತರರಿದ್ದರು.


# ಜಾನುವಾರುಗಳ ಅಕ್ರಮ ಸಾಗಣೆ; ನಾಲ್ವರ ಬಂಧನ

ಯಳಂದೂರು, ಆ.28–ಜಾನುವಾರುಗಳ ಅಕ್ರಮ ಸಾಗಣೆ ಪ್ರತ್ಯೇಕ ಪ್ರಕರಣದಲ್ಲಿ ಸಂತೆಮರಹಳ್ಳಿ ಠಾಣೆ ಪೊಲೀಸರು ನಾಲ್ವರನನು ಬಂಧಿಸಿದ್ದಾರೆ.



ಖಚಿತ ಮಾಹಿತಿ ಮೇರೆಗೆ ಸಂತೇಮರಳ್ಳಿ ಠಾಣೆಯ ಸಿಪಿಐ ಬಿ.ಮಹೇಶ್, ಪಿಎಸ್‌ಐ ತಾಜುದ್ದೀನ್ ನೇತೃತ್ವದಲ್ಲಿ ರಮೇಶ್, ಮಾದೇಶ್, ಮಹೇಶ್, ಪ್ರತಾಪ್ ಪೊಲೀಸರ ತಂಡ ಪ್ರತ್ಯೇಕವಾಗಿ ದಾಳಿ ನಡೆಸಿ ಯಳಂದೂರು ಸಮೀಪದ ಬಸವಟ್ಟಿ ಗೇಟ್ ಬಳಿ 2 ಹಸುಗಳನ್ನು ಗೂಡ್ಸ್ ಆಟೋದಲ್ಲಿ ಸಾಗಿಸುತ್ತಿದ್ದ ಮಹೇಶ್ ಹಾಗೂ ರಾಚಯ್ಯ ಎಂಬು ವವರನ್ನು ಬಂಧಿಸಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಹಲ್ಲೇಪುರ ಕ್ರಾಸ್ ಬಳಿ ಗೂಡ್ಸ್ ಆಟೋದಲ್ಲಿ 2 ಎಮ್ಮೆಗಳನ್ನು ಸಾಗಿಸುತ್ತಿದ್ದ ವೇಳೆ ಆಟೋ ಸೇರಿದಂತೆ ಮಹೇಶ್ ಹಾಗೂ ಶ್ರೀಕಂಠಸ್ವಾಮಿ ಎಂಬುವರನ್ನು ವಶಕ್ಕೆ ಪಡೆದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ.

# ಇಂದು ರಾಮಕೃಷ್ಣಹೆಗಡೆ ಜನ್ಮದಿನಾಚರಣೆ



ಚಾಮರಾಜನಗರ, ಆ.28–ಲೋಕ ಶಕ್ತಿ ಪಕ್ಷದ ಸಂಸ್ಥಾಪಕ ಹಾಗೂ ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಅವರ 97ನೇ ವರ್ಷದ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಆ.29ರಂದು ಸೋಮವಾರ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಲೋಕಶಕ್ತಿ ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ್ ವಿ.ಸ್ಥಾವರಮತ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 25 ವರ್ಷಗಳ ಹಿಂದೆ ಚಾಮರಾಜನಗರ ಜಿಲ್ಲಾ ಕೇಂದ್ರ ಮಾಡಲು ಹೆಗಡೆ ಅವರು ಕಾರಣಿಕರ್ತರು. ಆದ್ದರಿಂದ ಲೋಕ್ ಶಕ್ತಿ ಪಕ್ಷದ ರಾಜಕೀಯ ಪರ್ವ ಚಾಮರಾಜನಗರದಿಂದ ಆರಂಭವಾಗಿ ರಾಜ್ಯದ ತುತ್ತತುದಿ ಜಿಲ್ಲೆ ಬೀದರ್‌ವರೆಗೂ ಜನ ಶಕ್ತಿಯಾಗಿ ಪರಿವರ್ತನೆ ಆಗಬೇಕೆಂದು ಅವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಚಾಮರಾಜನಗರ ನಗರದ ವರ್ತಕರ ಭವನದಲ್ಲಿ ಬೆಳಗ್ಗೆ 11.30ಕ್ಕೆ ಆಯೋಜಿಸಲಾಗಿದ್ದು, ಜಿಲ್ಲೆಯ ಪಕ್ಷದ ಕಾರ್ಯಕರ್ತರು ಹಾಗೂ ರಾಮಕೃಷ್ಣ ಹೆಗಡೆಯವರ ಅಭಿಮಾನಿಗಳು ಭಾಗವಹಿಸುವಂತೆ ಚಂದ್ರಶೇಖರ್ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸತೀಶ್ ಗೋವಿಂದಪ್ಪ, ಜಿಲ್ಲಾಧ್ಯಕ್ಷ ಎಲ್.ಮಹದೇವಯ್ಯ, ಕೋಡಿಉಗನೆ, ಸಂಘಟನಾ ಕಾರ್ಯದರ್ಶಿ ವೆಂಕಟೇಶ್, ಉಪಾಧ್ಯಕ್ಷ ಮಾಲಂಗಿ ಮಲ್ಲೇಶ್, ಸಿದ್ದಾರ್ಥ್, ರಂಗಸ್ವಾಮಿ ಹಾಜರಿದ್ದರು.

# ಚಾ.ನಗರ ಅಭಿವೃದ್ಧಿಗೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ಆ.28–ಚಾಮರಾಜನಗರ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಅವರು ತಮ್ಮ ಬೆಂಬಲಿಗರೊಂದಿಗೆ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರತಿಭಟಿಸಿದರು.

ಬಳಿಕ ಮಾತನಾಡಿದ ಅವರು, ಚಾಮರಾಜನಗರ ಕರ್ನಾಟಕ ಗಡಿಭಾಗವಾಗಿದ್ದು, ನಿರಂತರವಾಗಿ ಹೋರಾಟಗಳು ನಡೆಯುತ್ತಿದ್ದರೂ ಸರ್ಕಾರ ಅಭಿವೃದ್ಧಿ ಬಗ್ಗೆ ಗಮನ ಹರಿಸುತ್ತಿಲ್ಲ. ಪ್ರಸಕ್ತ ಸಾಲಿನ ಆಯವ್ಯಯದಲ್ಲೂ ರಾಜ್ಯ ಸರ್ಕಾರ ಅನುದಾನ ಮೀಸಲಿಡಲಿಲ್ಲ. ಮುಖ್ಯಮಂತ್ರಿ ಅವರಂತೂ ಜಿಲ್ಲೆಗೆ ಬರಲಿಲ್ಲ. ಸರ್ಕಾರಕ್ಕೆ ಚಾಮರಾಜನಗರ ಇದೆ ಅಂತಾ ಗೊತ್ತಿಲ್ಲ. ನಗರವನ್ನು ಕಡೆಗಣಿಸಿದ್ದಾರೆ ಎಂದು ಆರೋಪಿಸಿದರು.



**ರಾಷ್ಟ್ರೀಯ ಹೆದ್ದಾರಿ ಜೋಡಿರಸ್ತೆ ಆಗಲಿ:** ರಾಷ್ಟ್ರೀಯ ಹೆದ್ದಾರಿಗಳಾದ ಬೆಂಗಳೂರು–ಚಾಮರಾಜನಗರ ಕನಕಪುರದಿಂದ–ಚಾಮರಾಜನಗರ ಹಾಗೂ ಮೈಸೂರುನಿಂದ ಚಾಮರಾಜನಗರಕ್ಕೂ ಜೋಡಿರಸ್ತೆ ಇಲ್ಲ. ಚಾಮರಾಜನಗರದ ಎಲ್ಲಾ ಸುತ್ತ ಜೋಡಿರಸ್ತೆ ಮಾಡಲೇಬೇಕು. ಬೇರೆ ಜಿಲ್ಲೆಗಳಂತೆ ಜೋಡಿರಸ್ತೆ ಅಭಿವೃದ್ಧಿಪಡಿಸಬೇಕು ಎಂದು ವಾಟಾಳ್ ಆಗ್ರಹಿಸಿದರು.

**10 ಸಾವಿರ ಕೋಟಿ ಪ್ಯಾಕೇಜ್ ನೀಡಿ:** ಬಸವರಾಜ ಬೊಮ್ಮಾಯಿ ಒಬ್ಬ ಉತ್ತಮ ಮುಖ್ಯಮಂತ್ರಿ. ಅವರ ಬಗ್ಗೆ ನಮಗೆ ಬಹಳ ಗೌರವವಿದೆ. ಚಾಮರಾಜನಗರದ ಅಭಿವೃದ್ಧಿ ಬಗ್ಗೆ ಪ್ರಾಮಾಣಿಕವಾಗಿ ಅವರು ಚಿಂತಿಸಬೇಕು. ಚಾಮರಾಜನಗರಕ್ಕೆ ಕನಿಷ್ಠ 10 ಸಾವಿರ ಕೋಟಿ ಪ್ಯಾಕೇಜ್, 1 ಲಕ್ಷ ಮನೆಗಳನ್ನು ಕಲ್ಪಿಸಬೇಕು. 2ನೇ ಹಂತ ಕಾವೇರಿ ಯೋಜನೆ ಜಾರಿ ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಅಜಯ್, ಪ್ರಮೋದ್, ಶಿವಲಿಂಗಮೂರ್ತಿ, ರೇವಣ್ಣ, ನಾಗಸುಂದರ್, ಚಾ.ರಾ.ಕುಮಾರ್, ಪಾರ್ಥಸಾರಥಿ ಇತರರು ಭಾಗವಹಿಸಿದ್ದರು.

# ವಾರದ ಹಿಂದೆ ನಾಪತ್ತೆಯಾಗಿದ್ದ ವ್ಯಕ್ತಿ ಶವವಾಗಿ ಪತ್ತೆ



ಕೊಳ್ಳೇಗಾಲ, ಆ.28–ಆಸ್ಪತ್ರೆಗೆ ಹೋಗುವುದಾಗಿ ತೆರಳಿ ವಾರದ ಹಿಂದೆ ನಾಪತ್ತೆಯಾಗಿದ್ದ ವ್ಯಕ್ತಿಯೊಬ್ಬರು ತಾಲೂಕಿನ ಹರಳೆ ಗ್ರಾಮದ ಬಳಿ ಕಾವೇರಿ ನದಿ ತೀರದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ.

ತಾಲೂಕಿನ ಕುಣಗಳ್ಳಿ ಗ್ರಾಮದ ತಾಂಡವಮೂರ್ತಿ(56) ಗ್ಯಾಂಗ್ರಿನ್‌ನಿಂದ ಬಳಲುತ್ತಿದ್ದರು. ಆ.22ರಂದು ಆಪರೇಷನ್ ಮಾಡಿ ಕಾಲಿನ ಅಲ್ಪಭಾಗ ಕತ್ತರಿಸಬೇಕು ಎಂದು ತಿಳಿಸಿದ್ದ ವೈದ್ಯರು ಸ್ಕ್ಯಾನಿಂಗ್ ವರದಿ ತರಲು ಸೂಚಿಸಿದ್ದರು. ಅದರಂತೆ ಸ್ಕ್ಯಾನಿಂಗ್ ಮಾಡಿಸಿಕೊಂಡು ಆಸ್ಪತ್ರೆಗೆ ತೆರಳುವುದಾಗಿ ತಿಳಿಸಿ ತಾಂಡವಮೂರ್ತಿ ಆ.20ರಂದು ಬೆಳಗ್ಗೆ 7ಗಂಟೆ ಸುಮಾರಿನಲ್ಲಿ ಮನೆಯಿಂದ ಹೋಗಿದ್ದರು. ಆದರೆ ರಾತ್ರಿಯಾದರೂ ಅವರು ವಾಪಸ್ಸಾಗಲಿಲ್ಲ. ಈ ಕುರಿತು ಮಾಂಬಳ್ಳಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಈ ಮಧ್ಯೆ ಭಾನುವಾರ(ಆ.28) ಬೆಳಗ್ಗೆ 10 ಗಂಟೆ ವೇಳೆಗೆ ಹರಳೆ ಗ್ರಾಮದ ಸಮೀಪದ ಕಾವೇರಿ ನದಿಯಲ್ಲಿ ತಾಂಡವಮೂರ್ತಿ ಶವ ಪತ್ತೆಯಾಗಿದೆ. ಅನಾರೋಗ್ಯದಿಂದ ಇವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದ್ದು, ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಸಾವು ಹೇಗೆ ಸಂಭವಿಸಿದೆ ಎಂಬುದು ತಿಳಿಯಲಿದೆ.

# ಹಾಲು ಉತ್ಪಾದಕರ ಸಂಘದ ವಾರ್ಷಿಕ ಸಭೆ



ಗುಂಡ್ಲುಪೇಟೆ, ಆ.28–ತಾಲೂಕಿನ ತೆರಕಣಾಂಬಿಹುಂಡಿ–1ರ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆ ನಡೆಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಗುರುಸ್ವಾಮಪ್ಪ ಅವರು, ಹೈನುಗಾರಿಕೆಯು ರೈತರ ಬಾಳಿನ ಜೀವಾಳವಾಗಿದೆ. ಉತ್ತಮ ಗುಣಮಟ್ಟದ ಹಾಲನ್ನು ಡೇರಿಗೆ ಹಾಕುವುದರೊಂದಿಗೆ ಉತ್ತಮ ಲಾಭವನ್ನು ಹಾಲು ಉತ್ಪಾದಕರು ಪಡೆಯಬಹುದು ಎಂದರು.

ಮುಖ್ಯ ಅತಿಥಿಗಳಾಗಿ ಚಾಮುಲ್ ಮಾರ್ಗ ವಿಸ್ತರಣಾಧಿಕಾರಿ ಮಂಜೇಶ್‌ಕುಮಾರ್ ಮಾತನಾಡಿದರು. ಸಭೆಯಲ್ಲಿ ಉಪಾಧ್ಯಕ್ಷ ಎಂ.ಪ್ರಕಾಶ್, ನಿರ್ದೇಶಕ ಬಿ.ರೇವಣ್ಣ, ನಾಗಪ್ಪ, ಶಿವಮಲ್ಲಪ್ಪ, ನಂಜಪ್ಪ, ಬಸವಣ್ಣ, ನಾಗಮಲ್ಲಪ್ಪ, ಮಂಜುಳಾ, ವೆಂಕಟಯ್ಯ, ಸುವರ್ಣಮ್ಮ, ಸಾಕಮ್ಮ ಮತ್ತು ಸಂಘದ ಸಿಇಓ ಜಿ.ಸುಂದರೇಶ್, ಹಾಲು ಪರೀಕ್ಷಕ ಎಂ.ಮಾದಪ್ಪ, ಗುಮಾಸ್ತ ಬಿ.ಮಹೇಂದ್ರ. ಸಹಾಯಕ ಬಿ.ನವೀನ್ ಮತ್ತು ಹಾಲು ಉತ್ಪಾದಕರಿದ್ದರು.

ಮೂರನೇ ಪುಟದಿಂದ

## ಭಾರತಕ್ಕೆ ಭರ್ಜರಿ ಜಯ

ದಹಾನಿ 2 ಸಿಕ್ಸರ್ ಒಳಗೊಂಡ 16 ರನ್ ಗಳಿಸಿ ತಂಡದ ಮೊತ್ತ 140 ರನ್ ಗಡಿ ದಾಟಿಸಿದರು. ಭಾರತದ ಪರ ಭುವನೇಶ್ವರ್ ಕುಮಾರ್ 4, ಹಾರ್ದಿಕ್ ಪಾಂಡ್ಯ 3, ಹರ್ಷದೀಪ್ ಸಿಂಗ್ 2, ಆವೇಶ್ ಖಾನ್ 1 ವಿಕೆಟ್ ಪಡೆದರು. 148 ರನ್‌ಗಳ ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಭಾರತ ಇನ್ನಿಂಗ್ಸ್ ಆರಂಭದಲ್ಲೇ ಕನ್ನಡಿಗ ಕೆ.ಎಲ್.ರಾಹುಲ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಒಂದಾದ ನಾಯಕ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ 49 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 12 ರನ್ ಗಳಿಸಿದ್ದ ರೋಹಿತ್ ಭಾರೀ ಹೊಡೆತಕ್ಕೆ ಮುಂದಾಗಿ ವಿಕೆಟ್ ಕೈಚೆಲ್ಲಿದರು. ಮತ್ತೊಂದೆಡೆ ಅರ್ಧ ಶತಕ ದಾಖಲಿಸುವ ಭರವಸೆ ಮೂಡಿಸಿದ್ದ ವಿರಾಟ್ ಕೊಹ್ಲಿ 34 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಒಳಗೊಂಡ 35 ರನ್‌ಗಳಿಸಿ ಪೆವಿಲಿಯನ್ ಸೇರಿದರು. ನಂತರ ಬಂದ ಸೂರ್ಯಕುಮಾರ್ ಯಾದವ್ ಕೂಡ 18 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

**ಜಡೇಜಾ, ಪಾಂಡ್ಯ ಜುಗಲ್‌ಬಂದಿ:** ಪಂದ್ಯದಲ್ಲಿ ತಾಳ್ಮೆ ಹಾಗೂ ಆಕ್ರಮಣಕಾರಿ ಆಟವಾಡಿದ ರವೀಂದ್ರ ಜಡೇಜಾ ಹಾಗೂ ಹಾರ್ದಿಕ್ ಪಾಂಡ್ಯ ಪಾಕ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಇವರಿಬ್ಬರೂ 4ನೇ ವಿಕೆಟ್‌ಗೆ ಅತ್ಯಮೂಲ್ಯ 52 ರನ್ ಜೊತೆಯಾಟವಾಡುವ ಮೂಲಕ ತಂಡವನ್ನು ಗೆಲುವಿನ ಸನಿಹಕ್ಕೆ ಕೊಂಡೊಯ್ದರು. ಆದರೆ ಅಂತಿಮ ಓವರ್‌ನಲ್ಲಿ ಭಾರೀ ಹೊಡೆತಕ್ಕೆ ಮುಂದಾದ ಜಡೇಜಾ ವಿಕೆಟ್ ಒಪ್ಪಿಸಿದರು. ಈ ವೇಳೆ 3 ಬಾಲ್‌ಗೆ 6ರನ್ ಅವಶ್ಯಕತೆ ಇದ್ದಾಗ ಹಾರ್ದಿಕ್ ಪಾಂಡ್ಯ ಭರ್ಜರಿ ಸಿಕ್ಸರ್ ಬಾರಿಸುವ ಮೂಲಕ ತಂಡಕ್ಕೆ ಜಯ ತಂದಿತ್ತರು. ಅಂತಿಮವಾಗಿ ಭಾರತ 19.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 148ರನ್ ಗಳಿಸಿತು. ಪಾಕ್ ಪರ ಮೊಹಮ್ಮದ್ ನವಾಜ್ 3, ನಸೀಮ್ ಷಾ 2 ವಿಕೆಟ್ ಉರುಳಿಸಿದರು. ಬ್ಯಾಟಿಂಗ್‌ನಲ್ಲಿ 33 ರನ್ ಹಾಗೂ ಬೌಲಿಂಗ್‌ನಲ್ಲಿ 3 ವಿಕೆಟ್ ಉರುಳಿಸಿದ ಪಾಂಡ್ಯ ನಿರೀಕ್ಷೆಯಂತೆಯೇ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

## ರಾಮಮಂದಿರದಲ್ಲಿ ದೇವರ ದರ್ಶನ

ಇರುವ ರಾಮ ಭಕ್ತರು 2023ರಿಂದ ದೇವರಿಗೆ ನಮನ ಸಲ್ಲಿಸಬಹುದು ಎಂದರು. ದೇವಾಲಯವು ಕನಿಷ್ಠ ಸಾವಿರ ವರ್ಷ ಕಾಲ ಸ್ಥಿರತೆಯಲ್ಲಿರಲು ಬೃಹತ್ ಅಡಿ ಪಾಯವನ್ನು ಹಾಕಲಾಗುತ್ತಿದೆ. ದೇವ ಸ್ಥಾನದ ವಿಸ್ತೀರ್ಣ, ಪ್ರಾಂಗಣ ಸೇರಿ ದಂತೆ ಒಟ್ಟು 8 ಎಕರೆ ಜಾಗಗಳಿಗೆ ತೆರಳಲು ಆಯತಾಕಾರದಲ್ಲಿ ರಸ್ತೆ ನಿರ್ಮಿಸಲಾಗಿದೆ ಎಂದು ಮಾಹಿತಿ ನೀಡಿದರು. ದೇವಾಲಯದ ಗರ್ಭಗುಡಿಯೊಳಗೆ ರಾಜಸ್ಥಾನದ ಮಕ್ರಾನಾ ಬೆಟ್ಟಗಳಿಂದ ತರಿಸಿರುವ ಬಿಳಿ ಅಮೃತ ಶಿಲೆಯನ್ನು ಬಳಸಲಾಗುವುದು. ಅಮೃತಶಿಲೆಯ ಕೆತ್ತನೆ ಕಾರ್ಯ ಪ್ರಗತಿಯಲ್ಲಿದ್ದು, ಕೆತ್ತಿದ ಕೆಲವು ಮಾರ್ಬಲ್ ಬ್ಲಾಕ್‌ಗಳನ್ನು ಈಗಾಗಲೇ ಅಯೋಧ್ಯೆಗೆ ತರಲಾಗಿದೆ ಎಂದರು. ಎರಡು ವರ್ಷಗಳ ಹಿಂದೆ ಪ್ರಧಾನಿ ಮೋದಿ ಅವರು ಅಯೋಧ್ಯೆಯಲ್ಲಿ ರಾಮಮಂದಿರ ಸ್ಥಾಪಿಸಲು ಶಿಲಾನ್ಯಾಸ ನೆರವೇರಿಸಿದ್ದರು. 2020ರ ಆ.5ರಂದು ರಾಮಮಂದಿರದ ನಿರ್ಮಾಣಕ್ಕೆ ಮೋದಿ ಭೂಮಿಪೂಜೆ ಮಾಡಿದ್ದರು.

## ಮಳೆ ಹಾನಿ: ಸಿಎಂ ಸಭೆ

ಮರುಸ್ಥಾಪಿಸಬೇಕು ಎಂದರು. ಕಾಳಜಿ ಕೇಂದ್ರಗಳಲ್ಲಿರುವವರಿಗೆ ಗುಣಮಟ್ಟದ ಆಹಾರ ಹಾಗೂ ಬಂಧುಗಳ ಮನೆಗೆ ತೆರಳಿರುವವರಿಗೆ ಆಹಾರ ಕಿಟ್‌ಗಳನ್ನು ತಲುಪಿಸುವಂತೆ ಸೂಚನೆ ನೀಡಿದರು. ಸಚಿವರಾದ ಎಸ್.ಟಿ.ಸೋಮಶೇಖರ್, ಡಾ.ಸಿ.ಎನ್.ಅಶ್ವತ್ಥ ನಾರಾಯಣ್, ಉಮೇಶ್ ಕತ್ತಿ ಸಭೆಯಲ್ಲಿ ಪಾಲ್ಗೊಂಡು ತಮ್ಮ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಆಗಿರುವ ಹಾನಿ ಕುರಿತು ವಿವರಿಸಿದರು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಸಿಎಂ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಮತ್ತಿತರರಿದ್ದರು.

## ರಕ್ಷಣಾ ಸಚಿವಾಲಯದಿಂದ ಅನುಮೋದನೆ

ಸೈನಿಕ ಶಾಲೆಯ ವಿಭಾಗಕ್ಕೆ (ಅಂದರೆ 6ನೇ ತರಗತಿಗೆ) ವರ್ಗಾಯಿಸಲಾಗುತ್ತದೆ. ಅವರನ್ನು ಪ್ರವೇಶ ಪರೀಕ್ಷೆ ನಡೆಸಿ ಆಯ್ಕೆ ಮಾಡಲಾಗುತ್ತದೆ. ಒಟ್ಟು 50 ವಿದ್ಯಾರ್ಥಿಗಳು ಸೈನಿಕ ಶಾಲೆ ವಿಭಾಗದಲ್ಲಿ ಅಭ್ಯಾಸ ಮಾಡಲಿದ್ದಾರೆ. ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಭಾಗವಾಗಿ, ದೇಶಪ್ರೇಮದ ಮನೋಭಾವವನ್ನು ಮಕ್ಕಳಿಂದಲೇ ಬೆಳೆಸಬೇಕು ಎನ್ನುವ ಉಪಕ್ರಮದ ಭಾಗವಾಗಿ ಸರ್ಕಾರೇತರ ಶಾಲೆಗಳಲ್ಲೂ ಸೈನಿಕ ಶಾಲೆಯನ್ನು ನಡೆಸಲು ಕೇಂದ್ರ ನಿರ್ಧರಿಸಿದೆ. ಸರಗೂರು ವಿವೇಕ ಶಾಲೆ ಹಾಗೂ ಬೆಳಗಾವಿ ಜಿಲ್ಲೆಯ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯು ಮಾನ್ಯತೆ ಪಡೆದ ರಾಜ್ಯದ ಎರಡು ಶಾಲೆಗಳಾಗಿವೆ.

## ಕೃಷಿ ಭೂಮಿ ಜಲಾವೃತ

ಹಲವು ಬಡಾವಣೆಗಳು ಜಲಾವೃತಗೊಂಡಿದ್ದವು. ಬೋಗಾದಿ ರಸ್ತೆ, ರಿಂಗ್ ರಸ್ತೆಯ ರಸ್ತೆ, ಮರಿಯಪ್ಪನ ಕೆರೆ ರಸ್ತೆ ಜಲಾವೃತಗೊಂಡು ಬೋಗಾದಿ ರಸ್ತೆಯ ತಡೆಗೋಡೆ ಕುಸಿದಿತ್ತು. ಈ ವರ್ಷವೂ ಮಳೆ ಅವಾಂತರ ಮುಂದುವರೆದಿರುವುದರಿಂದ ಸ್ಥಳೀಯರು ಆತಂಕಗೊಂಡಿದ್ದಾರೆ. **ಕೋಳಿ ಫಾರಂಗೆ ನುಗ್ಗಿದ ನೀರು:** ದಿವಾನ್ ಪೂರ್ಣ ರಾಜಕಾಲುವೆ ಒತ್ತುವರಿ ತೆರವುಗೊಳಿಸಲು ರಾಜಕಾರಣಿಗಳು ಇಚ್ಛಾಸಕ್ತಿ ಪ್ರದರ್ಶಿಸದ ಕಾರಣ, ಮಳೆ ನೀರಿನ ಅವಾಂತರ ಸದ್ಯಕ್ಕೆ ಕೊನೆಗೊಳ್ಳುವ ಆಶಾವಾದ ಸ್ಥಳೀಯರಲ್ಲಿಲ್ಲ. ಯಾವುದೇ ಪ್ರಭಾವಕ್ಕೆ ಮಣಿಯದೇ ರಾಜಕಾಲುವೆ ಒತ್ತುವರಿ ತೆರವು ಮಾಡಿ, ಕೆರೆ ಕೋಡಿ ನೀರು ಹಾಗೂ ಮಳೆ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಮಾಡದಿದ್ದರೆ ಮಳೆ ನೀರಿನ ಅವಾಂತರ ಮುಂದುವರೆಯಲಿದೆ. ಕಳೆದ ಎರಡು ದಿನಗಳಿಂದ ಸುರಿದ ಧಾರಕಾರ ಮಳೆಗೆ ಕೆರೆ ಕೋಡಿ ನೀರು ಕೆ.ಹೆಮ್ಮನಹಳ್ಳಿ ಕೋಳಿ ಫಾರಂಗೆ ನುಗ್ಗಿ 70ಕ್ಕೂ ಹೆಚ್ಚು ಕೋಳಿ ಸಾವನ್ನಪ್ಪಿವೆ.

**ಕೆರೆಗಳ ಸಂಪರ್ಕ:** ರಾಜರ ಆಳ್ವಿಕೆಯ ಕಾಲದಲ್ಲಿ ಕೆರೆಯಿಂದ ಕೆರೆಗೆ ನೀರು ಹರಿದು ಹೋಗಲು ರಾಜಕಾಲುವೆ ವ್ಯವಸ್ಥೆ ಮಾಡಲಾಗಿತ್ತು. ಆ ರಾಜಕಾಲುವೆ ಮೂಲಕ ಬೆಳವಾಡಿ ಕೆರೆಯಿಂದ, ಸಾಹುಕಾರಹುಂಡಿ ಕೆರೆ ಹಾಗೂ ಹುಯಿಲಾಳು ಕೆರೆಗೆ ಮಳೆನೀರು ಹರಿಯಬೇಕು. ಆದರೆ ರಾಜಕಾಲುವೆ ಅತಿಕ್ರಮಣವಾಗಿರುವುದರಿಂದ ಕೆರೆ ನೀರು ಹುಯಿಲಾಳು, ಮಾಣಿಕ್ಯಪುರ, ಸಾಹುಕಾರಹುಂಡಿ, ಕೆ.ಹೆಮ್ಮನಹಳ್ಳಿ, ಮೂಗನಹುಂಡಿ ಹಾಗೂ ಬೆಳವಾಡಿ ಕೆರೆಯ ಸುತ್ತಮುತ್ತಲಿನ 200 ಎಕರೆಗೂ ಹೆಚ್ಚು ಕೃಷಿ ಭೂಮಿ, ತೋಟಕ್ಕೆ ನುಗ್ಗಿ ಹಾನಿಯುಂಟು ಮಾಡಿದೆ. ಈ ಭಾಗದಲ್ಲಿ ಪ್ರತಿ ವರ್ಷ ಅತಿವೃಷ್ಟಿಯಿಂದ ಸಮಸ್ಯೆ ಮರುಕಳಿಸುತ್ತಿದ್ದು ಸ್ಥಳೀಯರು ಚಿಂತೆಗೀಡಾಗಿದ್ದಾರೆ. ಒತ್ತುವರಿ ತೆರವು ಮಾಡದಿದ್ದರೆ ಮಳೆ ನೀರಿನ ಸಹಜ ಹರಿವಿಗೆ ಅಡ್ಡಿ ಉಂಟಾಗಿ ಪ್ರವಾಹದ ಸ್ಥಿತಿಗತಿ ಮುಂದುವರೆಯಲಿದೆ. ಬೋಗಾದಿ–ಗದ್ದಿಗೆ ರಸ್ತೆಯಲ್ಲಿರುವ ಬೆಳವಾಡಿ ಕೆರೆ, ಸಾಹುಕಾರಹುಂಡಿ ಕೆರೆ, ಹುಯಿಲಾಳು ಕೆರೆ (ಬೊಮ್ಮನಹಳ್ಳಿ ಕೆರೆ), ದೊಡ್ಡಕೆರೆ, ಚಿಕ್ಕಕೆರೆ, ಹೊಸಕೆರೆ ಮತ್ತು ಮೂಗನಹುಂಡಿ ಕೆರೆ, ಮರಿಯಪ್ಪನ ಕೆರೆ ಸೇರಿದಂತೆ ಸುತ್ತಮುತ್ತ ಇರುವ ಕೆರೆಗಳ ಕೋಡಿ ನೀರು ಸರಾಗ ಹರಿದು ಹೋಗಲು ಕ್ರಮ ಕೈಗೊಳ್ಳಲಿದ್ದರೆ ಮುಂದಿನ ದಿನಗಳಲ್ಲಿ ಭಾರಿ ಮಳೆ ಬಂದರೆ ಭಾರಿ ಪ್ರಮಾಣದ ಅನಾಹುತಕ್ಕೆ ಎಡೆಮಾಡಿಕೊಡಲಿದ್ದು, ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದಾರೆ.

**ತುರ್ತಾಗಿ ತೆರವು ಅಗತ್ಯ:** ರಾಜ ಕಾಲುವೆ ಅತಿಕ್ರಮಣ ತೆರವು ಮಾಡುವುದು ಅನಿವಾರ್ಯವಾಗಿದೆ. ರಾಜಕಾಲುವೆ ಜಾಗದಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಲೇಬೇಕಾಗಿದೆ. ಆಗ ಮಾತ್ರ ಮಳೆ ನೀರು ದಿಕ್ಕು ಬದಲಿಸದೇ ಸರಾಗವಾಗಿ ಹರಿಯಲಿದೆ. ಬೋಗಾದಿ ಸುತ್ತಮುತ್ತಲಿನ ಎಲ್ಲ ಕೆರೆಗಳ ನೀರು ಲಿಂಗಾಬುಧಿ ಕೆರೆಗೆ ಹರಿಯುತ್ತದೆ. ಇನ್ನಾದರೂ ರಾಜಕಾಲುವೆ ಒತ್ತುವರಿ ತೆರವುಗೊಳಿಸದಿದ್ದರೆ, ಬೋಗಾದಿ, ಶಾರದಾದೇವಿನಗರ, ಜನತಾನಗರ, ರಾಮಕೃಷ್ಣನಗರ ಸೇರಿದಂತೆ ಇನ್ನಿತರ ಬಡಾವಣೆಗಳಿಗೆ ನುಗ್ಗಲಿದೆ. ಇದರಿಂದ ಮತ್ತಷ್ಟು ಅನಾಹುತ ಸಂಭವಿಸುವುದು ಕಟ್ಟಿಟ್ಟಬುತ್ತಿ. ಹಾಗಾಗಿ ರಾಜಕಾಲುವೆ ಒತ್ತುವರಿ ತೆರವು ತುರ್ತಾಗಿ ಮಾಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

**ತಾತ್ಕಾಲಿಕ ಕ್ರಮ:** ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಿ.ಶ್ಯಾಮ್ ಸುಂದರ್ 'ಮೈಸೂರು ಮಿತ್ರ' ಮಾತನಾಡಿ, ಬೋಗಾದಿ ಸುತ್ತಮುತ್ತಲಿನ ಕೆರೆಗಳ ಕೋಡಿ ನೀರು ಸರಾಗವಾಗಿ ಹರಿಯಲು ರಾಜಕಾಲುವೆಯಲ್ಲಿ ಜೆಸಿಬಿ ಯಂತ್ರದ ಮೂಲಕ ಹೂಳೆತ್ತಿ ತಾತ್ಕಾಲಿಕವಾಗಿ ವಸತಿ ಪ್ರದೇಶ, ಭೂಮಿ, ತೋಟಕ್ಕೆ ನುಗ್ಗಿರುವ ಮಳೆ ನೀರು ಹರಿದು ಹೋಗುವಂತೆ ಕ್ರಮ ಕೈಗೊಳ್ಳಲಾಗಿದೆ. ಮುಂಬರುವ ದಿನಗಳಲ್ಲಿ ಇಂತಹ ಅನಾಹುತ ಮರುಕಳಿಸದಂತೆ ಯಾವ ಕ್ರಮ ಕೈಗೊಳ್ಳುತ್ತೇವೆ. ಅಲ್ಲದೇ, ಮಳೆ ಮುಂದುವರೆದು ನೀರಿನ ಪ್ರಮಾಣ ಹೆಚ್ಚಾದರೆ ಜಲಾವೃತವಾಗಿರುವ ಪ್ರದೇಶಗಳಿಗೆ ತೆರಳಿ ಅಲ್ಲಿನ ನಿವಾಸಿಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

## ಉನ್ನತ ಸಮಿತಿ ರಚನೆ ಅಗತ್ಯ

ಬಡಾವಣೆಗಳು ನಿರ್ಮಾಣವಾಗಿವೆ. ವಿವಿದ ಕಾರಣದಿಂದ ರಾಜಕಾಲುವೆಯನ್ನು ಮುಚ್ಚಲಾಗಿದೆ. ಅಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಗೊತ್ತಿದ್ದರೂ ರಾಜಕಾಲುವೆ ಒತ್ತುವರಿಗೆ ವಿರೋಧಿಸದೆ ಸುಮ್ಮನ್ನಿದ್ದಾರೆ ಎಂದು ಅಸಮಾದಾನ ವ್ಯಕ್ತಪಡಿಸಿದರು.

ದಿವಾನ್ ಪೂರ್ಣಯ್ಯ ಕಾಲುವೆಯ ಅತಿಕ್ರಮಣವನ್ನು ಪರಿಶೀಲಿಸಲು ಮತ್ತು ಅವುಗಳನ್ನು ವ್ಯವಸ್ಥಿತವಾಗಿ ತೆರವುಗೊಳಿಸಲು ಉನ್ನತ ಅಧಿಕಾರ ಮತ್ತು ಉನ್ನತ ಮಟ್ಟದ ಸಮಿತಿಯನ್ನು ರಚಿಸಲೇಬೇಕಾಗಿದೆ. ಈ ಸಮಿತಿ ರಚಿಸದ ಹೊರತು ಅತಿಕ್ರಮಣ ತೆರವು ಸಾಧ್ಯವಿಲ್ಲ. ಯಾಕೆಂದರೆ ಒತ್ತುವರಿ ಮಾಡಿಕೊಂಡಿರುವವರು ಪ್ರಭಾವಶಾಲಿಗಳಾಗಿದ್ದಾರೆ. ಇಲ್ಲದಿದ್ದರೆ ಮೈಸೂರಿನ ಕೆರೆಗಳಿಗೆ ಭವಿಷ್ಯವಿಲ್ಲ ಎಂಬಂತಾಗುತ್ತದೆ. ರಾಜಕಾಲುವೆ ಮುಚ್ಚಲ್ಪಟ್ಟಿರುವುದರಿಂದ ಶುದ್ಧ ಮಳೆ ನೀರು ಬರದ ಕುಕ್ಕರಹಳ್ಳಿ ಕೆರೆಯು ಅರ್ಧ ಸತ್ತಂದಾಗಿದೆ. ಇನ್ನು ಬೇರೆ ಕೆರೆಗಳಿಗೆ ನೀರು ಹರಿಯುವುದಕ್ಕೆ ಅವಕಾಶ ಮಾಡಿಕೊಡದಿದ್ದರೆ ಇನ್ನಷ್ಟು ಕೆರೆಗಳು ನಶಿಸುತ್ತವೆ ಎಂದರು. ಈ ಹಿಂದೆ ಮೈಸೂರಿನ ಜಿಲ್ಲಾಧಿಕಾರಿ ಟಿ.ಎಂ.ವಿಜಯ್ ಭಾಸ್ಕರ್ ಅವರು ಅತಿಕ್ರಮಣ ತೆರವುಗೊಳಿಸಲು ಯತ್ನಿಸಿದ್ದರು. ಅಲ್ಲದೆ ಅತಿಕ್ರಮಣ ತೆರವಿನ ಕಾರ್ಯಾಚರಣೆಯಲ್ಲಿ ಒಂದು ರೀತಿಯಲ್ಲಿ ಯಶಸ್ವಿಯಾಗಿದ್ದರು. ಆದರೆ ಅವರನ್ನು ಪಟ್ಟಭದ್ರ ಹಿತಾಸಕ್ತಿಗಳು ವರ್ಗಾವಣೆ ಮಾಡಿಸಿದರು. ಪ್ರವಾಹ ಬಂದಾಗಲೆಲ್ಲಾ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಫೋಟೋಗಳಿಗೆ ಪೋಸ್ ನೀಡಿ ನಿವಾಸಿಗಳಿಗೆ ಸಹಾಯ ಮಾಡುತ್ತಾರೆ. ಆದರೆ, ಮಳೆ ಬಂದ ನಂತರ ಇದನ್ನೆಲ್ಲ ಮರೆತು ಬಿಡುತ್ತಾರೆ ಎಂದು ವಿಷಾದ ವ್ಯಕ್ತಪಡಿಸಿದರು.

# ಮಧುಮೇಹಕ್ಕೆ ಆಯುರ್ವೇದ ಚಿಕಿತ್ಸಾ ವಿಧಾನ ಪರಿಣಾಮಕಾರಿ; ಮೈಸೂರಲ್ಲಿ ಪ್ರಾಯೋಗಿಕ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧಾರ

### ಶಾಸಕ ಎಸ್.ಎ.ರಾಮದಾಸ್ ಸಲಹೆಗೆ ಆಯುರ್ವೇದ ಸಂಸ್ಥೆಗಳ ಸಮ್ಮತಿ

ಮೈಸೂರು,ಆ.28(ಪಿಎಂ)– ಮಧುಮೇಹಕ್ಕೆ ಆಯುರ್ವೇದ ಚಿಕಿತ್ಸಾ ವಿಧಾನ ಪರಿಣಾಮಕಾರಿ ಎಂದು ಸಾಬೀತುಪಡಿಸುವ ನಿಟ್ಟಿನಲ್ಲಿ ಮೈಸೂರಿನಲ್ಲಿ ಪ್ರಾಯೋಗಿಕ ಯೋಜನೆ ಕೈಗೆತ್ತಿಕೊಳ್ಳುವಂತೆ ಮಾಜಿ ಸಚಿವರೂ ಆದ ಶಾಸಕ ಎಸ್.ಎ.ರಾಮದಾಸ್ ನೀಡಿದ ಸಲಹೆಗೆ ಆಯುರ್ವೇದ ಸಂಸ್ಥೆ ಪ್ರತಿನಿಧಿಗಳು ಸಮ್ಮತಿಸಿದರು.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತಪೀಠದ ಶ್ರೀಗಣಪತಿ ಸಚ್ಚಿದಾನಂದ ಆಶ್ರಮದ ಲಕ್ಷ್ಮಿನರಸಿಂಹ ಕುಟೀರ ಸಭಾಂಗಣದಲ್ಲಿ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮತ್ತು ಬೆಂಗಳೂರು ಚಾಮರಾಜಪೇಟೆಯ ಆಯುರ್ವೇದ ಅಕಾಡೆಮಿ ಹಾಗೂ ಆಶ್ರಮದ ಸಂಯುಕ್ತಾಶ್ರಯದಲ್ಲಿ 'ಬನ್ನಿ ಮಧುಮೇಹ ಗೆಲ್ಲೋಣ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಆಯುರ್ವೇದ ವೈದ್ಯ ಪದ್ಧತಿಯಡಿಯ ಉಚಿತ ಮಧುಮೇಹ ಚಿಕಿತ್ಸಾ ಶಿಬಿರ ಉದ್ಘಾಟಿಸಿದ ಎಸ್.ಎ.ರಾಮದಾಸ್, ಆಯುರ್ವೇದ ಚಿಕಿತ್ಸೆ ಮೂಲಕ ಮಧುಮೇಹ ನಿಯಂತ್ರಣ ಹಾಗೂ ತಡೆಗಟ್ಟುವಿಕೆ ಸಾಧ್ಯವಿರುವ ಬಗ್ಗೆ ಸಾಬೀತುಪಡಿಸಲು ಪೈಲಟ್ ಯೋಜನೆಯೊಂದನ್ನು ಕೈಗೊಳ್ಳುವಂತೆ ಪ್ರಸ್ತಾಪಿಸಿದರು.

ಪೈಲಟ್ (ಪ್ರಾಯೋಗಿಕ) ಯೋಜನೆಯಾಗಿ ಮೈಸೂರಿನ ಒಂದು ವಾರ್ಡ್‌ನಲ್ಲಿ ಅನುಷ್ಠಾನಕ್ಕೆ ಸಿದ್ಧವಿದ್ದರೆ, ಅಗತ್ಯ ವ್ಯವಸ್ಥೆಗಳನ್ನು ಆಯುಷ್ ಇಲಾಖೆ ಸೇರಿದಂತೆ ಸರ್ಕಾರದ ಮೂಲಕ ಕೊಡಿಸಲಾಗುವುದು. ಆ ಮೂಲಕ ವರ್ಷದಲ್ಲಿ ಉತ್ತಮ ಫಲಿತಾಂಶ ಕೊಡುವ ನಿಟ್ಟಿನಲ್ಲಿ ಮುಂದುವರೆಯಬೇಕಾಗುತ್ತದೆ. ಮುಂದಿನ ತಿಂಗಳು ಸೆ.17ರಂದು ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನವಾಗಿದ್ದು, ಅಂದಿನಿಂದ ಮುಂದಿನ ವರ್ಷದ ಮೋದಿಯವರ ಜನ್ಮದಿನದವರೆಗೆ ಈ ಯೋಜನೆ ಅನುಷ್ಠಾನಗೊಳಿಸಬಹುದು ಎಂದು ರಾಮದಾಸ್ ಅಭಿಪ್ರಾಯಪಟ್ಟರು.

ಈ ಒಂದು ವರ್ಷದ ಅವಧಿಯಲ್ಲಿ ಉದ್ದೇಶಿತ ವಾರ್ಡ್‌ನಲ್ಲಿ ತಪಾಸಣೆ ಮತ್ತು ಚಿಕಿತ್ಸೆ ಮೂಲಕ ಮಧುಮೇಹ ಇದ್ದವರು ನಿಯಂತ್ರಣಕ್ಕೆ ಬರದೆ, ಇದಕ್ಕೆ ತುತ್ತಾಗುವ ಹಂತದಲ್ಲಿದ್ದರು. ಅದರಿಂದ ಮುಕ್ತರಾದರು ಎಂಬ ಫಲಿತಾಂಶ ಬಂದಲ್ಲಿ ಆಯುರ್ವೇದದ ಬಗ್ಗೆ ವಿಶ್ವಾಸ ಮೂಡಲಿದೆ. ಇದರಲ್ಲಿ ಸಫಲತೆಯಾದರೆ ಮೈಸೂರಿನಿಂದ ಒಂದು



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಲಕ್ಷ್ಮಿನರಸಿಂಹ ಕುಟೀರ ಸಭಾಂಗಣದಲ್ಲಿ ಭಾನುವಾರ ಮಧುಮೇಹಕ್ಕೆ ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ದೊಡ್ಡ ಸಾಧನೆ ಸಾಧ್ಯವಾಗಲಿದೆ ಎಂದು ಹೇಳಿದರು.

ರಾಮದಾಸ್ ಅವರ ಈ ಪ್ರಸ್ತಾಪಕ್ಕೆ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ ಹಾಗೂ ಆಯುರ್ವೇದ ಅಕಾಡೆಮಿ ಜಂಟಿ ಕಾರ್ಯದರ್ಶಿ ಡಾ.ಪ್ರಶಾಂತ್ ಗೋಖಲೆ ಸಮ್ಮತಿಸಿ ಇದರಲ್ಲಿ ತೊಡಗಿಸಿಕೊಳ್ಳಲು ಸಿದ್ಧವಿರುವುದಾಗಿ ಪ್ರಕಟಿಸಿದರು.

ಮುಂದುವರೆದು ಮಾತನಾಡಿದ ಎಸ್.ಎ.ರಾಮದಾಸ್, ಇಡೀ ದೇಶದಲ್ಲಿ ಒಂದು ಗಂಭೀರ ಸಮಸ್ಯೆ ಎಂಬ ಭಾವನೆಯಿರುವ ಮಧುಮೇಹಕ್ಕೆ ಆಯುರ್ವೇದ ಚಿಕಿತ್ಸೆ ನೀಡುವ ವಿಶೇಷ ಶಿಬಿರ ಇದು. ಭಾರತೀಯ ವೈದ್ಯ ಪದ್ಧತಿ ಸಾವಿರಾರು ವರ್ಷಗಳ ಪರಂಪರೆ ಹೊಂದಿದ್ದು, ಇದು ಇಡೀ ವಿಶ್ವಕ್ಕೆ ಆರೋಗ್ಯ ಕಾಪಾಡಿಕೊಳ್ಳುವ ಅಂಶಗಳನ್ನು ನೀಡಿದೆ. ಇದು ನಮ್ಮ ಹೆಮ್ಮೆ. ಆದರೆ ಅದನ್ನು ಬೆಳೆಸಿ ಅದರ ಬಗ್ಗೆ ವಿಶ್ವಾಸ ಮೂಡಿಸುವ ಜವಾಬ್ದಾರಿ ಆಯುರ್ವೇದ ಕ್ಷೇತ್ರದ ವೈದ್ಯರು ಹಾಗೂ ಸಂಶೋಧಕರ ಮೇಲಿದೆ. ನಮ್ಮ ವೈದ್ಯ ಪದ್ಧತಿಯಲ್ಲಿರುವ ಒಳ್ಳೆಯ ಅಂಶಗಳನ್ನು ಗುರುತಿಸಿ ಅದರ ಪ್ರಯೋಜನ ಪಡೆದುಕೊಳ್ಳಬೇಕಿದೆ ಎಂದು ತಿಳಿಸಿದರು.

ಬ್ರಿಟಿಷರ ಆಳ್ವಿಕೆಯಲ್ಲಿ ನಮ್ಮ ಸ್ಥಳೀಯ ಭಾಷೆಗಳಿಗೆ ಹಿನ್ನಡೆ ಉಂಟು ಮಾಡಿ ಇಂಗ್ಲಿಷ್ ಭಾಷೆಯನ್ನು ಮುನ್ನೆಲೆಗೆ ತರಲಾಯಿತು. ಅಲ್ಲದೆ, ನಮ್ಮ ಸಂಸ್ಕೃತಿಗೆ ಪ್ರತಿಯಾಗಿ ಪಾಶ್ಚಿಮಾತ್ಯ ಸಂಸ್ಕೃತಿ ಮುನ್ನೆಲೆಗೆ ತಂದರು. ಅದೇ ರೀತಿಯಲ್ಲಿ ನಮ್ಮ ವೈದ್ಯ ಪದ್ಧತಿಗೆ ಹಿನ್ನಡೆ ಉಂಟಾಗುವಂತೆ ಮಾಡಿ ಅವರ ವೈದ್ಯ ಪದ್ಧತಿ ಮುನ್ನೆಲೆಗೆ ತರುವಲ್ಲಿ ಬ್ರಿಟಿಷರು ಯಶಸ್ವಿಯಾದರು. ಇದೀಗ ಭಾರತೀಯ ವೈದ್ಯ ಪದ್ಧತಿಯಾದ ಆಯುರ್ವೇದದತ್ತ ನಮ್ಮ ಜನ ಮುಖ ಮಾಡುವ ಸಂದರ್ಭ ನಿಧಾನವಾಗಿ ಬರುತ್ತಿದೆ. ಆಯುರ್ವೇದದ ವೈದ್ಯರು ಮತ್ತು ವಿಜ್ಞಾನಿಗಳು ಈ ಸಂದರ್ಭದಲ್ಲಿ ಮಹತ್ತರ ಜವಾಬ್ದಾರಿ ನಿಭಾಯಿಸಬೇಕಿದೆ ಎಂದರು.

**ವೈದ್ಯರ ಹಿಂದೇಟು:** ಕೋವಿಡ್ ಸಂದರ್ಭದಲ್ಲಿ ದೇಶದಲ್ಲೇ ಮೊದಲ ಬಾರಿಗೆ ಮೈಸೂರಿನಲ್ಲಿ 12 ಮಂದಿ ಆಯುರ್ವೇದ ವೈದ್ಯರನ್ನು ಆಹ್ವಾನಿಸಿ ಔಷಧವಿಲ್ಲದ ಸೋಂಕಿಗೆ ಆಯುರ್ವೇದದಲ್ಲಿ ಪರಿಹಾರ ಹುಡುಕುವ ನಿಟ್ಟಿನಲ್ಲಿ ಪ್ರಯತ್ನ ನಡೆಯಿತು. ರೋಗ ನಿರೋಧಕ ಶಕ್ತಿ ವೃದ್ಧಿಸುವಂತೆ ಮಾಡಿದರೆ ಈ ಸೋಂಕು ನಿಯಂತ್ರಿಸುವ ಜೊತೆಗೆ ಬಾರದಂತೆ ತಡೆಯಬಹುದು ಎಂಬ ಅಂಶ ಕಂಡುಕೊಳ್ಳಲಾಯಿತು. ಆದರೆ ಸೋಂಕಿತರ ತಪಾಸಣೆ ಮತ್ತು ಚಿಕಿತ್ಸೆಗೆ ನಮ್ಮ ವೈದ್ಯರೇ ಹಿಂದೇಟು ಹಾಕಿದರು ಎಂದು ವಿಷಾದಿಸಿದರು.

ಇಂದು ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂದರ್ಭದಲ್ಲಿ ನಾವಿದ್ದೇವೆ. ಇನ್ನು 25 ವರ್ಷಗಳ ಬಳಿಕ ಸ್ವಾತಂತ್ರ್ಯ ಶತಮಾನೋತ್ಸವ ಬರಲಿದೆ. ಯುವ ಜನತೆ ಈ ಶತಮಾನೋತ್ಸವಕ್ಕೆ ದೇಶದ ಸದೃಢತೆಗೆ ಬೇಕಿರುವ ವ್ಯವಸ್ಥೆಗಳನ್ನು ಜೋಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ತಮ್ಮ ತಮ್ಮ ಕ್ಷೇತ್ರದಲ್ಲಿ ಪರಿಣಿತಿ ಸಾಧಿಸಿ ನಮ್ಮ ದೇಶಕ್ಕೆ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.

25 ಮಂದಿ ಆಯುರ್ವೇದ ವೈದ್ಯರ ತಂಡ ತಪಾಸಣೆ ನಡೆಸಿ, ಔಷಧ ವಿತರಿಸಿದರು. ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್, ಆದಿಚುಂಚನಗಿರಿ ವಿವಿ ಕುಲಪತಿ ಡಾ.ಎಂ. ಎ.ಶೇಖರ್, ಹಿರಿಯ ವೈದ್ಯರಾದ ಡಾ.ಗುರು ಬಸವರಾಜು, ಡಾ.ಎನ್. ಆಂಜನೇಯಮೂರ್ತಿ, ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮತ್ತಿತರರು ಹಾಜರಿದ್ದರು.

> ❝ ಇಂತಹ ಶಿಬಿರಗಳು ಮುಂದಾಗುವ ಅನಾಹುತಗಳನ್ನು ತಡೆಯುವಲ್ಲಿ ಮಹತ್ವದ ಪಾತ್ರ ವಹಿಸಲಿವೆ. ಅಲ್ಲದೆ, ಕಿರಿಯ ವೈದ್ಯರಿಗೆ ಮತ್ತಷ್ಟು ಜ್ಞಾನ ಸಂಪಾದಿಸಲು ನೆರವಾಗಲಿವೆ. ಆಯುರ್ವೇದ ಚಿಕಿತ್ಸಾ ವಿಧಾನ ಬಳಕೆ ಮಾಡಿಕೊಳ್ಳುವ ಜೊತೆಗೆ ಯೋಗಾಭ್ಯಾಸ ರೂಢಿಸಿಕೊಳ್ಳಬೇಕು. ಇದರೊಂದಿಗೆ ಒಳ್ಳೆಯ ಆಲೋಚನೆ ಮಾಡಬೇಕು. ಆಗ ಜೀವನ ಸುಖ–ಶಾಂತಿ ಮತ್ತು ನೆಮ್ಮದಿಯಿಂದ ಕೂಡಿರುತ್ತದೆ.
> -ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ

## ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿ ಸಂಭ್ರಮ



ಮೈಸೂರು, ಆ.28(ಎಂಕೆ)– ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಪೋಷಕರು, ಮಟಾಣಿಗಳು ವಿಘ್ನ ನಿವಾರಕ 'ವಿನಾಯಕನ ವಿಗ್ರಹ ತಯಾರಿಸಿ' ಸಂಭ್ರಮಿಸಿದರು.

ಮೈಸೂರು ಗಣೇಶ ಉತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಪರಿಸರ ಸ್ನೇಹಿ ಗಣಪತಿ ತಯಾರಿಕೆ ಶಿಬಿರದಲ್ಲಿ ಭಾಗವಹಿಸಿದ ನೂರಾರು ಮಂದಿ ಮಣ್ಣಿನಲ್ಲಿ ಗಣೇಶನ ವಿಗ್ರಹ ತಯಾರಿಸಿ ಪರಿಸರ ಕಾಳಜಿ ಮೆರೆದರಲ್ಲದೆ ತಾವೇ ರೂಪಿಸಿದ ವಿಗ್ರಹವನ್ನು ಗೌರಿ–ಗಣೇಶ ಹಬ್ಬದಂದು ಪ್ರತಿಷ್ಠಾಪಿಸಲು ಕೊಂಡೊಯ್ದರು.

ಈ ವೇಳೆ ತರಬೇತಿ ಶಿಬಿರಕ್ಕೆ ಚಾಲನೆ ನೀಡಿದ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಮಾತನಾಡಿ, ಇತ್ತೀಚೆಗೆ ಜನರಲ್ಲಿ ಪರಿಸರ ಕಾಳಜಿ ಮೂಡುತ್ತಿರುವುದು ಸಂತೋಷದ ವಿಷಯ. ಆದರೆ ಪರಿಸರ ಕಾಳಜಿ ಕೇವಲ ಹಬ್ಬಕ್ಕೆ ಮಾತ್ರ ಸೀಮಿತವಾಗಿರದೆ ನಮ್ಮ ಪ್ರತಿಯೊಂದು ನಡೆ–ನುಡಿಯೂ ಪರಿಸರ ಸ್ನೇಹಿಯಾಗಿರಬೇಕು ಎಂದು ತಿಳಿಸಿದರು.

ಪರಿಸರ ಕಾಳಜಿ ಬಗ್ಗೆ ಮಕ್ಕಳಿಗೆ ತಿಳಿಸುವುದು ಅತ್ಯಂತ ಅವಶ್ಯವಾಗಿದೆ. ಮಕ್ಕಳು ತಯಾರಿಸಿದ ಗಣಪತಿಯನ್ನು ಮನೆಗಳಲ್ಲಿ ಹಬ್ಬದಂದು ಪೂಜೆ ಮಾಡಿ ನಂತರ ಅದೇ ಮಣ್ಣಿನಲ್ಲಿ ಒಂದು ಗಿಡವನ್ನು ನೆಟ್ಟು ಬೆಳೆಸಿದರೆ ಪರಿಸರದ ಉಳಿವಿಗೆ ಅಲ್ಪ ಸೇವೆ ಮಾಡಿದಂತಾಗುತ್ತದೆ. ಮನುಷ್ಯ ಪ್ರಕೃತಿ ವಿರುದ್ಧವಾಗಿ ಏನೇ ಮಾಡಿದರೂ ಅದು ನಷ್ಟವೇ ಆಗೋದು. ಹಾಗಾಗಿ ಪ್ರಕೃತಿಗೆ ಪೂರಕವಾಗಿ ಸಾಗುವುದು ಉತ್ತಮವಾದ ಕೆಲಸ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಜಿ.ಹೇಮಂತ್‌ಕುಮಾರ್ ಮಾತನಾಡಿ, ಹಿಂದೂಗಳ ಹಬ್ಬ ಎಂದರೆ ಅದು ನಮ್ಮ ಸಂಸ್ಕೃತಿಯನ್ನು ಕಾಪಾಡುವಂತಹದ್ದು, ಪ್ರಮುಖವಾಗಿ ಗೌರಿ–ಗಣೇಶ ಹಬ್ಬ ಎಂದರೆ ಮಕ್ಕಳಿಗೆ ವಿಶೇಷವಾಗಿರುತ್ತದೆ. ಮಕ್ಕಳು ಪರಿಸರವನ್ನು ಕಾಪಾಡಲು ತಾವೇ ಮಣ್ಣಿನಿಂದ ಗಣಪತಿಯನ್ನು ತಯಾರಿಕೆ ಮಾಡುತ್ತಿರುವುದು ಶ್ಲಾಘನೀಯವಾದದ್ದು ಎಂದು ಹೇಳಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ವದೇಶಿ ಜಾಗರಣ್ ಮಂಚ್‌ನ ಅಧ್ಯಕ್ಷ ಎನ್.ಆರ್.ಮಂಜುನಾಥ್, ಲೋಹಿತ್ ಅರಸ್, ರಾಕೇಶ್ ಮತ್ತಿತರರಿದ್ದರು.



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ದಕ್ಷಿಣ ವಲಯ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಸಿಕೆಸಿ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿಯರಾದ ಚೆರೆಣು ಲಾಂಗ್‌ಜಂಪ್‌ನಲ್ಲಿ ತೃತೀಯ, ಬಿ.ಸುದಿತಾ ಡಿಸ್ಕಸ್ ಥ್ರೋನಲ್ಲಿ ತೃತೀಯ, ಕುಸ್ತಿ ಪಂದ್ಯಾವಳಿಯ 38 ಕೆ.ಜಿ. ವಿಭಾಗದಲ್ಲಿ ಎಲ್.ಕೆ.ವೇದಾವತಿ ತೃತೀಯ, 45 ಕೆಜಿ. ವಿಭಾಗದಲ್ಲಿ ಪಿ.ಮುಷ್ಠಾಂಜಲಿ ತೃತೀಯ ಸ್ಥಾನ ಪಡೆದಿದ್ದು 49 ಕೆ.ಜಿ. ವಿಭಾಗದಲ್ಲಿ ಉಷಾ, 61 ಕೆಜಿ ವಿಭಾಗದಲ್ಲಿ ಎಂ.ಲಿಪಿಕಾ, ಚೈತನ್ಯ ಬಹುಮಾನಗಳಿಸಿದ್ದಾರೆ.

## ಗುಣಮಟ್ಟದ ಆಹಾರ ನೀಡದಿದ್ದರೆ ನಿರ್ದಾಕ್ಷಿಣ್ಯ ಕ್ರಮ



ಮೈಸೂರು, ಆ.28– ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಗುಣಮಟ್ಟದ ಆಹಾರ ನೀಡುವುದರ ಜೊತೆಗೆ ಶುಚಿತ್ವವನ್ನು ಕಾಪಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ನಿಲಯಪಾಲಕರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನೂತನ ಜಿಲ್ಲಾ ಅಧಿಕಾರಿ ಜಿ.ಆರ್.ಮಹೇಶ್ ಎಚ್ಚರಿಕೆ ನೀಡಿದರು.

ಕುವೆಂಪುನಗರದ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯದಲ್ಲಿ ತಾಲೂಕು ಕಲ್ಯಾಣಾಧಿಕಾರಿಗಳು, ವಿಸ್ತರಣಾಧಿಕಾರಿಗಳು ಹಾಗೂ ಮೈಸೂರು ತಾಲೂಕು ನಿಲಯ ಪಾಲಕರ ಸಭೆಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ನಮ್ಮ ಇಲಾಖೆಗೆ ಒಳ್ಳೆಯ ಹೆಸರಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ನಿಮ್ಮೆಲ್ಲರ ಸಹಕಾರಬೇಕು. ಹಾಸ್ಟೆಲ್‌ಗಳ ನಿರ್ವಹಣೆ ಬಹಳ ಮುಖ್ಯವಾಗಿದ್ದು, ಇಲಾಖೆಯ ನಿಯಮದಂತೆ ಬಯೋಮೆಟ್ರಿಕ್ ನೋಂದಣಿ ಕಡ್ಡಾಯವಾಗಿರಬೇಕು. ವಿದ್ಯಾರ್ಥಿನಿಲಯಕ್ಕೆ ಸಂಬಂಧಿಸಿದಂತೆ ಸ್ಟಾಕ್ ರಿಜಿಸ್ಟರ್ ಸೇರಿದಂತೆ ಎಲ್ಲಾ ಮಾಹಿತಿಯನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ರಿಜಿಸ್ಟರ್ ಬುಕ್‌ಗಳನ್ನು ಕಚೇರಿಯಲ್ಲಿ ನಿರ್ವಹಣೆ ಮಾಡದೆ ಮನೆಗೆ ತೆಗೆದುಕೊಂಡು ಹೋಗಿ ನಿರ್ವಹಣೆ ಮಾಡಿದರೆ ಸೂಕ್ತ ಕ್ರಮ ಕೈಗೊಂಡು ನೋಟೀಸ್ ನೀಡಲಾಗುವುದು ಎಂದು ತಿಳಿಸಿದರು. ಈ ಹಿಂದೆ ಜಿಲ್ಲಾ ಅಧಿಕಾರಿಯಾಗಿದ್ದ ಹೆಚ್.ಎಸ್. ಬಿಂದ್ಯಾರವರು ವರ್ಗಾವಣೆಯಾದ ಹಿನ್ನೆಲೆಯಲ್ಲಿ ಜಿ.ಆರ್. ಮಹೇಶ್ ನೂತನ ಜಿಲ್ಲಾ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡರು.

ಸಭೆಯಲ್ಲಿ ತಾಲೂಕು ಕಲ್ಯಾಣಾಧಿಕಾರಿಗಳಾದ ಚಂದ್ರಕಲಾ, ವಿಶ್ವನಾಥ್, ಸುಚೇಂದ್ರ ಕುಮಾರ್, ಸ್ವರ್ಣಲತಾ, ಶಶಿಕಲಾ ಮಹೇಶ್, ಪ್ರೇಮಕುಮಾರ್, ವಿಸ್ತರಣಾಧಿಕಾರಿಗಳಾದ ಸತೀಶ್, ರಾಜಣ್ಣ, ಸುಕನ್ಯಾ, ನಿಲಯ ಪಾಲಕರಾದ ವೀರಬಸಪ್ಪ ಸ್ವಾಗತಿಸಿದರು. ಪರಶುರಾಂ ವಂದಿಸಿದರು. ಜಗದೀಶ್ ಚಿಕ್ಕವಡ್ಡಗಲ್, ಯಶವಂತ್, ತಾಲೂಕಿನ ಎಲ್ಲಾ ನಿಲಯಪಾಲಕರು ಹಾಜರಿದ್ದರು.

# ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ನೂತನ ಕಟ್ಟಡ ಉದ್ಘಾಟನೆ

### ಸಹಕಾರ ಸಂಘಗಳು ತಮ್ಮ ಇತಿಮಿತಿಯೊಳಗೆ ಯಶಸ್ಸು ಸಾಧಿಸಿವೆ: ಹೆಚ್.ವಿ.ರಾಜೀವ್

ಮೈಸೂರು, ಆ. 28 (ಆರ್‌ಕೆಬಿ)– ಮೈಸೂರಿನ ಬಹುತೇಕ ಸಹಕಾರ ಸಂಘಗಳು ಉತ್ತಮ ಸೇವೆ ಸಲ್ಲಿಸುತ್ತಾ ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿವೆ ಎಂದು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರೂ ಆಗಿರುವ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದರು.

ಮೈಸೂರಿನ ವಿಜಯನಗರ 4ನೇ ಹಂತದ 2ನೇ ಫೇಸ್‌ನಲ್ಲಿ ನೂತನವಾಗಿ ನಿರ್ಮಿಸಿರುವ ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು. ಆಧುನಿಕ ದಿನಮಾನದ ಸವಾಲುಗಳನ್ನು ಎದುರಿಸಲು ಸಹಕಾರ ಸಂಘಗಳು ದೂರದೃಷ್ಟಿ ಮತ್ತು ಯೋಜನೆಗಳನ್ನು ಹೊಂದಿರಬೇಕು. ಆ ನಿಟ್ಟಿನಲ್ಲಿ ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಅಂಡ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಉತ್ತಮ ಸೇವೆ ಸಲ್ಲಿಸುತ್ತಿದೆ ಎಂದರು.

1983 ರಲ್ಲಿ ಚಾಮರಾಜ ಮೊಹಲ್ಲಾದ ಡಿ.ಸುಬ್ಬಯ್ಯ ರಸ್ತೆಯಲ್ಲಿ ದೂರದೃಷ್ಟಿಯೊಂದಿಗೆ ಸ್ಥಾಪನೆಯಾದ ಈ ಸಂಘವು ಹೌಸ್ ಮಾರ್ಟ್‌ಗೇಜ್‌ನ ರಾಜ್ಯದ ಏಕೈಕ ಸಹಕಾರ ಸಂಸ್ಥೆಯಾಗಿದೆ. ಸಂಘದ ಉದ್ದೇಶಗಳು ಮತ್ತು ಅದನ್ನು ಸ್ಥಾಪಿಸಿದ ಉದ್ದೇಶ ನಿಜಕ್ಕೂ ಯಶಸ್ವಿಯಾಗಿದೆ ಎಂದು ಹೇಳಿದರು.

ಸಂಘದ ಸದಸ್ಯರಿಗೆ ದೀರ್ಘಾವಧಿಯಲ್ಲಿ ಹೆಚ್ಚಿನ ಪ್ರಯೋಜನ ತರುವ ವಿನೂತನ ಯೋಜನೆಗಳನ್ನು ಹೊಂದಿರುವ ಸಂಘವನ್ನು ಶ್ಲಾಘಿಸಿದ ಅವರು,



ಮೈಸೂರಿನ ವಿಜಯನಗರ 4ನೇ ಹಂತದ 2ನೇ ಫೇಸ್‌ನಲ್ಲಿ ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು. ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರೂ ಆದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸಂಘದ ಅಧ್ಯಕ್ಷ ಎನ್.ಶಿವಕುಮಾರ್ ಇನ್ನಿತರರನ್ನು ಕಾಣಬಹುದು.

ಮುಂದಿನ ದಿನಗಳಲ್ಲಿ ಏನು ಬೇಕೋ ಅದನ್ನು ಇಂದೇ ಮಾಡುತ್ತಾ ಬಂದಿದೆ. ಇದು ಎಲ್ಲಾ ಸಹಕಾರ ಸಂಘಗಳಿಗೆ ಮಾದರಿಯಾಗಿದೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಂಡರು. ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿಯಯಲ್ಲಿ ಸಹಕಾರ ಕ್ಷೇತ್ರವು ಪ್ರಮುಖವಾಗಿದೆ ಎಂದ ಅವರು, ಹಲವಾರು ಸಹಕಾರ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದರು.

ಆಡಳಿತ ಸುಧಾರಣಾ ಆಯೋಗವು ಸಹಕಾರಿ ಕ್ಷೇತ್ರಕ್ಕೆ ಹಲವು ಶಿಫಾರಸುಗಳನ್ನು ಮಾಡಿರುವುದನ್ನು ತಿಳಿಸಿದ ಅವರು, ಸರ್ಕಾರ ಆದಷ್ಟು ಬೇಗ ಅದನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮತ್ತು ತಾವೂ ಸೇರಿದಂತೆ ಇತರ ಹಲವಾರು ಉನ್ನತ ರಾಜಕೀಯ ನಾಯಕರು ಸಹಕಾರ ಕ್ಷೇತ್ರದ ಮೂಲಕವೇ ತಮ್ಮ ರಾಜಕೀಯ ವೃತ್ತಿ ಜೀವನ ಆರಂಭಿಸಿದವರು. ಸಹಕಾರ ಕ್ಷೇತ್ರದ ಬೆಳವಣಿಗೆಗೆ ಮತ್ತು ಯಶಸ್ಸಿಗೆ ಶ್ರಮಿಸುತ್ತಿದ್ದಾರೆ. ಸಮಾಜದ ಎಲ್ಲಾ ವರ್ಗಗಳ ಆರ್ಥಿಕ ಸಬಲೀಕರಣಕ್ಕಾಗಿ ಸಮಾಜವು ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಸಹಕಾರ ಸಂಘಗಳ ಹೆಚ್ಚುವರಿ ನಿಬಂಧಕ ಎ.ಸಿ.ದಿವಾಕರ್ ಅವರು ಮುಖ್ಯ ಅತಿಥಿಯಾಗಿ ಮಾತನಾಡಿ, ಜನರ ಜೀವನ ಮತ್ತು ಜೀವನೋಪಾಯದ ಸುಧಾರಣೆಯಲ್ಲಿ ನಗರ ಸಹಕಾರ ಸಂಘಗಳ ಪಾತ್ರ ಹೆಚ್ಚು ಮಹತ್ವದ್ದಾಗಿದೆ. 'ಯಶಸ್ವಿನಿ ಆರೋಗ್ಯ ಯೋಜನೆ'ಯನ್ನು ಅಕ್ಟೋಬರ್‌ನಲ್ಲಿ ಮರು ಪ್ರಾರಂಭಿಸಲು ಸರ್ಕಾರ ಯೋಜಿಸಿದೆ. ಅ.2ರ ಗಾಂಧಿ ಜಯಂತಿಯಂದು ಆರೋಗ್ಯ ಯೋಜನೆಯನ್ನು ನಗರ ಸಹಕಾರ ಸಂಘಗಳಿಗೂ ವಿಸ್ತರಿಸುವ ಬಗ್ಗೆ ಚಿಂತನೆಗಳು ನಡೆದಿವೆ. ಹಾಗಾಗಿ ಈ ಆರೋಗ್ಯ ಯೋಜನೆಯ ಪ್ರಯೋಜನ ಪಡೆದುಕೊಳ್ಳುವಂತೆ ಎಂದು ಮನವಿ ಮಾಡಿದರು.

ಸಂಘದ ಅಧ್ಯಕ್ಷ ಎನ್.ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸಹಕಾರ ಸಂಘಗಳ ಮೈಸೂರು ಪ್ರಾಂತ ಜಂಟಿ ನಿಬಂಧಕ ಡಾ.ಜಿ.ಉಮೇಶ್, ಸಂಘದ ಸಂಸ್ಥಾಪಕ ಆರ್.ಮೂರ್ತಿ, ಸಂಘದ ಉಪಾಧ್ಯಕ್ಷ ಸಿ.ಆರ್.ಶೇಷಗಿರಿರಾವ್, ಕಾರ್ಯದರ್ಶಿ ಎಂ.ವಿ. ರವಿ, ನಿರ್ದೇಶಕರಾದ ಎಂ.ಕೆ.ಮೋಹನ್‌ರಾಜ್, ಮಾದಪ್ಪ, ಎ.ಮಹೇಶ್, ಎ.ಮಾಲಾ, ಎನ್.ಜಿ. ರಮೇಶ್, ಹೆಚ್.ಎಸ್.ಪದ್ಮ, ಎನ್.ಶೋಭನಾ, ರಾಧಾ, ಆರ್.ಜಗದೀಶ್‌ಕುಮಾರ್, ಶಿವಶಂಕರ್, ಡಿ.ರೇವತಿ ಇನ್ನಿತರರು ಉಪಸ್ಥಿತರಿದ್ದರು.

# ಹುಣಸೂರಲ್ಲಿ ವಾಲ್ಮೀಕಿ ಸಮುದಾಯ ಭವನಕ್ಕೆ ಶಂಕುಸ್ಥಾಪನೆ

ಹುಣಸೂರು, ಆ.28– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಗರದ ಹೌಸಿಂಗ್ ಬೋರ್ಡ್ ಬಳಿ ವಾಲ್ಮೀಕಿ ಸಮುದಾಯ ಭವನ ಕಾಮಗಾರಿಗೆ ಶಾಸಕರಾದ ಸತೀಶ್ ಜಾರಕಿಹೊಳಿ, ಅನಿಲ್ ಚಿಕ್ಕಮಾದು, ಹೆಚ್.ಪಿ.ಮಂಜುನಾಥ್ ಶಂಕುಸ್ಥಾಪನೆ ನೆರವೇರಿಸಿದರು.

ಶಾಸಕ ಸತೀಶ್ ಜಾರಕಿಹೊಳಿ ಮಾತನಾಡಿ, ಕ್ಷೇತ್ರದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಸಮಾಜದ ಏಳಿಗೆಗಾಗಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುತ್ತಿದ್ದಾರೆ. ಯಾವುದೇ ಕಾರ್ಯಕ್ರಮ ಮಾಡುವಾಗ ಸಣ್ಣಪುಟ್ಟ ಲೋಪದೋಷ ಸಹಜ. ಸಮುದಾಯ ಭವನದ ಜಾಗ ಚಿಕ್ಕದೇ ಇರಬಹುದು. ಮುಂದೆ ದೊಡ್ಡದು ಮಾಡೋಣ. ನಮ್ಮೆಲ್ಲರಲ್ಲೂ ವಿಶಾಲ ಹೃದಯವಿರಬೇಕು. ಸಮಾಜದ ಮಕ್ಕಳು ಹೆಚ್ಚು ವಿದ್ಯಾವಂತರಾಗಬೇಕು. ಸಮಾಜ ಜಾಗೃತವಾಗಬೇಕು. ಹಿಂದೆ ನಾವೆಲ್ಲರೂ ಕೇವಲ 400ರಿಂದ 50 ಪರ್ಸೆಂಟ್ ಅಂಕ ಪಡೆದರೆ ಸಾಕಾಗಿತ್ತು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ 95, 98, 100 ಪರ್ಸೆಂಟ್ ಪಡೆಯಬೇಕು. ಬರೀ ಶಿಕ್ಷಣ ಪಡೆದರೆ ಸಾಲದು. ಮುಂದಿರುವ ಸವಾಲುಗಳನ್ನು ಎದುರಿಸಬೇಕು. ಸ್ವಾತಂತ್ರ ಪೂರ್ವದಲ್ಲಿ ಶಿಕ್ಷಣ, ಆಸ್ತಿ ಮಾಡುವುದು ಸುಲಭ ಇರಲಿಲ್ಲ.



ಸಂವಿಧಾನ ಬಂದ ಮೇಲೆ ನಮಗೆಲ್ಲ ಸಿಕ್ಕಿದೆ. ಸಂವಿಧಾನ ಉಳಿಸುವುದು ನಮ್ಮ ನಿಮ್ಮ ಕರ್ತವ್ಯ. ನಮ್ಮ ಸಮುದಾಯದವರು ದುಂದುವೆಚ್ಚ ಮಾಡುತ್ತಿವೆ. ಧಾರ್ಮಿಕ ಆಚರಣೆ ಮಾಡುತ್ತೇವೆ. ಆದರೆ ಮಕ್ಕಳ ಭವಿಷ್ಯಕ್ಕೆ ದುಡ್ಡು ಖರ್ಚು ಮಾಡಲು ಚಿಂತೆ ಮಾಡುತ್ತೇವೆ. ಹೀಗಾಗಿ ಮೌಢ್ಯ ಮೂಢನಂಬಿಕೆಗಳಿಂದ ಹೊರಬರಬೇಕು. ಬುದ್ಧ, ಬಸವ, ಅಂಬೇಡ್ಕರ್ ನಮಗೆ ಆದರ್ಶ ಆಗಬೇಕು. ಯಾವ ವ್ಯಕ್ತಿಗಳು ಸಮಾಜದ, ಶೋಷಿತರ, ದಮನಿತರ ಪರವಾಗಿದ್ದಾರೋ ಅಂತವರನ್ನು ನೀವು ಸದಾ ಕಾಲ ಬೆಂಬಲಿಸಬೇಕು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಈ ಭವನ ನಿರ್ಮಾಣ ನಮ್ಮ ತಂದೆಯವರ ಕನಸಾಗಿತ್ತು. ಹಲವು ವರ್ಷಗಳ ನಂತರ ಮಂಜುನಾಥ್ ನಮ್ಮ ತಂದೆಯ ಕನಸನ್ನು ನನಸು ಮಾಡಿದ್ದಾರೆ. ಭವನಕ್ಕೆ ಕೇವಲ ರೂ. ಅನುದಾನ ಮೀಸಲಾಗಿದ್ದು, ಬೇರೆ ಕಡೆಯಿಂದ ಹೆಚ್ಚುವರಿಯಾಗಿ ಇನ್ನೂ 2 ಕೋಟಿಗಳನ್ನು ತಂದು ಕೆಲಸ ಮಾಡಿಸುತ್ತೇನೆಂದು ಶಾಸಕರು ಭರವಸೆ ನೀಡಿದ್ದಾರೆ. ಅವರಿಗೆ ನಾನು ಮತ್ತು ನಮ್ಮ ಸಮಾಜ ಆಭಾರಿ. ನಾವೆಲ್ಲರೂ ಒಗ್ಗಟ್ಟಾಗಿ ಭವನದ ಕೆಲಸದಲ್ಲಿ ಭಾಗಿಯಾಗೋಣ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಈ ಭವನ ನಿರ್ಮಾಣಕ್ಕೆ ಕಾರಣ ದಿ.ಚಿಕ್ಕಮಾದು. ಅವರು ಬದುಕಿದ್ದಾಗಲೇ ಈ ಭವನ ನಿರ್ಮಾಣವಾಗಿದ್ದರೆ ತುಂಬಾ ಸಂತೋಷಪಡುತ್ತಿದ್ದರು. ನಾನು ಸದಾಕಾಲ ನಿಮ್ಮ ಜೊತೆ ಇರುತ್ತೇನೆ. ಇನ್ನೂ ಹೆಚ್ಚಿನ ಅನುದಾನ ತಂದು ಭವನವನ್ನು ದೊಡ್ಡದಾಗಿ ನಿರ್ಮಿಸೋಣ. ನಿಮ್ಮೆಲ್ಲರ ಪ್ರೀತಿ, ಆಶೀರ್ವಾದ ನನ್ನ ಮೇಲಿರಲಿ ಎಂದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಸಮಾಜದ ಹಿರಿಯ ಮುಖಂಡರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ತಾಪಂ ಉಸ್ತುವಾರಿ ಅಧಿಕಾರಿ ನಂದ, ತಾಲೂಕು ಪರಿಶಿಷ್ಟ ವರ್ಗಗಳ ಇಲಾಖೆ ಅಧಿಕಾರಿ ಬಸವರಾಜ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಬಸವರಾಜ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್, ನಗರಸಭಾಧ್ಯಕ್ಷೆ ಗೀತಾ, ಉಪಾಧ್ಯಕ್ಷ ಆಶಾ, ಜಿಪಂ ಮಾಜಿ ಸದಸ್ಯರಾದ ದೇವರಾಜ್ ಕಟ್ಟನಾಯಕ, ಮುಖಂಡರಾದ ಚೌಡನಾಯ್ಕ, ಪ್ರಸನ್ನ, ಗವಿನಾಯಕ, ಪ್ರಭಾಕರ್, ದೇವ ನಾಯಕ, ಶಿವಣ್ಣ, ಪ್ರಸಾದ್ ಸೇರಿದಂತೆ 500ಕ್ಕೂ ಹೆಚ್ಚು ಮಂದಿ ನಾಯಕ ಸಮಾಜದ ಮುಖಂಡರು ಹಾಜರಿದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಹಾಗೂ ಮೈಸೂರಿನ ಸುಯೋಗ ಆಸ್ಪತ್ರೆ ವತಿಯಿಂದ ಮಹದೇವಪುರದಲ್ಲಿ ಉಚಿತ ಆರೋಗ್ಯ ಮತ್ತು ಹೃದಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರದಲ್ಲಿ 150ಕ್ಕೂ ಹೆಚ್ಚು ಮಂದಿಯನ್ನು ಪರೀಕ್ಷಿಸಲಾಯಿತು. ಹತ್ತು ಮಂದಿಗೆ ಆಂಜಿಯೋಗ್ರಾಂ ಮತ್ತು ಸ್ಟಂಟ್ ಅಳವಡಿಸಲು ಆಯ್ಕೆ ಮಾಡಲಾಯಿತು. ಈ ವೇಳೆ ಬಿಜೆಪಿ ಕ್ಷೇತ್ರಾಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಮೈಸೂರು ಗ್ರಾಮಾಂತರ ನಿಕಟಪೂರ್ವ ಜಿಲ್ಲಾಧ್ಯಕ್ಷ ಮಹೇಂದ್ರ, ಉಪಾಧ್ಯಕ್ಷೆ ಝಾನ್ಸಿರಾಣಿ, ಯುವ ಮೋರ್ಚಾ ಅಧ್ಯಕ್ಷ ಚೇತನ್ ಕುಮಾರ್, ಯುವ ಮುಖಂಡ ಕಿರಣ್ ಕುಮಾರ್, ಗ್ರಾಮದ ಹಿರಿಯರಾದ ಕಬಿನಿಗೌಡ, ತ್ಯಾಗರಾಜ್, ಕರವೇ ಬಾಲಕೃಷ್ಣ, ಅಶೋಕ್, ಹಿರೇಮಠ್, ಚಂದ್ರು, ಮಧು, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ನಂದೀಶ್, ರಿತೇಶ್ ಇತರರಿದ್ದರು.

# ಗ್ರಾಮೀಣ ಮಕ್ಕಳ ಪ್ರತಿಭೆ ಹೊರತರುವ ಜವಾಬ್ದಾರಿ ಶಿಕ್ಷಕರದ್ದು

### ಪ್ರತಿಭಾ ಕಾರಂಜಿಯಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್

ತಿ.ನರಸೀಪುರ, ಆ.28– ಗ್ರಾಮೀಣ ಶಾಲಾ ಮಕ್ಕಳಲ್ಲಿ ನಿರೀಕ್ಷೆಗೂ ಮೀರಿದ ಪ್ರತಿಭೆ ಅಡಗಿದ್ದು, ಅದನ್ನು ಗುರುತಿಸಿ ಹೊರತರುವ ಜವಾಬ್ದಾರಿ ಶಿಕ್ಷಕರದ್ದಾಗಿದೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಆಲಗೂಡು ಗ್ರಾಮದ ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ಹಿರಿಯ ಪ್ರಾಥಮಿಕ ಶಾಲೆಗಳ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಮಕ್ಕಳು, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ನಗರದ ಮಕ್ಕಳಷ್ಟೇ ಪ್ರತಿಭಾವಂತರಾಗಿರುತ್ತಾರೆ. ಆದರೆ ಅವರಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ದೊರೆಯದ ಕಾರಣ ಅವರಲ್ಲಿರುವ ಸುಪ್ತ ಪ್ರತಿಭೆ ಹೊರ ಹಾಕಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಶಿಕ್ಷಕರು ಮಕ್ಕಳ ಪ್ರತಿಭೆ ಗುರುತಿಸುವ ಕೆಲಸ ಮಾಡಬೇಕು. ಪ್ರತಿಭಾ ಕಾರಂಜಿ ಪ್ರತಿಭೆ ಇರುವ ಮಕ್ಕಳಿಗೆ ಕ್ರಿಯಾಶೀಲ ಚಟುವಟಿಕೆಗಳಲ್ಲಿ ಸದಾ ಭಾಗವಹಿಸುವಂತೆ ಮಾಡಲು ಸಹಕರಿಸುತ್ತದೆ ಎಂದರು.



ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ ಮಾತನಾಡಿ, ಕ್ರೀಡೆ ಮತ್ತು ಕಲೆ ಮಕ್ಕಳ ಶೈಕ್ಷಣಿಕ ಅರ್ಹತೆಯನ್ನು ಮತ್ತಷ್ಟು ಉಜ್ವಲಗೊಳಿಸುತ್ತವೆ. ಹಾಗಾಗಿ ಮಕ್ಕಳ ಕಲೆಯನ್ನು ಪೋಷಕರು ಸಕಾರಾತ್ಮಕವಾಗಿ ಸ್ವೀಕರಿಸಿ ಪೋಷಣೆ ಮಾಡಬೇಕು ಎಂದು ಸಲಹೆ ನೀಡಿದರು.

ಶಾಲೆ ಸಂಸ್ಥಾಪಕ ಎನ್.ಕೆ.ಫರೀದ್ ಮಾತನಾಡಿದರು. ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಯೀದ್ ಅಹ್ಮದ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ್ ಮೂರ್ತಿ, ಬಿಸಿಯೂಟ ಯೋಜನಾ ನಿರ್ದೇಶಕ ಮದ್ದಾನಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ.ಮಾದಪ್ಪ, ಪ್ರಧಾನ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ, ಬಿಆರ್‌ಸಿ ನಾಗೇಶ್, ಸಿಆರ್‌ಪಿ ನವೀನ್, ಶಿಕ್ಷಕ ಕೇಶವ್, ಮಹದೇವಸ್ವಾಮಿ, ರಿಯಾಜ್ ಅಹಮದ್, ಶಾಲೆ ಮುಖ್ಯ ಶಿಕ್ಷಕಿ ಹೇಮ, ಸಹ ಶಿಕ್ಷಕಿಯರಾದ ಕೆಅಶ್ವಿನಿ, ಬಿ.ಗೀತಾ, ಬಿ.ಅನಿತಾ, ಎನ್.ರಶ್ಮಿ, ನೂರ್ ಹಾಜಿರಾ ಬೇಗಂ, ಮಧುಶ್ರೀ, ರೇಖಾ, ಬಿ.ಶೈಲ, ಎಸ್. ಶಿಲ್ಪಶ್ರೀ, ಕೆ.ಸ್ವರ್ಣಲತಾ, ಸಿ.ಆಶಾ ಸೇರಿದಂತೆ ವಿವಿಧ ಕ್ಲಸ್ಟರ್‌ಗಳ ಸಿಆರ್‌ಪಿಗಳು ಭಾಗವಹಿಸಿದ್ದರು.

# ಕ್ಷೇತ್ರದ ಶಾಸಕರು ತಮ್ಮ ಕೊಡುಗೆ ಬಹಿರಂಗಪಡಿಸಲಿ

### ಕಾಂಗ್ರೆಸ್ ಮುಖಂಡ ನಾಗೇಶ್‌ರಾಜ್



ನಂಜನಗೂಡು, ಆ.28– ಕ್ಷೇತ್ರಕ್ಕೆ ಅನುದಾನ ತರುವಲ್ಲಿ ಶಾಸಕ ಬಿ.ಹರ್ಷವರ್ಧನ್ ವಿಫಲರಾಗಿದ್ದು, ತಮ್ಮ ಕೊಡುಗೆ ಏನೆಂದು ಬಹಿರಂಗಪಡಿಸಲಿ ಎಂದು ಕಾಂಗ್ರೆಸ್ ಮುಖಂಡ ನಾಗೇಶ್‌ರಾಜ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರು ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಗೊಂದಲ ಸೃಷ್ಟಿಸಿ, ಸುಳ್ಳು ಹೇಳಿಕೆ ನೀಡುವುದು ಸರಿಯಲ್ಲ. ಶಾಸಕರಾದ ಮೇಲೆ 5 ವರ್ಷ ಅವಧಿಯಲ್ಲಿ ನೂರಾರು ಕೋಟಿ ಅನುದಾನ ತಂದು ಕ್ಷೇತ್ರ ಅಭಿವೃದ್ಧಿ ಪಡಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡುತ್ತದೆ. ಅದರ ಹೊರತಾಗಿ ಶಾಲಾ–ಕಾಲೇಜು, ಆಸ್ಪತ್ರೆ ನೀರಾವರಿಯಂತಹ ವಿಶೇಷ ಯೋಜನೆ ತಂದಿದ್ದರೆ ಅದನ್ನು ತಿಳಿಸಿ ಎಂದರು.

ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಜಾರಿಯಾದ ನುಗು ಏತ ನೀರಾವರಿ ಯೋಜನೆಗೆ ನೀರಾವರಿ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ 80 ಕೋಟಿ ಅನುದಾನ ಬಿಡುಗಡೆ ಮಾಡಿದರು. ಯೋಜನೆ ಜಾರಿಯಾಗಿ 4 ವರ್ಷ ಕಳೆದರೂ ಇನ್ನೂ ಚಾಲನೆ ದೊರೆತಿಲ್ಲ. ಶ್ರೀಕಂಠೇಶ್ವರ ದೇವಾಲಯದ ಬೆಳ್ಳಿ ರಥ ನಿರ್ಮಾಣವಾಗುತ್ತಿರುವುದು ಭಕ್ತರ ಹಣದಿಂದ. ಇದರಲ್ಲಿ ನಿಮ್ಮ ಕೊಡುಗೆ ಏನು ಇಲ್ಲ. ಕಾಂಗ್ರೆಸ್‌ನವರು ಆರ್‌ಎಸ್‌ಎಸ್ ಆಳ ಹಾಗೂ ಅಗಲ ಪುಸ್ತಕ ಹಂಚಿಕೆ ಮಾಡಿ ಕ್ಷೇತ್ರದಲ್ಲಿ ಶಾಂತಿ, ಸೌಹಾರ್ದತೆ ಹಾಳು ಮಾಡಿದ್ದಾರೆ ಎಂದು ಶಾಸಕರು ಆಪಾದಿಸಿದ್ದಾರೆ. ಸೌಹಾರ್ದತೆ ಹಾಳಾಗುವ ಒಂದು ಪ್ರಕರಣವಿದ್ದರೆ ಶಾಸಕರು ರುಜುವಾತು ಮಾಡಲಿ. ಕಾಂಗ್ರೆಸ್ ಪಾದಯಾತ್ರೆ ವೇಳೆ ಸವರ್ಣೀಯರ ಬಡಾವಣೆಗಳಿಗೆ ಹೋಗಿಲ್ಲ ಎಂದಿದ್ದಾರೆ. ಪಾದಯಾತ್ರೆ ಸಂದರ್ಭ ಆರ್.ಧ್ರುವನಾರಾಯಣ್ ಅವರನ್ನು ಭೇಟಿ ಮಾಡಿ ಉಭಯ ಕುಶಲೋಪರಿ ವಿಚಾರಿಸಿದ್ದು ಹೊಸವೀಡು ಗ್ರಾಮದ ಸವರ್ಣೀಯರ ಬಡಾವಣೆಯಲ್ಲೇ ಎಂಬುದನ್ನು ಶಾಸಕರು ನೆನಪು ಮಾಡಿಕೊಳ್ಳಲಿ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ ಎಂದರು. ಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ ಇತರರಿದ್ದರು.

### 'ಕೈ' ನಾಯಕರ ಓಲೈಕೆಗಾಗಿ ಸಂಸದರನ್ನು ಟೀಕಿಸಿದ

# ಪುಷ್ಪ ಅಮರ್‌ನಾಥ್ ಬಹಿರಂಗ ಕ್ಷಮೆ ಕೇಳದಿದ್ದರೆ ಹೋರಾಟ

ಹುಣಸೂರು, ಅ.28– ಕಾಂಗ್ರೆಸ್ ನಾಯಕರ ಓಲೈಕೆಗಾಗಿ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪ ಅಮರ್ ನಾಥ್ ಕೀಳುಮಟ್ಟದ ರಾಜಕಾರಣ ಮಾಡುತ್ತಿದ್ದಾರೆ ಎಂದು ಹುಡಾ ಅಧ್ಯಕ್ಷರೂ ಆದ ಬಿಜೆಪಿ ನಗರಾಧ್ಯಕ್ಷ ಗಣೇಶ್ ಕುಮಾರಸ್ವಾಮಿ ಆರೋಪಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಡಾ.ಪುಷ್ಪ ಅಮರ್‌ನಾಥ್ ಅವರು ಸಂಸದ ಪ್ರತಾಪ್ ಸಿಂಹ ಅವರನ್ನು ಏಕವಚನದಲ್ಲಿ ಟೀಕಿಸಿದ್ದಾರೆ. ಬಿಜೆಪಿ ನಾಯಕರ ಮೇಲೆ ಅನಗತ್ಯ ಟೀಕೆ ಮಾಡುವ ಮೂಲಕ ಕೀಳು ರಾಜಕೀಯ ಮಾಡುತ್ತಿರುವುದು ಸರಿಯಲ್ಲ. ಸಂಸದ ಪ್ರತಾಪ್ ಸಿಂಹ ಪಬ್ ಸಂಸ್ಕೃತಿಯಲ್ಲಿ ಮುಳುಗಿದ್ದಾರೆ ಎಂದಿರುವುದು ಖಂಡನೀಯ ಎಂದರು. ಬಿಜೆಪಿಯವರಿಗೆ ಪಬ್ ಸಂಸ್ಕೃತಿ ತಿಳಿದಿಲ್ಲ. ನಮ್ಮ ನಾಯಕರ ಬಗ್ಗೆ ಮಾತನಾಡಿದರೇ, ನಾವೂ ಕಾಂಗ್ರೆಸ್ ನಾಯಕರ ಬಗ್ಗೆ ಮಾತನಾಡಬೇಕಾಗುತ್ತದೆ ಎಂದರು.

ತಾಲೂಕಿನಲ್ಲಿ ಕಳೆದ 4 ಬಾರಿ ತಮಗೆ ಬೇಕಾದ ಅನೂಕೂಲಕರ ವಾತಾವರಣ ನಿರ್ಮಿಸಿಕೊಂಡು ಎಸ್ಸಿ ಮಹಿಳಾ ಮೀಸಲಾತಿ ಪಡೆದು ಅಧಿಕಾರ ಅನುಭವಿಸಿದ್ದೀರಿ. ನಿಮಗೆ ನೈತಿಕತೆ ಇದ್ದರೆ ಹೇಳಿ ಯಾವ ದಲಿತ ಮುಖಂಡರನ್ನು ರಾಜಕೀಯವಾಗಿ ಬೆಳೆಸಿದ್ದೀರಿ. ದಲಿತರ ಅವಕಾಶಗಳನ್ನು ಕಬಳಿಸುವ ಮೂಲಕ ತಾವೇ ಅಧಿಕಾರ ಅನುಭವಿಸಿದ್ದೀರಿ. ಶಾಸಕರಾಗಿ ನಿಮ್ಮ ಬಾವ, ಜಿಪಂ ಅಧ್ಯಕ್ಷೆಯಾಗಿ ನೀವು ಮಾತ್ರ ಅಧಿಕಾರ ಅನುಭವಿಸಬೇಕೆ. ತಾಲೂಕಿಗೆ ನಿಮ್ಮ ಕೊಡುಗೆ ಏನು. ನೀವು, ನಿಮ್ಮ ಬಾವ ಮೈಸೂರಿನಲ್ಲಿ ಕುಳಿತು ಅಧಿಕಾರ ಅನುಭವಿಸಿದರೆ ಕ್ಷೇತ್ರದ ಜನರ ಕಷ್ಟ ಕೇಳುವವರು ಯಾರು? ಎಂದರು.

ರಾಜ್ಯ ಕಾಂಗ್ರೆಸ್ ನಾಯಕರನ್ನು ಓಲೈಸಲು ಬಿಜೆಪಿ ನಾಯಕರನ್ನು ಕೇವಲವಾಗಿ ಟೀಕಿಸುವುದನ್ನು ಬಿಟ್ಟು ಸಾರ್ವಜನಿಕವಾಗಿ ಕ್ಷಮೆ ಕೇಳದಿದ್ದರೇ ಬಿಜೆಪಿ ಕಾರ್ಯಕರ್ತರು ರಸ್ತೆಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

# ಕುಷ್ಠರೋಗ ಬೇಗ ಪತ್ತೆ ಹಚ್ಚಿದರೆ ಅಂಗವಿಕಲತೆ ತಪ್ಪಿಸಬಹುದು

### ಜಿಲ್ಲಾ ಕುಷ್ಠರೋಗ ನಿರ್ಮೂಲನೆ ಅಧಿಕಾರಿ ಡಾ.ಮಂಜುಪ್ರಸಾದ್



ಹೆಚ್.ಡಿ.ಕೋಟೆ, ಆ.28– ಕುಷ್ಠರೋಗ ಬೇಗ ಪತ್ತೆ ಹಚ್ಚುವುದರಿಂದ ಅಂಗವಿಕಲತೆ ತಪ್ಪಿಸಬಹುದು ಎಂದು ಜಿಲ್ಲಾ ಕುಷ್ಠರೋಗ ನಿರ್ಮೂಲನೆ ಅಧಿಕಾರಿ ಡಾ.ಮಂಜು ಪ್ರಸಾದ್ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಕೋಟೆ–ಸರಗೂರು ತಾಲೂಕಿನ ಆರೋಗ್ಯ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತರಿಗೆ ರಾಷ್ಟ್ರೀಯ ಕುಷ್ಠ ರೋಗ ನಿರ್ಮೂಲನಾ ಕಾರ್ಯಕ್ರಮದಡಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕುಷ್ಠ ರೋಗ ದೇವರ ಶಾಪವಲ್ಲ. ಇದೊಂದು ಸಾಂಕ್ರಾಮಿಕ ರೋಗ. ಇದು ಒಬ್ಬರಿಂದ ಒಬ್ಬರಿಗೆ ಗಾಳಿಯಿಂದ ಹರಡುತ್ತದೆ. 6 ತಿಂಗಳು ಹಾಗೂ 1 ವರ್ಷದ ಚಿಕಿತ್ಸೆ ಪಡೆದರೆ ರೋಗ ನಿವಾರಣೆಯಾಗಲಿದೆ ಎಂದರು.

ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾತನಾಡಿ, ಸೆ.12ರಿಂದ 29ರವರೆಗೆ ಕುಷ್ಠರೋಗ ಪತ್ತೆ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಈ ವೇಳೆ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ನಾಗರತ್ನ, ಫಿಸಿಯೋಥೆರಪಿಸ್ಟ್ ಶ್ರುತಿ, ಆರೋಗ್ಯ ನಿರೀಕ್ಷಣಾಧಿಕಾರಿ ಸಂದೀಪ್, ಸುಮಂತ್, ಜಿಲ್ಲಾ ಆಶಾ ಫೇಸಿಲಿಟರ್ ಪ್ರಿಯಾಂಕ, ಭಾಗ್ಯ, ನಾಗೇಂದ್ರ, ರವಿರಾಜ್, ಸರಳ, ಆರೋಗ್ಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಹಸಿರು ನಮ್ಮ ಉಸಿರು

# ಚುಂಚನಕಟ್ಟೆ ಪ್ರವಾಸಿ ತಾಣವನ್ನಾಗಿಸಲು ಪ್ರಾಮಾಣಿಕ ಪ್ರಯತ್ನ: ಶಾಸಕ ಸಾರಾ

ಚುಂಚನಕಟ್ಟೆ, ಆ.28– ತಾಲೂಕಿನ ಜನತೆಯ ಆಶಯದಂತೆ ಚುಂಚನಕಟ್ಟೆಯನ್ನು ಅತ್ಯುತ್ತಮ ಪ್ರವಾಸಿ ತಾಣವನ್ನಾಗಿಸುವ ಗುರಿ ಹೊಂದಲಾಗಿದ್ದು, ಅದಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಚುಂಚನಕಟ್ಟೆ ಶ್ರೀರಾಮ ದೇವಾಲಯದ ಆವರಣದಲ್ಲಿ ವಾರಾಂತ್ಯದ 2 ದಿನ ನಡೆಸಲು ಉದ್ದೇಶಿಸಲಾಗಿರುವ ಅನ್ನದಾಸೋಹ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ದಾಸೋಹವನ್ನು ನಿರಂತರವಾಗಿ ನಡೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಯೋಜನೆ ಅನುಷ್ಠಾನ ಮಾಡುವುದಾಗಿ ತಿಳಿಸಿದರು.

ಈಗಾಗಲೇ 10 ಕೋಟಿ ರೂ. ವೆಚ್ಚದಲ್ಲಿ ಚುಂಚನಕಟ್ಟೆ ದೇವಾಲಯ ಮತ್ತು ಸುತ್ತಮುತ್ತಲಿನ ಆವರಣ ಅಭಿವೃದ್ಧಿಪಡಿಸಲಾಗಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಘೋಷಿಸಿದರು.

ಇಲ್ಲಿಗೆ ಆಗಮಿಸುವ ಭಕ್ತರು ಮತ್ತು ಯಾತ್ರಾರ್ಥಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗಿದ್ದು, ಕ್ಷೇತ್ರವನ್ನು ರಾಜ್ಯದಲ್ಲೇ ಪ್ರಸಿದ್ಧ ಯಾತ್ರಾ ಸ್ಥಳವನ್ನಾಗಿ ಮಾಡುವುದಾಗಿ ತಿಳಿಸಿದರು. ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಶ್ರೀರಾಮ ದೇವಾಲಯ ರಾಜ್ಯದಲ್ಲೇ ಮನೆ ಮಾತಾಗಿದೆ. ಕಳೆದ 3 ತಿಂಗಳ ಹಿಂದೆ ದೇವಸ್ಥಾನದ ಮುಂದೆ ಆಂಜನೇಯಸ್ವಾಮಿ ಏಕಶಿಲಾ ವಿಗ್ರಹ ಪ್ರತಿಷ್ಠಾಪಿಸಲಾಗಿದ್ದು, ಪ್ರಸ್ತುತ ನಿತ್ಯ ಸಾವಿರಾರು ಭಕ್ತರು ಆಗಮಿಸುತ್ತಿರುವುದರಿಂದ ಸ್ಥಳೀಯ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತಿದೆ ಎಂದರು.

ಇದೇ ವೇಳೆ ಶಾಸಕ ಸಾ.ರಾ.ಮಹೇಶ್, ದೇವಾಲಯದ ಪ್ರಾಂಗಣದಲ್ಲಿ ನೆರೆದಿದ್ದ ಭಕ್ತರಿಗೆ ಪ್ರಸಾದ ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಿ ಮುಂದಿನ ದಿನಗಳಲ್ಲಿ ದೇವಾಲಯ ರಾಷ್ಟ್ರಮಟ್ಟದಲ್ಲಿ ಖ್ಯಾತಿ ಗಳಿಸಲಿ ಎಂದು ಹಾರೈಸಿದರು. ಈ ಸಂದರ್ಭ ಜೆಡಿಎಸ್ ರಾಜ್ಯ ಕಾರ್ಯದರ್ಶಿ ಚಂದ್ರಶೇಖರ್, ಜಿಲ್ಲಾ ಉಪಾಧ್ಯಕ್ಷ ಕುಚೇಲ, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಕುಪ್ಪೆ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಹಳಿಯೂರು ಗ್ರಾಪಂ ಅಧ್ಯಕ್ಷ ಎಚ್.ಆರ್.ದಿನೇಶ್, ಮಾಜಿ ಉಪಾಧ್ಯಕ್ಷ ಕೃಷ್ಣಮೂರ್ತಿ, ಸದಸ್ಯರಾದ ಕೃಷ್ಣ, ಗೋವಿಂದೇಗೌಡ, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಎಸ್.ಟಿ.ಕೀರ್ತಿ, ಮುಖಂಡರಾದ ಪ್ರಸನ್ನ, ಡಿ.ಎನ್.ಮಹೇಶ್, ಸಿ.ಜಿ.ಮಧು, ಎಚ್.ಎಸ್.ಜಗದೀಶ್, ಡಿ.ಆರ್.ರಮೇಶ್, ಡಿಪ್ಪೋ ಪ್ರವೀಣ್, ನಾಗರಾಜು, ಬಿ.ರಮೇಶ್, ತಾಪಂ ಇಓ ಸತೀಶ್, ಕುಪ್ಪೆ ಗ್ರಾಪಂ ಪಿಡಿಓ ಸುನೀಲ್, ನಾಗರಾಜ್ ಇಓ ರಘು, ಯೋಗೀಶ್, ಅರ್ಚಕರಾದ ವಾಸುದೇವನ್, ನಾರಾಯಣ ಅಯ್ಯಂಗಾರ್ ಇದ್ದರು.




### ಹಾರೋಹಳ್ಳಿ (ಮೆಲ್ಲಹಳ್ಳಿ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

# ಲಕ್ಷ್ಮೀನಾರಾಯಣ್ ಅಧ್ಯಕ್ಷ, ನಿಂಗಾಚಾರಿ ಉಪಾಧ್ಯಕ್ಷ

ತಿ.ನರಸೀಪುರ, ಆ.28– ತಾಲೂಕಿನ ಹಾರೋಹಳ್ಳಿ (ಮೆಲ್ಲಹಳ್ಳಿ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಲಕ್ಷ್ಮಿನಾರಾಯಣ್ ಹಾಗೂ ಉಪಾಧ್ಯಕ್ಷರಾಗಿ ನಿಂಗಾಚಾರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಸಹಕಾರ ಸಂಘದ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಸಂಬಂಧ ಭಾನುವಾರ ನಡೆದ ಚುನಾವಣಾ ವಿಶೇಷ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಲಕ್ಷ್ಮಿನಾರಾಯಣ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಿಂಗಾಚಾರಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವರಿಬ್ಬರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸತೀಶ್ ಘೋಷಿಸಿದರು. ಈ ವೇಳೆ ಸಂಘದ ಆವರಣದಲ್ಲಿ ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ಹಿಂದಿನ ಅಧ್ಯಕ್ಷ ಜೆ.ಮಂಜುನಾಥ್, ಉಪಾಧ್ಯಕ್ಷ ಶಿವಣ್ಣ ಆಂತರಿಕ ಒಪ್ಪಂದದ ಹಿನ್ನೆಲೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಅವರಿಂದ ತೆರವಾದ ಸ್ಥಾನಕ್ಕೆ ಇಂದು ಚುನಾವಣೆ ನಿಗದಿ ನಡೆಯಿತು. ಈ ವೇಳೆ ಜಿಲ್ಲಾ ಪ್ರತಿನಿಧಿ ಸೇರಿದಂತೆ ಸಹಕಾರ ಸಂಘದಲ್ಲಿ 12 ಮಂದಿ ನಿರ್ದೇಶಕರ ಬಲವಿದ್ದು, ನಿಕಟಪೂರ್ವ ಅಧ್ಯಕ್ಷ ಜೆ.ಮಂಜುನಾಥ್, ಉಪಾಧ್ಯಕ್ಷ ಶಿವಣ್ಣ, ನಿರ್ದೇಶಕರಾದ ಸಿ.ತಿಮ್ಮೇಗೌಡ, ಮಹದೇವಸ್ವಾಮಿ, ಲಕ್ಷ್ಮೀಶ, ಎಂ.ಬಿ.ಮಂಜುನಾಥ್, ಚೆಲುವಾಚಾರಿ, ಇಂದ್ರ, ಮಹದೇವಮ್ಮ, ಎ.ಜೆ.ಚರಣ್ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.



ನೂತನ ಅಧ್ಯಕ್ಷ ಲಕ್ಷ್ಮಿನಾರಾಯಣ್ ಮಾತನಾಡಿ, ಸರ್ವ ಸದಸ್ಯರ ಸಹಕಾರದೊಂದಿಗೆ ಅವಿರೋಧವಾಗಿ ಆಯ್ಕೆಗೊಂಡಿದ್ದೇನೆ. ಸಂಘದ ನಿರ್ದೇಶಕರ ಆಶಯಕ್ಕೆ ಪೂರಕವಾಗಿ ಕೆಲಸ ಮಾಡುವ ಮೂಲಕ ಸಂಘವನ್ನು ತಾಲೂಕಿನಲ್ಲಿಯೇ ಮಾದರಿ ಸಂಘ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸಹಕಾರ ಸಂಘದ ಸದಸ್ಯರಿಗೆ ಸರ್ಕಾರದಿಂದ ದೊರಕಬಹುದಾದ ಸೌಲಭ್ಯ, ಸವಲತ್ತುಗಳನ್ನು ತಲುಪಿಸಲು ಜಿಲ್ಲಾ ಸಹಕಾರ ಸಂಘದ ವರಿಷ್ಠರೊಂದಿಗೆ ಚರ್ಚಿಸಲಾಗುತ್ತದೆ. ಶಾಸಕ ಡಾ.ಯತೀಂದ್ರ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಹಾಗೂ ಜಿಪಂ ಮಾಜಿ ಸದಸ್ಯ ಸಿದ್ದೇಗೌಡರ ಮಾರ್ಗದರ್ಶನದಲ್ಲಿ ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿದ್ದೇಗೌಡ, ಹಾರೋಹಳ್ಳಿ–ಮೆಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹದೇವು, ಮುಖಂಡ ರವಿ ಎನ್.ಗೌಡ, ಟಿ.ಹರೀಶ್, ಪಟೇಲ್ ಸ್ವಾಮಿ, ಸಾಕಣ್ಣ, ಗ್ರಾಪಂ ಸದಸ್ಯ ಕುಮಾರ್, ಶ್ರೀನಿವಾಸ್, ಹಾರೋಹಳ್ಳಿ ಚಿಕ್ಕಣ್ಣ, ಕೆ.ಸಿದ್ದೇಗೌಡ, ಚಂದ್ರಶೇಖರ್, ಕೆ.ಶ್ರೀಧರ್, ಎಂ.ಬಿ.ಬೋರೇಗೌಡ, ಚೆಲುವರಾಜು, ಕಿರಣ್, ವೆಂಕಿ, ಸಹಕಾರ ಸಂಘದ ಸಿಇಓ ರಮೇಶ್ ಹಾಜರಿದ್ದರು.

## ನೇಮಕ



ಮಲ್ಕುಂಡಿ, ಆ.28– ಜೆಡಿಎಸ್ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ನಂಜನಗೂಡಿನ ಹೆಜ್ಜಿಗೆ ಗ್ರಾಮದ ಮಾಜಿ ಸಚಿವ ದಿ.ಪಿ.ವೆಂಕಟರಮಣ ಅವರ ಮೊಮ್ಮಗ ಹೆಚ್.ಎಸ್.ವಿನೋದ್ ಕುಮಾರ್ ಅವರನ್ನು ನೇಮಕ ಮಾಡಿ ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ ಆದೇಶ ಹೊರಡಿಸಿದ್ದಾರೆ.

## ಅಪರಿಚಿತ ವ್ಯಕ್ತಿ ಸಾವು

ನಂಜನಗೂಡು, ಆ.28– ಅಪರಿಚಿತ ವ್ಯಕ್ತಿಯೋರ್ವ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಾವನ್ನಪ್ಪಿದ್ದು, ನಂಜನಗೂಡು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇಲ್ಲಿನ ರೈಲ್ವೆ ಅಂಡರ್‌ಬ್ರಿಡ್ಜ್ ಬಳಿ ಬಿದ್ದಿದ್ದ ಸುಮಾರು 45 ವರ್ಷದ ಅಪರಿಚಿತ ವ್ಯಕ್ತಿಯನ್ನು 108 ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆ ತಂದಾಗ ವೈದ್ಯರು ಮಾರ್ಗಮಧ್ಯೆ ಸಾವನ್ನಪ್ಪಿರುವುದಾಗಿ ತಿಳಿಸಿದ್ದಾರೆ. ಬಿಳಿ ಬಣ್ಣದ ತುಂಬು ತೋಳಿನ ಶರ್ಟ್, ನೀಲಿ ಬಣ್ಣದ ಪ್ಯಾಂಟ್ ಧರಿಸಿರುವ ಈತನ ಬಲಕೈಯಲ್ಲಿ ಹಸಿರು ಬಣ್ಣದ ಕ್ರಿಶ್ಚಿಯನ್ ಸಿಂಬಲ್ ಹಚ್ಚೆ ಇದೆ. ವಾರಸುದಾರರು ಮೊ:08221–2520040, 2444800, 08221–228383 ಮೂಲಕ ಸಂಪರ್ಕಿಸಲು ಕೋರಲಾಗಿದೆ.

## ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | ಸೀತಾರಾಮಂ (ತೆ): ಬೆ.10.20ಕ್ಕೆ, ವಿಕಿಪೀಡಿಯಾ (ಕ): ಮ.1.30ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಸಂ.4.10ಕ್ಕೆ, ಗಾಳಿಪಟ –2 (ಕ): ರಾ.7.05ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಲವ್ 360 (ಕ): ಬೆ.10.20ಕ್ಕೆ, ಡೈರಿ (ತ): ಮ.1.05ಕ್ಕೆ, ಡ್ರ್ಯಾಗನ್ ಬಾಲ್ ಸೂಪರ್ (ಇಂ): ಮ.3.40ಕ್ಕೆ, ರಾ.7.50ಕ್ಕೆ, ಡ್ರ್ಯಾಗನ್ ಬಾಲ್ ಸೂಪರ್ (ಇಂ): ಸಂ.5.45ಕ್ಕೆ, ತಿರುಪ್ಪು (ಮ): ರಾ.10ಕ್ಕೆ. |
| ಸ್ಕ್ರೀನ್ 3 | ಶಿವ 143 (ಕ): ಬೆ.10.20ಕ್ಕೆ, ಸಂ.4ಕ್ಕೆ, ಡೊಳ್ಳು (ಕ): ಮ.1.25ಕ್ಕೆ, ಲೈಗರ್ (ಕ): ರಾ.7.10ಕ್ಕೆ, ಲೈಗರ್ (ಹಿಂ): ರಾ.10.05ಕ್ಕೆ. |
| ಸ್ಕ್ರೀನ್ 4 | ಲೈಗರ್ (ತೆ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10.05ಕ್ಕೆ. |

## ಐನಾಕ್ಸ್ ಮೂವೀಸ್

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಲೈಗರ್ (ತೆ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 2 | ಲೈಗರ್ (ತೆ): ಬೆ.10.50ಕ್ಕೆ, ಮ.1.45ಕ್ಕೆ, ಕೌಟಿಲ್ಯ (ಕ): ಸಂ.4.40ಕ್ಕೆ, ಲೈಗರ್ (ಹಿಂ): ರಾ.7.35ಕ್ಕೆ, ರಾ.10.30ಕ್ಕೆ. |
| ಸ್ಕ್ರೀನ್ 3 | ಗಾಳಿಪಟ 2 (ಕ): ಬೆ.10.30ಕ್ಕೆ, ಶಿವ 143 (ಕ): ಮ.1.35ಕ್ಕೆ, ರಾ.7.20ಕ್ಕೆ, ವಿಕಿಪೀಡಿಯಾ (ಕ): ಸಂ.4.35ಕ್ಕೆ, ಡೈರಿ (ತ): ರಾ.10.20ಕ್ಕೆ. |
| ಸ್ಕ್ರೀನ್ 4 | ಲವ್ 360 (ಕ): ಬೆ.11ಕ್ಕೆ, ಗಾಳಿಪಟ 2 (ಕ): ಮ.1.40ಕ್ಕೆ, ರಾ.7.05ಕ್ಕೆ, ಡೊಳ್ಳು (ಕ): ಸಂ.4.45ಕ್ಕೆ, ಸೀತಾರಾಮಂ (ತೆ): ರಾ.10.10ಕ್ಕೆ. |

## ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | ಲವ್ 360 (ಕ): ಬೆ.11ಕ್ಕೆ, ಲೈಗರ್ (ಕ): ಮ.1.45ಕ್ಕೆ, ಸಂ.6.45ಕ್ಕೆ, ಡೊಳ್ಳು (ಕ): ಸಂ.4.30ಕ್ಕೆ, ಲೈಗರ್ (ತೆ): ರಾ.9.30ಕ್ಕೆ. |
| ಸ್ಕ್ರೀನ್ 2 | ಲೈಗರ್ (ತೆ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.15ಕ್ಕೆ, ಲವ್ 360 (ಕ): ಸಂ.4.30ಕ್ಕೆ, ಸೊಲೊಮಂತೆ ತೇನಿಚಕಲ್ (ಮ): ರಾ.9.15ಕ್ಕೆ |
| ಸ್ಕ್ರೀನ್ 3 | ಗಾಳಿಪಟ–2 (ಕ): ಬೆ.10.30ಕ್ಕೆ, ಮ.1.30ಕ್ಕೆ, ಸಂ.4.35ಕ್ಕೆ, ರಾ.7.45ಕ್ಕೆ. |
| ಸ್ಕ್ರೀನ್ 4 | ಲೈಗರ್ (ತೆ): ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ಗಾಳಿಪಟ–2 (ಕ): ರಾ.9.30ಕ್ಕೆ. |

## ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಬೆ.9.10ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ರವಿ ಬೋಪಣ್ಣ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ಮ.3.50ಕ್ಕೆ, ರಾ.10.10ಕ್ಕೆ, ವಿರುಮನ್ (ತ): ಬೆ.9.30ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ಥಲ್ಲುಮಾಲ (ಮ): ಸಂ.4.10ಕ್ಕೆ, ಮಾರ್ಚೆಲಾ ನಿಯೋಜಕ ವರ್ಗಂ (ತೆ): ರಾ.9.40ಕ್ಕೆ, ಕಾರ್ತಿಕೇಯ–2(ತೆ): ಮ.12.20ಕ್ಕೆ, ರಕ್ಷಾಬಂಧನ್ (ಹಿಂ): ಬೆ.10.25ಕ್ಕೆ, ಮ.1.40ಕ್ಕೆ, ಸಂ.4.20ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.8.50ಕ್ಕೆ, ಮ.12.15ಕ್ಕೆ, ಮ.12.55ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ರಾ.10.30ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಲೈಗರ್ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ವಿಕ್ರಾಂತ್ ರೋಣ (ಕ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಮಿಸ್ ಮಲ್ಲಿಗೆ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಲೈಗರ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಶಿವ 1, 4, 3 (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಗಾಳಿಪಟ–2 (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ತಿರುಚಿಟ್ರಂಬಲಂ (ತ) | 4 ಪ್ರದರ್ಶನಗಳು |
| **ಸಂಗಂ** | |
| ಲೈಗರ್ (ತೆ) | 4 ಪ್ರದರ್ಶನಗಳು |
| **ಲಿಡೋ** | |
| ವಿಕಿಪೀಡಿಯಾ (ಕ) | 2 ಪ್ರದರ್ಶನಗಳು |
| ಡೈರಿ (ತ) | 2 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಗಾಳಿಪಟ –2(ಕ) | 4 ಪ್ರದರ್ಶನಗಳು |
| **ಸ್ಟರ್ಲಿಂಗ್** | |
| ಓ ಮೈ ಲವ್ (ಕ) | 4 ಪ್ರದರ್ಶನಗಳು |
| **ಸ್ಕೈಲೈನ್** | |
| ಅಂಜನ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಕೌಟಿಲ್ಯ (ಕ) | 4 ಪ್ರದರ್ಶನಗಳು |

# ಮೈಸೂರು ದಸರಾದಲ್ಲಿ ಜನಾಕರ್ಷಕ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಸಂಯೋಜನೆಗೆ ಸಿದ್ಧತೆ

**● ಹೊಸಬರಿಗೆ ಆದ್ಯತೆ ● 643 ಕಲಾವಿದರಿಂದ ಅರ್ಜಿ ಸಲ್ಲಿಕೆ ● ಹೊರ ರಾಜ್ಯಗಳ ಸಾಂಪ್ರದಾಯಿಕ ಕಲಾ ಪ್ರದರ್ಶನ**

● ಎಸ್.ಬಿ.ದೇವರಾಜ

ಮೈಸೂರು, ಆ.28– ಮೈಸೂರು ದಸರಾ ಮಹೋತ್ಸವದಲ್ಲಿ ಈ ಬಾರಿ ವೈವಿಧ್ಯಮಯ ಜನಾಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಯೋಜಿಸುವ ನಿಟ್ಟಿನಲ್ಲಿ ಸಿದ್ಧತೆ ನಡೆದಿದೆ.

ಕೊರೊನಾ ಪರಿಣಾಮ ಕಳೆದೆರಡು ವರ್ಷ ಅರಮನೆ ಮುಂಭಾಗದ ವೇದಿಕೆಯಲ್ಲಷ್ಟೇ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪ್ರೇಕ್ಷಕರ ಸಂಖ್ಯೆಯನ್ನೂ ಸೀಮಿತಗೊಳಿಸಲಾಗಿತ್ತು. ಆದರೆ ಈ ಬಾರಿ ಅರಮನೆ ಅಂಗಳದ ಪ್ರಧಾನ ವೇದಿಕೆ ಸೇರಿ 8 ವೇದಿಕೆಗಳಲ್ಲಿ ಸಾಂಸ್ಕೃತಿಕ ವೈಭವ ಮರುಕಳಿಸಲಿದ್ದು, ಆಸ್ವಾದಿಸಲು ಪ್ರೇಕ್ಷಕರು ಕಾತುರರಾಗಿದ್ದಾರೆ. ಜನಸಮೂಹದೆದುರು ಕಲಾಪ್ರದರ್ಶನಕ್ಕೆ ಕಲಾವಿದರು ಉತ್ಸುಕರಾಗಿದ್ದಾರೆ. ಮಿತವಾದ ಬಜೆಟ್‌ನಲ್ಲಿ ಜನರ ನಿರೀಕ್ಷೆಗೆ ತಕ್ಕಂತೆ ವೈವಿಧ್ಯಮಯವಾಗಿ ಕಾರ್ಯಕ್ರಮ ಸಂಯೋಜಿಸಲು ದಸರಾ ಸಾಂಸ್ಕೃತಿಕ ಉಪ ಸಮಿತಿ ಅವಿರತ ಪ್ರಯತ್ನದಲ್ಲಿ ತೊಡಗಿದೆ.

**ಹೊಸಬರಿಗೆ ಆದ್ಯತೆ:** ಮೂರು ವರ್ಷದಿಂದ ದಸರಾ ಮಹೋತ್ಸವದಲ್ಲಿ ಅವಕಾಶ ಸಿಗದ ಅರ್ಹ ಕಲಾವಿದರಿಗೆ ಈ ಬಾರಿ ಆದ್ಯತೆ ನೀಡಲು ಉಪ ಸಮಿತಿ ನಿರ್ಧರಿಸಿದೆ. ಪ್ರೇಕ್ಷಕರಿಗೆ ಏಕತಾನತೆ ಕಾಡದಂತೆ ಯೋಜಿತವಾಗಿ ಕಾರ್ಯಕ್ರಮಗಳನ್ನು ಜೋಡಿಸುವ ನಿಟ್ಟಿನಲ್ಲಿ ತಯಾರಿ ನಡೆಸಲಾಗಿದೆ ಅದರಲ್ಲೂ ಅರಮನೆ ಅಂಗಳದ ಪ್ರಧಾನ ವೇದಿಕೆಯಲ್ಲಿ ಕಲಾ ಪ್ರದರ್ಶನ ಮರುಕಳಿಸದಂತೆ ಸಂಗೀತ, ವಾದ್ಯ ಸಂಗೀತ ಹಾಗೂ ನೃತ್ಯ ಕಾರ್ಯಕ್ರಮಗಳನ್ನು ಸಂಯೋಜನೆ ಮಾಡಲು ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪ್ರಧಾನ ವೇದಿಕೆಯಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧರಾಗಿರುವ ಕಲಾವಿದರು ಹಾಗೂ ಕಲಾತಂಡಗಳಿಗೆ ಅವಕಾಶ ಮಾಡಿಕೊಡಲಾಗುತ್ತಿದ್ದು, ಈ ಸಂಬಂಧ ಪಟ್ಟಿ ಮಾಡುವ ಕಾರ್ಯ ನಡೆದಿದೆ.

**ಗುರುತಿಸಿ ಅವಕಾಶ:** ದಸರಾ ಸಾಂಸ್ಕೃತಿಕ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಲು ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿತ್ತು. ನಿನ್ನೆವರೆಗೆ ಸಂಗೀತ ಕಾರ್ಯಕ್ರಮಕ್ಕೆ ಅತೀ ಹೆಚ್ಚು 409, ನಾಟಕ ಪ್ರದರ್ಶನಕ್ಕೆ 96, ಕವಿಗೋಷ್ಠಿಗೆ 11, ನೃತ್ಯ ಪ್ರದರ್ಶನಕ್ಕೆ 114 ಅರ್ಜಿ ಸಲ್ಲಿಕೆಯಾಗಿವೆ. ಅಲ್ಲದೆ ಕಾರ್ಯಕ್ರಮಗಳ ನಿರೂಪಣೆಗೆ ಅವಕಾಶ ಕೋರಿ 17 ಮಂದಿ ಅರ್ಜಿ ಸಲ್ಲಿಸಿದ್ದಾರೆ ಒಟ್ಟಾರೆ 643 ಅರ್ಜಿಗಳನ್ನು ಉಪಸಮಿತಿ ಸ್ವೀಕರಿಸಿ ಪರಿಶೀಲನೆ ನಡೆಸಿದೆ. ಅರ್ಜಿಯಲ್ಲಿ ನಮೂದಿಸಿರುವ ಅಂಶಗಳನ್ನು ಅವಲೋಕಿಸಿ, ಆ ಕಲಾವಿದರು, ಕಲಾತಂಡಗಳ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಿ ಅರ್ಜಿಗಳನ್ನು 4 ಗುಂಪುಗಳಾಗಿ ವಿಂಗಡಿಸಲಾಗಿದೆ. ಇದಲ್ಲದೆ ಅರ್ಜಿ ಸಲ್ಲಿಸದಿರುವ ಪ್ರತಿಭಾನ್ವಿತ ಕಲಾವಿದರನ್ನು ಗುರುತಿಸಿ ಕಾರ್ಯಕ್ರಮ ನೀಡಲು ಆಹ್ವಾನಿಸುತ್ತಿರುವುದು ಈ ಬಾರಿಯ ವಿಶೇಷ. ಪ್ರತಿಭಾನ್ವಿತ ಕಲಾವಿದರ ಕಾರ್ಯಕ್ರಮದಿಂದ ಪ್ರೇಕ್ಷಕರು ವಂಚಿತರಾಗಬಾರದು ಎಂಬ ಉದ್ದೇಶದಿಂದ ಈ ಕಾರ್ಯಕ್ಕೆ ಉಪ ಸಮಿತಿ ಮುಂದಾಗಿದೆ. ಹೀಗೆ ಅರ್ಜಿ ಸಲ್ಲಿಸದ ಪ್ರತಿಭಾನ್ವಿತ ಕಲಾವಿದರೊಬ್ಬರನ್ನು ಪ್ರಧಾನ ವೇದಿಕೆಯಲ್ಲಿ ಕಾರ್ಯಕ್ರಮ ನೀಡಲು ಆಹ್ವಾನಿಸಲಾಗಿದೆ.

**ರಿಯಾಲಿಟಿ ಶೋ ಕಲಾವಿದರು:** ಕಿರುತೆರೆಯಲ್ಲಿ ಪ್ರಸಾರವಾಗುವ ವಿವಿಧ ರಿಯಾಲಿಟಿ ಶೋ ಕಲಾವಿದರು ದಸರಾ ಉತ್ಸವದಲ್ಲಿ ಭಾಗಿಯಾಗಲು ಅವಕಾಶ ಕೋರಿದ್ದಾರೆ. ಸಂಗೀತ, ನೃತ್ಯ, ನಾಟಕ ಇನ್ನಿತರ ರಿಯಾಲಿಟಿ ಶೋಗಳಲ್ಲಿ ಭಾಗವಹಿಸಿ ಚಿರ ಪರಿಚಿತರಾಗಿರುವವರು ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಅರ್ಜಿ ಸಲ್ಲಿಸಿದ್ದಾರೆ. ಇಂತಹ ಕಲಾ ವಿದರಿಗೆ ಒಂದು ಅವಧಿಯಲ್ಲಿ ಕಾರ್ಯಕ್ರಮ ರೂಪಿಸುವ ನಿಟ್ಟಿನಲ್ಲಿ ಉಪ ಸಮಿತಿ ಕಾರ್ಯೋನ್ಮುಖವಾಗಿದೆ.

**ಡಿಮ್ಯಾಂಡ್ ಮಾಡಿದರೆ ಬೇಡ:** ಅರಮನೆ ಪ್ರಧಾನ ಸಾಂಸ್ಕೃತಿಕ ವೇದಿಕೆಯಲ್ಲಿ ನಿತ್ಯ 3 ಅವಧಿಯಲ್ಲಿ ಕಾರ್ಯಕ್ರಮ ರೂಪಿಸಿ, ಕೊನೆಯಲ್ಲಿ ಅಂದಿನ ಆಕರ್ಷಕ ಕಾರ್ಯಕ್ರಮ ನಿಗದಿಪಡಿಸಲಾಗುತ್ತದೆ. ಆ ಅವಧಿಯಲ್ಲಿ ಪ್ರಸಿದ್ಧ ಕಲಾವಿದರು ಕಾರ್ಯಕ್ರಮ ನೀಡುತ್ತಾರೆ. ಆದರೆ ದಸರಾ ಉತ್ಸವದಲ್ಲಿ ಕಾರ್ಯಕ್ರಮ ನೀಡುವುದಕ್ಕೂ ಇಂತಿಷ್ಟೇ ಸಂಭಾವನೆ ಬೇಕೆಂದು ಪಟ್ಟು ಹಿಡಿಯುವ ಕಲಾವಿದರಿದ್ದಾರೆ. ಆದರೆ ಹೀಗೆ ಡಿಮ್ಯಾಂಡ್ ಮಾಡಿ ಪಟ್ಟು ಸಡಿಲಿಸದ ಕಲಾವಿದರಿಗೆ ಗಂಟುಬೀಳದೆ ಅವರಷ್ಟೇ ಅಥವಾ ಅವರಿಗಿಂತ ಮಿಗಿಲಾಗಿ ಕಲಾಪ್ರದರ್ಶನ ನೀಡಬಲ್ಲ ಕಲಾವಿದರನ್ನು ಗುರುತಿಸಿ ಅವಕಾಶ ಕಲ್ಪಿಸಲು ಉಪ ಸಮಿತಿ ತೀರ್ಮಾನಿಸಿದೆ. ಇನ್ನುಳಿದಂತೆ ಗಾನ ಭಾರತಿ, ನಾದಬ್ರಹ್ಮ, ಕಲಾಮಂದಿರ ಹಾಗೂ ಜಗನ್ಮೋಹನ ಅರಮನೆ ವೇದಿಕೆಯಲ್ಲಿ ಸಂಗೀತ, ಪುರಭವನದಲ್ಲಿ ಪೌರಾಣಿಕ ನಾಟಕ ಪ್ರದರ್ಶನ, ಕಿರು ರಂಗಮಂದಿರದಲ್ಲಿ ಆಧುನಿಕ ನಾಟಕ, ಚಿಕ್ಕಗಡಿಯಾರ ವೇದಿಕೆಯಲ್ಲಿ ಜನಪದ ಕಾರ್ಯಕ್ರಮಗಳಿಗೂ ಇದೇ ಮಾನದಂಡ ಅನುಸರಿಸಲು ನಿರ್ಣಯಿಸಲಾಗಿದೆ.

**ಸಾಂಸ್ಕೃತಿಕ ಕೇಂದ್ರಗಳಿಗೆ ಪತ್ರ:** ವಿವಿಧ ರಾಜ್ಯಗಳ ಕಲಾತಂಡಗಳು ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಾರೆ. ಆದರೆ ಮೊದಲ ಬಾರಿಗೆ ನಾಗ್ಪುರದ ಸೌತ್ ಸೆಂಟ್ರಲ್ ಜೋನ್ ಕಲ್ಚರಲ್ ಸೆಂಟರ್‌ಗೆ ಪತ್ರ ಬರೆದು ಕಲಾತಂಡಗಳ ಕಳುಹಿಸುವಂತೆ ಮನವಿ ಮಾಡಲಾಗಿದೆ. ಜೊತೆಗೆ ಎಂದಿನಂತೆ ತಂಜಾವೂರ್‌ನ ಸೌತ್ ಜೋನ್ ಕಲ್ಚರಲ್ ಸೆಂಟರ್‌ಗೂ ಪತ್ರ ಬರೆಯಲಾಗಿದೆ ಹಾಗಾಗಿ ದೆಹಲಿ, ರಾಜಸ್ಥಾನ, ಪಂಜಾಬ್, ಒರಿಸ್ಸಾ ಪಶ್ಚಿಮ ಬಂಗಾಳ ಇನ್ನಿತರ ರಾಜ್ಯಗಳ ಸಾಂಪ್ರದಾಯಿಕ ಕಲಾ ಪ್ರದರ್ಶನ ದಸರಾದಲ್ಲಿ ಮೇಳೈಸಲಿದೆ.

**ಸೂರ್ಯೋದಯ–ಸೂರ್ಯಾಸ್ತ:** ಈ ಬಾರಿಯೂ ಒಂದು ದಿನ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಕಾರ್ಯಕ್ರಮ ಸಂಯೋಜಿಸಲಾಗುತ್ತಿದೆ. ಬೆಳಗ್ಗೆ 6ರಿಂದ ಸಂಜೆ 6ರವರೆಗೆ 24 ವೈವಿಧ್ಯಮಯ ಕಾರ್ಯಕ್ರಮಗಳನ್ನು ಜೋಡಿಸಿ, ಪ್ರೇಕ್ಷಕರಿಗೆ ಉಣಬಡಿಸಲಾಗುತ್ತದೆ. ಅ.2ರಂದು(ಭಾನುವಾರ) ಈ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಚರ್ಚೆ ನಡೆದಿದೆಯಾದರೂ ಜಿಲ್ಲಾ ಉಸ್ತುವಾರಿ ಸಚಿವರ ಅನುಮತಿ ಪಡೆದು ಅಂತಿಮವಾಗಿ ದಿನಾಂಕ ನಿರ್ಧರಿಸಲಾಗುತ್ತದೆ. ಒಂದು ದಿನ 2 ಅವಧಿಯಲ್ಲಿ ಪ್ರಸಿದ್ಧ ಪೊಲೀಸ್ ಬ್ಯಾಂಡ್ ಕಾರ್ಯಕ್ರಮ ನಡೆಯಲಿದ್ದು, ಇದಕ್ಕೆ ದಿನಾಂಕ ನಿಗದಿಗೊಳಿಸಬೇಕಿದೆ.



ಫೈಲ್ ಚಿತ್ರ

### ಸೆ.26ರಿಂದ ಅ.4ರವರೆಗೆ ಸಾಂಸ್ಕೃತಿಕ ಸಂಭ್ರಮ

ಅರಮನೆ ಮುಂಭಾಗದ ಪ್ರಧಾನ ವೇದಿಕೆಯಲ್ಲಿ ಸೆ.26ರಂದು ಮುಖ್ಯಮಂತ್ರಿಗಳು ಈ ಬಾರಿಯ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಧ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ. ಆ ವೇಳೆ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನವೂ ನೆರವೇರಲಿದೆ. ಅರಮನೆ ವೇದಿಕೆಯ ಕಾರ್ಯಕ್ರಮ ಅ.3ರಂದು ಮುಕ್ತಾಯವಾಗಲಿದ್ದು, ಇನ್ನುಳಿದ ವೇದಿಕೆಗಳಲ್ಲಿ ಅ.4ರವರೆಗೆ ಕಾರ್ಯಕ್ರಮ ನಡೆಯಲಿದೆ. ಹಿಂದಿನ ಬಜೆಟ್ ಮೀರದಂತೆ ಈ ಬಾರಿ ಸಾಂಸ್ಕೃತಿಕ ಕಾರ್ಯಕ್ರಮ ಸಂಯೋಜಿಸಲು ನಿರ್ಧರಿಸಲಾಗಿದೆ. ಹಾಗಾಗಿ 3 ಕೋಟಿ ರೂ. ಅಂದಾಜು ಮೊತ್ತದ ಪ್ರಸ್ತಾವನೆ ಸಿದ್ಧಪಡಿಸಲಾಗಿದೆ. ಆದರೆ ಜನರ ನಿರೀಕ್ಷೆಯಂತೆ ಉತ್ತಮ ರೀತಿಯ ವೈವಿಧ್ಯಮಯ ಕಾರ್ಯಕ್ರಮ ಸಂಯೋಜಿಸುವುದು ಹಾಗೂ ಕಲಾವಿದರಿಗೆ ಗೌರವಯುತ ಸಂಭಾವನೆ ನೀಡಬೇಕೆನ್ನುವುದು ಉಪಸಮಿತಿ ಆಶಯವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಯುವ ಸಭೆಯಲ್ಲಿ ಎಲ್ಲಾ ವಿಚಾರಗಳ ಬಗ್ಗೆ ಚರ್ಚಿಸಬೇಕಿದೆ.



-ಡಾ.ಎಂ.ಡಿ.ಸುದರ್ಶನ್, ಸಹಾಯಕ ನಿರ್ದೇಶಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ

### ಅಮೃತ ಭಾರತಿಗೆ ಕನ್ನಡದ ಆರತಿ

ಸ್ವಾತಂತ್ರ್ಯ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ದಸರಾ ಮಹೋತ್ಸವದಲ್ಲೂ ವಿಶೇಷ ಕಾರ್ಯಕ್ರಮ ಆಯೋಜನೆಗೆ ಚಿಂತನೆ ನಡೆದಿದೆ. ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ ದಿನ 'ಅಮೃತ ಭಾರತಿಗೆ ಕನ್ನಡದ ಆರತಿ' ಶೀರ್ಷಿಕೆಯಡಿ 'ಸ್ವಾತಂತ್ರ್ಯ ಸಂಭ್ರಮದಾತೆ ನೃತ್ಯ ರೂಪಕ' ಪ್ರಸ್ತುತಿಗೆ ಕಲಾ ತಂಡಗಳ ಹುಡುಕಾಟ ನಡೆದಿದೆ. ಈ ವಿಶೇಷ ಕಾರ್ಯಕ್ರಮದಲ್ಲಿ 60–70 ಕಲಾವಿದರು ಭಾಗಿಯಾಗುವ ಸಾಧ್ಯತೆ ಇದ್ದು, ವಿದ್ವತ್ ಕಲಾವಿದರಿಗೆ ಅವಕಾಶ ಕಲ್ಪಿಸಲು ಯೋಜಿಸಲಾಗಿದ್ದು, ಈಗಾಗಲೇ ಮೂರ್‍ನಾಲ್ಕು ತಂಡಗಳನ್ನು ಗುರುತಿಸಲಾಗಿದೆ. ಆದರೆ ಈ ಕಾರ್ಯಕ್ರಮದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ನಿರ್ಧರಿಸಲಿದ್ದಾರೆ ಎಂದು ದಸರಾ ಸಾಂಸ್ಕೃತಿಕ ಉಪಸಮಿತಿ ಸದಸ್ಯ ಕಾರ್ಯದರ್ಶಿಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ತಿಳಿಸಿದ್ದಾರೆ.

# ನಮ್ಮ ಸಮುದಾಯದವರೇ ನಮ್ಮ ಕಾಲು ಎಳೆಯುತ್ತಿದ್ದಾರೆ

### ಶಾಸಕ ಸಿ.ಎಸ್. ಪುಟ್ಟರಾಜು ಬೇಸರ



ಮೈಸೂರು, ಆ.28(ಜಿಎ)– ನಮ್ಮ ಸಮುದಾಯದವರೇ ನಮ್ಮ ಕಾಲು ಎಳೆಯುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ ಮೇಲುಕೋಟೆ ಶಾಸಕ ಸಿ.ಎಸ್. ಪುಟ್ಟರಾಜು, ಈ ಸಂಬಂಧ ನಮ್ಮ ಮುಖಂಡರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುವವರಿಗೆ ನೀವು ಎಚ್ಚರಿಸಿ ಎಂದು ಆದಿಚುಂಚನಗಿರಿ ಮಠದ ಹಿಂದಿನ ಪೀಠಾಧ್ಯಕ್ಷರಾಗಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರಿಗೆ ತಿಳಿಸಿದ್ದೆ ಎಂದರು

ಮೈಸೂರಿನ ವಿಜಯನಗರದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಮಹಾ ಸಭಾ ಮತ್ತು ಶ್ರೀ ಪುರುಷ ಸಾಂಸ್ಕೃತಿಕ ಸಮಿತಿ ವತಿಯಿಂದ ಆಯೋಜಿಸಿದ್ದ ಕನ್ನಡ ದೇಶದೊಳ್ ಮಾಸ ಪತ್ರಿಕೆ ಹಾಗೂ ಶ್ರೀ ಪುರುಷ ಸಾಂಸ್ಕೃತಿಕ ಸಮಿತಿ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕನ್ನಡ ದೇಶದೊಳ್ ಮಾಸ ಪತ್ರಿಕೆಯು ಒಕ್ಕಲಿಗ ಸಮುದಾಯದ ಶ್ರೀರಕ್ಷೆಯಾಗಲಿದ್ದು, ರಾಜ್ಯದಲ್ಲಿ ಬೇರೆ ಸಮುದಾಯಗಳಿಗೆ ಹೋಲಿಸಿದರೆ, ಒಕ್ಕಲಿಗ ಸಮುದಾಯವು ಗ್ರಾಮಾಂತರ ಪ್ರದೇಶದಲ್ಲಿ ಒಕ್ಕಲುತನ ಮಾಡುವುದರಲ್ಲಿ ಎಲ್ಲಾ ಸಮುದಾಯವನ್ನು ಸರಿದೂಗಿಸಿಕೊಂಡು ಮಹತ್ತರವಾಗಿ ನಡೆಸಿಕೊಂಡು ಬರುತ್ತಿದ್ದೇವೆ ಎಂದರು.

ನಿಮ್ಮ ಸಮುದಾಯದವರೇ ನಿಮ್ಮವರ ಕಾಲು ಎಳೆಯುತ್ತಾರೆ ಎಂದು ಅನೇಕರು ಹೇಳುತ್ತಾರೆ. ಅದನ್ನು ನಾನು ಈ ಹಿಂದೆ ನಮ್ಮ ಬಾಲಗಂಗಾಧರನಾಥ ಸ್ವಾಮೀಜಿ ಅವರಿಗೆ ತಿಳಿಸಿದೆ. ರಾಜಕೀಯವಾಗಿ ಏನಾದರೂ ಹೇಳಿಕೊಡಲಿ ಆದರೆ, ನಮ್ಮ ಸಮುದಾಯದ ಮುಖಂಡರು ನಮ್ಮವರ ಕಾಲು ಎಳೆಯುವುದರ ಮೂಲಕ ಸವಾರಿ ಮಾಡುತ್ತಿದ್ದಾರೆ. ಅಂತಹವರಿಗೆ ಎಚ್ಚರಿಸಿ ಎಂದು ತಿಳಿಸಿದರು.

ಪ್ರತಿ ವರ್ಷ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಕ್ಕಲಿಗರನ್ನು ಒಗ್ಗೂಡಿಸುವ ಕಾರ್ಯಕ್ರಮಗಳು ನಡೆಯುತ್ತಿದ್ದು, ಪ್ರತಿ ವರ್ಷ ನಾನು ಸಹ ಅಮೇರಿಕದಲ್ಲಿ ನಡೆಯುವ ಒಕ್ಕಲಿಗರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೇನೆ. ಸ್ಥಳೀಯ ಮಟ್ಟದಲ್ಲಿ ನಡೆಯುವ ಈ ರೀತಿ ಕಾರ್ಯಕ್ರಮಗಳು ಒಕ್ಕಲಿಗರನ್ನು ಒಗ್ಗೂಡಿ ಸುವಲ್ಲಿ ಪ್ರಮುಖ ಪಾತ್ರವಹಿಸಲಿದೆ ಎಂದು ತಿಳಿಸಿದರು.

ಇದೇ ವೇಳೆ ಮಾಸ ಪತ್ರಿಕೆ ಬಿಡುಗಡೆ ಮಾಡಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ದೇಜಗೌ, ರಾಷ್ಟ್ರಕವಿ ಕುವೆಂಪು ನಂತರ ಸಿಪಿಕೆ ಅವರು ಒಕ್ಕಲಿಗರ ಇತಿಹಾಸವನ್ನು ಸಾರುವ ಕೆಲಸಕ್ಕೆ, ಈ ರೀತಿಯ ಪ್ರಯತ್ನಕೆ ಮುಂದಾಗಿರುವುದು ಸಂತಸದ ವಿಚಾರವಾಗಿದೆ. ಗುಂಗ್ರಾಲ್ ಛತ್ರ ಪ್ರದೇಶದಲ್ಲಿ ಗಂಗರಾಜ ಎಂಬ ಪಾಳೇಗಾರ ಆಳ್ವಿಕೆ ನಡೆಸುತ್ತಿದ್ದ ಎಂದು ಮಾಹಿತಿ ಇದ್ದು, ಪುರಾತತ್ವ ಇಲಾಖೆಗೆ ಅಲ್ಲಿ ಸಂಶೋಧನೆ ನಡೆಸಲು ತಿಳಿಸಿದ್ದೇನೆ. ಅದರ ಪ್ರಕ್ರಿಯೆ ನಡೆಯುತ್ತಿದ್ದು, ಅದರ ಬಗ್ಗೆ ಯಾವುದೇ ಕುರುಹು ಸಿಕ್ಕಿಲ್ಲ. ಈಗಾಗಲೇ ನಮ್ಮ ಸಮುದಾಯ ಮುಂದಿನ ಪೀಳಿಗೆಗೆ ಒಂದು ಬುನಾದಿಯನ್ನು ಸಿದ್ಧಪಡಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಎಲ್.ನಾಗೇಂದ್ರ ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ, ಮಾತನಾಡಿದರು. ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್, ಡಾ.ಬಿ.ಎನ್. ರವೀಶ್, ಕೆ.ದೇವೇಗೌಡ, ಎನ್. ಬೆಟ್ಟೇಗೌಡ, ವಸಂತ ಮುನೀಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಆಮಿಷಕ್ಕೆ ಬಲಿಯಾಗದಿದ್ದಾಗ ಮಾತ್ರ ಭ್ರಷ್ಟಾಚಾರ ನಿಯಂತ್ರಣ

### ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ಅಭಿಮತ



ಮೈಸೂರು, ಆ.28(ಎಸ್‌ಪಿಎನ್)– ಮತದಾರರು ಚುನಾವಣೆಯಲ್ಲಿ ಯಾವುದೇ ಆಮಿಷಗಳಿಗೆ ಬಲಿಯಾಗದೇ ಉತ್ತಮ ಚಾರಿತ್ರ್ಯವುಳ್ಳ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿದರೆ ಮಾತ್ರ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸಾಧ್ಯ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜು ಅಭಿಪ್ರಾಯಪಟ್ಟರು.

ಮೈಸೂರು ಶಾರದಾದೇವಿನಗರದ ರೈಲ್ವೆ ಬಡಾವಣೆಯಲ್ಲಿರುವ ಶರಣು ಕುಟೀರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾರ್ವಜನಿಕರು ಸರ್ಕಾರಿ ಕಚೇರಿಗಳಲ್ಲಿ ಯಾವುದೇ ಕೆಲಸ ಮಾಡಿಸಿಕೊಳ್ಳಲು ಲಂಚ ಕೊಡುವುದಿಲ್ಲ ಎಂದು ಪ್ರತಿಯೊಬ್ಬರೂ ಗಟ್ಟಿ ನಿರ್ಧಾರ ಮಾಡಿ ಅದರಂತೆ ನಡೆಯಬೇಕು. ಆಗ ಮಾತ್ರ ಭ್ರಷ್ಟಾಚಾರ ವಿರುದ್ಧ ದನಿಯೆತ್ತಲು ಸಾಧ್ಯ ಎಂದರು.

ನಂತರ ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಾದ ಹೆಮ್ಮನಹಳ್ಳಿ ರಕ್ಷಿತ, ಪ್ರಿಯಾಂಕ, ಆನಗಟ್ಟಿ ಮಾದೇಶ್‌ಕುಮಾರ್, ತೆರಣಿಮುಂಟಿ ರಕ್ಷಿತ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಮರಿಮಲ್ಲಪ್ಪ ಪದವಿಪೂರ್ವ ಕಾಲೇಜಿನ ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕರಾದ ವಚನ ಕುಮಾರಸ್ವಾಮಿ, ಸಾಹಿತಿ ಅಕ್ಕ ನೀಲಾಂಬಿಕೆ, ಶರಣೆ ರೂಪ ಕುಮಾರಸ್ವಾಮಿ, ಕವಯತ್ರಿ ನಳಿನ ಚಂದ್ರಶೇಖರ್, ಮಂಜುಳ ಶಿವಪ್ರಸಾದ್, ಕಲ್ಯಾಣಿ ನಟರಾಜು, ಕೃಷಿ ವಿಜ್ಞಾನಿ ಎಚ್.ಸಿ.ಉಮೇಶ್, ವಕೀಲ ರವಿಕುಮಾರ್, ವಿ. ಲಿಂಗಣ್ಣ, ಶಿವಪುರ ಉಮಾಪತಿ, ಲಲಿತ ಶಿವಣ್ಣ ಸಿದ್ಧರಾಜು, ಆನಗಟ್ಟಿ ಶಿವರುದ್ರಪ್ಪ, ಮಲ್ಲಿಕಾರ್ಜುನ, ಮಲ್ಲೇಶ್, ಬಸವರಾಜು, ಪ್ರಭುಸ್ವಾಮಿ, ಪರಶಿವಮೂರ್ತಿ, ಸೌಭಾಗ್ಯಮ್ಮ, ಸಿದ್ಧೇಶ್ವರಿ, ಅಮೃತ, ತನು, ಮನಿಷ, ಸಹನ ಉಪಸ್ಥಿತರಿದ್ದರು.

# ಮಕ್ಕಳ ಪ್ರತಿಭೆ ಪ್ರೋತ್ಸಾಹಿಸಿದರೆ ಭವಿಷ್ಯದಲ್ಲಿ ಉತ್ತಮ ಪರಿಣಾಮ

### ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್ ಕುಮಾರ್ ಅಭಿಮತ



ಮೈಸೂರು, ಆ.28(ಎಸ್‌ಪಿಎನ್)– ಚಿಕ್ಕ ವಯಸ್ಸಿನ ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸಿದರೆ ಭವಿಷ್ಯದಲ್ಲಿ ಆ ವಿದ್ಯಾರ್ಥಿಗಳ ವ್ಯಕ್ತಿತ್ವ ಮತ್ತು ಸಾಧನೆ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ ಎಂದು ಮೈಸೂರು ವಿವಿ ಕುಲಪತಿ ಪ್ರೊಜಿ. ಹೇಮಂತ್ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದಲ್ಲಿರುವ ವೀಣೆಶೇಷಣ್ಣ ಭವನದಲ್ಲಿ ಗಾನಭಾರತಿ ಟ್ರಸ್ಟ್ ವತಿಯಿಂದ ಶ್ರೀ ಕೃಷ್ಣ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ವಿತರಿಸಿ ಹಾಗೂ ಹಿರಿಯ ಕಲಾವಿದರನ್ನು ಅಭಿನಂದಿಸಿ ಮಾತನಾಡಿದರು.

ಮೈಸೂರಿನ ವಿವಿಯ ಘಟಿಕೋತ್ಸವದಲ್ಲಿ ಪ್ರತಿ ವರ್ಷ ಹೆಚ್ಚು ಅಂಕಗಳಿಸಿದ 950ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸುತ್ತೇವೆ. ಆದರೆ, ಇಂದು ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಪುಟಾಣಿಗಳಿಗೆ ವಿತರಿಸುವುದರಲ್ಲಿ ಇರುವ ಅನುಭವ ಆ ಸಮಾರಂಭದಲ್ಲಿ ಇರುವುದಿಲ್ಲ. ಹಾಗಾಗಿ ಈ ವೇದಿಕೆಯಲ್ಲಿ ಪ್ರಮಾಣ ಪತ್ರ ಪಡೆದ ಭವಿಷ್ಯದ ಮಕ್ಕಳು, ವಿವಿಧ ಕೌಶಲಗಳ ಮೂಲಕ ಅಧ್ಯಯನಕ್ಕೂ ಹೆಚ್ಚು ಒತ್ತು ನೀಡಿ, ಮುಂದಿನ ದಿನಗಳಲ್ಲಿ ಮೈಸೂರಿಗೂ ಕೀರ್ತಿ ತಂದು ಕೊಡುತ್ತಾರೆ ಎಂದು ಹೇಳಿದರು.

**ಕಲಾವಿದರಿಗೆ ಸನ್ಮಾನ:** ಹಿರಿಯ ಕಲಾವಿದರಾದ ವಿದುಷಿ ಗೀತಾ ರಮಾನಂದ (ವೀಣೆ), ವಿದ್ವಾನ್ ಎಂ.ಎಲ್.ಕೃಷ್ಣಸ್ವಾಮಿ, ವಿದ್ವಾನ್ ಜಿ.ಎಸ್.ರಾಮಾನುಜನ್ (ಮೃದಂಗ), ವಿದ್ವಾನ್ ಪ್ರೊ.ಕೆ.ರಾಮಮೂರ್ತಿ ರಾವ್(ಭರತ ನಾಟ್ಯ), ವಿದ್ವಾನ್ ಪ್ರೊ.ಅರವಿಂದ ಹೆಬ್ಬಾರ್( ಕಲಾ ವಿಮರ್ಶಕ) ಅವರನ್ನು ಸನ್ಮಾನಿಸಲಾಯಿತು.

**ಪ್ರಶಸ್ತಿ ಪ್ರದಾನ:** ಶ್ರೀ ಕೃಷ್ಣ ಜಯಂತಿ ಅಂಗವಾಗಿ ನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಆರ್.ಅವ್ಯುತ , ಪಿ.ಪ್ರಣತಿ, ಆಯುಷಿ ಸಂತೋಷ್, ಎನ್. ಶ್ರೀಧಾಮ ಸಿಂಹ, ಎಚ್.ರಿಷಿ, ಶರವಾಣಿ ಎಂ.ಜಾದರ್, ಹಿತಶ್ರೀ, ಸುರುಬಿ ದೇಶಪಾಂಡೆ, ಎಸ್.ಚಂದ್ರಕಲಾ, ಚನನ್, ಲಿಶಿತ ಅವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಜ್ಯೂನಿಯರ್ ವಿಭಾಗದಲ್ಲಿ ಸಿ.ಆರ್. ಸುಘೋಷ್, ಹೆಚ್. ರೇಖಾರಾವ್, ಅಭಿಜ್ಞಾ ಅಘಾಲಯಮ್, ಶ್ರೀರಂಗ ವಿ.ಚಕ್ರವರ್ತಿ, ಸಿ.ವಿ.ಶ್ರೀಲಕ್ಷ್ಮಿ, ಕೆ.ಕೆ.ವೈಭವಿ, ಎಸ್.ಭುವನ್, ಎನ್.ಸ್ಕಂದ, ಎಸ್.ಸುದಿಕ್ಷಾ, ಚರವಿ ಸತೀಶ್, ಪೂರ್ವ ಕಲ್ಯಾಣಿ ದೀಕ್ಷಿತ್, ಆಯುಷ್ ಪಿ. ಭಟ್, ವೈದಿಕ್ ಶಾಲಿನಿ ಶೆಟ್ಟಿ ಅವರಿಗೆ ಪ್ರಶಸ್ತಿ ವಿತರಿಸಿ ಗೌರವಿಸಲಾಯಿತು.


17–25 ವರ್ಷದ ಸೀನಿಯರ್ ವಿಭಾಗದ ಎನ್.ಶಶಾಂಕ್, ನಯನ ನಾಗರಾಜ್, ಡಿ.ಪೂರ್ವಿತಾ, ಸಿ.ಎಸ್.ಶ್ರೇಯಾ, ಹೆಚ್.ವಿ. ಶಮಾ, ಎ.ಪಿ.ಅಮೋಘ್ ಕಶ್ಯಪ್, ನಿಹಾಲ್ ಪ್ರಕಾಶ್, ಪಿ.ಪ್ರಣವ್, ಆರ್.ಅನಿರುದ್ಧ ರಾಮನಾಥನ್, ಸ್ಕಂದ ಪಿ.ಕುಮಾರ್, 25–40 ವರ್ಷದ ಸೀನಿಯರ್ ವಿಭಾಗದ ಎಸ್.ಆರ್.ಅಪ್ರಮೇಯ ಕಾರ್ತಿಕ್, ಟಿ.ಎಸ್.ಸೌಮ್ಯ, ಬಿ.ಅನಘ ಅವರು ಪ್ರಶಸ್ತಿ ಪಡೆದಿದ್ದಾರೆ. 41 ವರ್ಷದ ಸೀನಿಯರ್ ವಿಭಾಗದ ಶುಭ ಶ್ರೀಧರ್ ಸ್ವಾಮಿ, ರಜನಿ ಲೋಕೇಶ್, ಕೆ.ವಿನುತ ಭಟ್, ವೀಣಾ ಬಹುಮಾನ ಪಡೆದಿದ್ದಾರೆ.

ಶ್ರೀ ಕೃಷ್ಣ ಜಯಂತಿ ಅಂಗವಾಗಿ ಕಲಾವಿದ ಸತ್ಯನಾರಾಯಣರಾಜು ಅವರಿಂದ ಭರತನಾಟ್ಯ, ವಿದ್ವಾನ್ ಡಿ.ಎಸ್.ಶ್ರೀವತ್ಸ ಅವರಿಂದ ಹಾಡುಗಾರಿಕೆ ನಡೆಸಿಕೊಟ್ಟರು. ಇವರಿಗೆ ನಿಖಿತ ಮಂಜುನಾಥ್ ನಟುವಾಂಗ, ವಿದ್ವಾನ್ ಜಿ.ಎಸ್.ನಾಗರಾಜ್ ಮೃದುಂಗ, ವಿದ್ವಾನ್ ಕಾರ್ತಿಕ್ ಸಾತವಳ್ಳಿ ಅವರು ಕೊಳಲು ನುಡಿಸಿ ಸಾಥ್ ನೀಡಿದರು. ಈ ವೇಳೆ ಗಾನ ಭಾರತಿ ಅಧ್ಯಕ್ಷ ಡಾ.ರಮಾ ವಿ.ಬೆಣ್ಣೂರ್, ಮಹಾಪೋಷಕ ಡಾ.ಸಿ.ಜಿ.ನರಸಿಂಹನ್, ಉಪಾಧ್ಯಕ್ಷ ಹೆಚ್.ಆರ್.ಸುಂದರೇಶನ್ ಕಾರ್ಯಕಾರಿ ಸಮಿತಿ ಸದಸ್ಯ ಡಾ.ಕೃಪಾ ಫಡ್ಕೆ ಉಪಸ್ಥಿತರಿದ್ದರು.

# ಜಮ್ಮು–ಕಾಶ್ಮೀರದಲ್ಲಿ ಹೊಸ ಪಕ್ಷ ಸ್ಥಾಪಿಸುವೆ

### ಗುಲಾಂ ನಬಿ ಆಜಾದ್ ಘೋಷಣೆ

ಬೆಂಗಳೂರು, ಆ.28– ಹಿರಿಯ ನಾಯಕ ಗುಲಾಂ ನಬಿ ಆಜಾದ್ ತಮ್ಮ ತವರು ರಾಜ್ಯ ಜಮ್ಮು ಮತ್ತು ಕಾಶ್ಮೀರದಲ್ಲಿ ತಮ್ಮದೇ ಹೊಸ ಪಕ್ಷ ಸ್ಥಾಪಿಸುವುದಾಗಿ ಘೋಷಿಸಿದ್ದಾರೆ.



ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ ಹೊರ ಬಂದಿರುವ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರ ಮುಂದಿನ ನಡೆ ಏನು ಎಂಬುದು ಸಾಕಷ್ಟು ಕುತೂಹಲ ಮೂಡಿಸಿತ್ತು. ಇದೀಗ ಅವರು ತಮ್ಮ ಮುಂದಿನ ತೀರ್ಮಾನ ಘೋಷಿಸಿದ್ದಾರೆ. ರಾಜ್ಯ ಜಮ್ಮು ಮತ್ತು ಕಾಶ್ಮೀರದಲ್ಲಿ ತಮ್ಮದೇ ಹೊಸ ಪಕ್ಷ ಸ್ಥಾಪಿಸುವುದಾಗಿ ಘೋಷಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಈ ವರ್ಷದ ಕೊನೆಯಲ್ಲಿ ಅಥವಾ ಮುಂದಿನ ವರ್ಷದಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ.

ಗುಲಾಂ ನಬಿ ಆಜಾದ್ ಬಿಜೆಪಿ ಸೇರ್ಪಡೆಯಾಗಲಿದ್ದಾರೆ ಎಂಬ ವದಂತಿಗಳು ಹರಡಿವೆ. ಆದರೆ ಇವುಗಳನ್ನು ನಿರಾಕರಿಸಿರುವ ಆಜಾದ್, ನಾನು ಜಮ್ಮು–ಕಾಶ್ಮೀರಕ್ಕೆ ಹೋಗುತ್ತೇನೆ. ರಾಜ್ಯದಲ್ಲಿ ನನ್ನದೇ ಪಕ್ಷ ಸ್ಥಾಪನೆ ಮಾಡುತ್ತೇನೆ. ರಾಷ್ಟ್ರೀಯ ಸಾಧ್ಯತೆಗಳನ್ನು ಬಳಿಕ ಪರಿಶೀಲಿಸುತ್ತೇನೆ ಎಂದು ಸ್ಪಷ್ಟನೆ ನೀಡಿದ್ದಾರೆ.



18ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಜಯಲಕ್ಷ್ಮಿ

ನಿಧನ: 29.08.2004

ನೀವು ನಮ್ಮನ್ನಗಲಿ 18 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಚಿರಸ್ಥಾಯಿಯಾಗಿರುತ್ತದೆ. ಇಂತಿ: ಮಕ್ಕಳು, ಮಗಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದಿಂದ ಗೌರವ ನಮನ

# 477, ಹೆಬ್ಬಾಳು, ಮೈಸೂರು

3ನೇ ವರ್ಷದ ಸವಿನೆನಪು



ಶ್ರೀ ಬಿ.ನಿಂಗೇಗೌಡ

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಕುಟುಂಬ ವರ್ಗದವರು ಹಾಗೂ ಡಿ.ಸಾಲುಂಡಿ, ಗ್ರಾಮಸ್ಥರು




13ನೇ ವರ್ಷದ ಪುಣ್ಯಸ್ಮರಣೆ



ಜನನ: 08.06.1948 ಬಸಪ್ಪ ಮರಣ: 29.08.2009

ಸದಾ ನಿಮ್ಮ ನೆನಪಿನಲ್ಲಿರುವ ರತ್ನಬಸಪ್ಪ ಹಾಗೂ ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಎಂ.ಎಸ್. ಸವಿತಾ ಸುರೇಂದ್ರ

ಇವರು ದಿನಾಂಕ 19.08.2022 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 29.08.202 ಸೋಮವಾರ ಮಧ್ಯಾಹ್ನ 12.00 ಗಂಟೆಗೆ ನಮ್ಮ ಸ್ವಗೃಹ #1530, 3ನೇ ಮೇನ್, 6ನೇ ಕ್ರಾಸ್, 2ನೇ ಹಂತ, ವಿಜಯನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ರತ್ನಮ್ಮ, ಶ್ರೀ ಸುರೇಂದ್ರ ಹೆಚ್.ಆರ್, ಶ್ರೀಮತಿ ರಕ್ಷ ಮತ್ತು ಶ್ರೀ ಅಕ್ಷಯ್ ಹಾಗೂ ಕುಟುಂಬವರ್ಗದವರು.

**IN THE COURT OF THE HON'BLE FIRST ADDL. SENIOR CIVIL JUDGE AT MYSURU**

**O.S.No. 501 / 2021**

**PLAINTIFF : Smt. Nagarathna, W/o Rangappa, aged about 53 years, R/at D.No.1512, 1st Cross, Soppinakeri, Mandi Mohalla, Mysuru.**

**Vs.**

**DEFENDANTS: Smt. Lakshmamma and others.**

1) Smt. Lakshmamma, D/o Late C.Narasimhaiah, W/o Chikkamari, aged about 69 years. (7) Smt. Neelavathi, D/o Late Cheluvaiah, aged about 54 years. (8) Smt. Kamalamma, D/o Late Cheluvaiah, aged about 50 years. (11) Sri Krishnappa, S/o Late Narasimhaiah, aged about 54 years. (12) Sri Sathyanarayana, S/o Late Narasimhaiah, aged about 50 years. (13) Sri Cheluvaraju, S/o Late Narasimhaiah, aged about 48 years. (14) Smt. Shashikala, W/o Sathyanarayana, aged about 46 years. (15) Sri Ashoka, S/o Late Narasimhaiah, aged about 44 years. (16) Smt. Nagarathna @ Rathi, W/o Mahesha, Aged about 43 years. Defendant No. 1, 7, 8, 11 to 16, are residing at No. 1409/5, D-1, Kothwala Ramaiah Street, Devaraja Mohalla, Mysuru. (18) Smt. Shobha, D/o Late Anneswamy, aged about 46 years. (20) Smt. Latha, D/o Late Anneswamy, aged about 42 years. Defendant No. 18 & 20 are residing at Chikkaballi, Mandya Taluk, Mandya District-571 446. (21) Sri. P. Nandish, S/o Late Puttaswamy, aged about 46 years. (22) Smt. Roopa, D/o Late Puttaswamy, aged about 42 years. Defendant No. 21 & 22 are residing at Shivahalli Village, Mandya Taluk, Mandya District.

**SUMMONS TO APPEAR**

Whereas the above named Plaintiff has filed the above suit against the Defendants for the relief of Partition and separate possession of her 1/8th share in the property described in the schedule below.

You the Defendant No.1, 7, 8, 11 to 16, 18, 20 to 22 are hereby summoned to appear before this Court in persons or through a pleader duly instructed and able to answer all material questions relating to the above said suit or who shall be accompanied by some persons able to answer all such questions, on 26-9-2022 at 11.00 AM. In default of your appearance before the Court on the day aforementioned, the suit will be proceeded in your absence.

**SCHEDULE**

House property bearing Door No. 1409/5, D-1, 1409/6, 1409/7, 1409/8, 1409/9, 1409/10, 1409/11, 1409/12, consisting residential house, outhouse and 6 shops including vacant space and Hittalu, situated at Kotwal Ramaiah Street, Devaraja Mohalla, Mysuru City, measuring East-West: (66+39)/2 feet and North-South : (75+32)/2 feet, having bounded on the: East by: Gally ; West by: Road ; North by: Private Property ; South by: Road.

Given under my hand and seal of the Court on this the 25th Day of Aug. 2022.

**By order of the Court**
**Sd/- Chief Ministerial Officer,**
**Court of Senior Civil Judge and CJM, Mysuru.**

**Advocate for Plaintiff**
**Sd/- N.V. Kumararadhya, No. 2514/2C, CH-38, Kamakshi Hospital Road, Saraswathipuram, Mysuru-570 009**